
ಹಲ್ಮಿಡಿ ಶಾಸನ

ಒಂದು ಪರಿಚಯ

ಶ್ರೀವತ್ಸ ಎಸ್. ವಟಿ



ಕನ್ನಡ ಸಾಹಿತ್ಯ ಪರಿಷತ್ತು
ಚಾಮರಾಜಪೇಟೆ, ಬೆಂಗಳೂರು - ೧೮

ಶುಭವಾಗಲಿ

ಹಲ್ಮಿಡಿ ಶಾಸನ

(ಒಂದು ಪರಿಚಯ)

ಶ್ರೀವತ್ಸ ಎಸ್. ವಟಿ

ಕನ್ನಡ ಸಾಹಿತ್ಯ ಪರಿಷತ್ತು

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

HALMIDI SHASANA -- (A brief discription)
by : **srivatsa s. vati**
Published by: **Kannada Sahitya Parishat**
Pampa Mahakavi Road, Chamarajapet, Bangalore - 560018
Pages : 56+8 Price :25-00 ; Published: **2003**

ಪ್ರಥಮ ಮುದ್ರಣ : ೨೦೦೩
ಪ್ರತಿಗಳು : ೧೦೦೦
ಬೆಲೆ ರೂ. : ೨೫/-

ಸುವರ್ಣ ಸ್ವಾತಂತ್ರ್ಯೋತ್ಸವ ಮಾಲಿಕೆ

ಕರ್ನಾಟಕ ಸರ್ಕಾರದ ಸಹಾಯಧನದಿಂದ ಪ್ರಕಟಿತ

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಪುಸ್ತಕ ಪ್ರಕಟಣೆ ಯೋಜನೆಯ ಅಡಿಯಲ್ಲಿ ಒಂದೇ ಬಾರಿಗೆ ನೂರು ಪುಸ್ತಕಗಳನ್ನು ಪ್ರಕಟಿಸಬೇಕೆಂಬ ಆಶಯದಿಂದ ಕರ್ನಾಟಕ ಸರ್ಕಾರಕ್ಕೆ ಯೋಜನೆಯೊಂದನ್ನು ಅಂಗೀಕಾರಕ್ಕಾಗಿ ಕೊಟ್ಟಿತ್ತು. ಪರಿಷತ್ತಿನ ಈ ಅಮೂಲ್ಯ ಪ್ರಕಟಣೆಗಳ ಮಹತ್ವವನ್ನು ಮನಗಂಡ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಸ್.ಎಂ. ಕೃಷ್ಣ ಅವರು ತುಂಬು ಅಭಿಮಾನದಿಂದ ಉದಾರ ಧನಸಹಾಯ ಮಾಡಿರುತ್ತಾರೆ. ಅವರ ಔದಾರ್ಯದ ಫಲವಾಗಿ ಈ ಪುಸ್ತಕಗಳು ಬೆಳಕು ಕಾಣುತ್ತಿರುವುದಕ್ಕೆ ನಾವು ಕೃತಜ್ಞರಾಗಿದ್ದೇವೆ.

ಕನ್ನಡ ಸಾಹಿತ್ಯದಲ್ಲಿ ಕೃಷಿ ಮಾಡಿರುವ ಅನೇಕ ಮಹನೀಯರ ಅಲಭ್ಯ ಕೃತಿಗಳೂ ಸೇರಿದಂತೆ, ಸಾಹಿತ್ಯಾಭ್ಯಾಸಿಗಳಿಗೆ ಅಗತ್ಯವಾದ ಪುಸ್ತಕಗಳನ್ನು ಈ ಯೋಜನೆಯಲ್ಲಿ ಹೊರತರುವ ಪ್ರಯತ್ನ ನಮ್ಮದು. ಕನ್ನಡ ನಾಡಿನ ಜನತೆ ಈ ಪ್ರಯತ್ನಕ್ಕೆ ಸ್ಪಂದಿಸುತ್ತಾರೆಂದು ಆಶಿಸುತ್ತೇವೆ.

ಕನ್ನಡ ಸಾಹಿತ್ಯ ಪರಿಷತ್ತು ಪ್ರಸ್ತುತ ಮುದ್ರಣ ಮಾಡಿರುವ 'ಹಲ್ಮಿಡಿ ಶಾಸನ' ಎಂಬ ಈ ಕೃತಿಯು ಕರ್ನಾಟಕದ ಪ್ರಾಚೀನ ಇತಿಹಾಸ, ಭಾಷೆ, ಲಿಪಿಯ ಅಧ್ಯಯನಕ್ಕೆ ಸಹಕಾರಿಯಾಗಿದೆ. ವಿದ್ಯಾರ್ಥಿಗಳಿಗೆ ಸಂಶೋಧಕರಿಗೆ ಅಧ್ಯಯನಕ್ಕೆ ಪೂರಕವಾದ ಈ ಪುಟ್ಟ ಕೃತಿಯು ಹಲ್ಮಿಡಿ ಶಾಸನದಲ್ಲಿ ಬರುವ ಕದಂಬ ರಾಜವಂಶದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪ್ರಾಚೀನ ಇತಿಹಾಸವನ್ನು ತಿಳಿಸುವಲ್ಲಿ ಯಶಸ್ವಿಯಾಗಿದೆ. ಶಾಸನದಲ್ಲಿರುವ ಭಾಷಾವೈಖರಿ, ಕನ್ನಡ ಲಿಪಿಯ ಪ್ರಾಚೀನ ಸ್ವರೂಪ, ಬೆಳವಣಿಗೆ ಇವೆ ಮೊದಲಾದ ಮಹತ್ವದ ವಿವರಗಳನ್ನೊಳಗೊಂಡಿರುವ ಈ ಕೃತಿ ಶಾಸನಶಾಸ್ತ್ರ ಅಭ್ಯಾಸಿಗಳಿಗೆ ಕೈಪಿಡಿಗೆಯಾಗಿದೆ. ಕರ್ನಾಟಕದ ಹಾಸನ ಜಿಲ್ಲೆಯ ಬೇಲೂರಿನ ಸಮೀಪ 'ಹಲ್ಮಿಡಿ' ಎಂಬ ಗ್ರಾಮದಲ್ಲಿ ಸಿಕ್ಕಿರುವ 'ಹಲ್ಮಿಡಿ ಶಾಸನ' ಅತ್ಯಂತ ಪ್ರಾಚೀನ ಹಾಗೂ ಪ್ರಪ್ರಥಮವಾದ ಕನ್ನಡ ಶಾಸನವೆಂದು ತಜ್ಞರು ಪರಿಗಣಿಸಿದ್ದಾರೆ. ಆದರೆ ಆ ಬಗೆಗೂ ಭಿನ್ನಾಭಿಪ್ರಾಯಗಳಿವೆ. ಈ ಶಾಸನದ 'ನೆನಪಿನ ಮಂಟಪದ' ಸ್ಥಾಪನಾ ಮಹೋತ್ಸವದ ಸಮಾರಂಭದ ಸಂದರ್ಭದಲ್ಲಿ ಈ ಕೃತಿ ಬಿಡುಗಡೆಯಾಗುತ್ತಿರುವುದು ಅರ್ಥಪೂರ್ಣವಾಗಿದೆ. ಕನ್ನಡ ನಾಡು, ನುಡಿ, ಸಂಸ್ಕೃತಿ, ಇತಿಹಾಸಗಳ ಬಗ್ಗೆ ಅಭಿಮಾನಿ ಸಹೃದಯ ಕನ್ನಡಿಗರು, ವಿದ್ಯಾರ್ಥಿಗಳು, ಸಂಶೋಧಕರು, ಪ್ರೀತಿಯಿಂದ ಇದನ್ನು ಸ್ವಾಗತಿಸಿ ಉಪಯುಕ್ತ ಮಾಹಿತಿಯನ್ನು ಪಡೆಯುತ್ತಾರೆಂದು ಆಶಿಸುತ್ತೇನೆ.

ಈ ಪುಸ್ತಕವನ್ನು ಶ್ರಮವಹಿಸಿ ಸಿದ್ಧಪಡಿಸಿದ ಲೇಖಕರಾದ ಶ್ರೀ ಶ್ರೀವತ್ಸ ಎಸ್. ವಟಿ ಅವರಿಗೆ ಧನ್ಯವಾದಗಳು. ಪ್ರಕಟಣೆಗಾಗಿ ಆಯ್ಕೆಮಾಡಿರುವ ಪ್ರಕಟಣ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು. ಅಂದವಾಗಿ ಮುದ್ರಿಸಿರುವ ಬಿ. ಎಂ. ಶ್ರೀ ಅಚ್ಚುಕೂಟದ ನೌಕರರಿಗೆ ಅಭಿನಂದನೆಗಳು

ಧರ್ಮದರ್ಶಿ ಹರಿಕೃಷ್ಣಪುನರೂರು

ಅಧ್ಯಕ್ಷರು

ನೇಪಥ್ಯದಲ್ಲಿ

ಹಲ್ಮಿಡಿ ಶಾಸನದ ಸ್ಥೂಲ ಪರಿಚಯ ನನಗಾದದ್ದು ಸುಮಾರು 25 ವರ್ಷಗಳ ಹಿಂದೆ. ಆಗಿನಿಂದಲೂ ಈ ಶಾಸನದ ಬಗ್ಗೆ ಕುತೂಹಲ-ಮಮಕಾರಗಳು ಮೊಳೆತವು. 1983ರಲ್ಲಿ ಮಹಾರಾಷ್ಟ್ರದ ಗುಹಾಂತರ್ಗತ ದೇವಾಲಯಗಳ ಅಧ್ಯಯನಕ್ಕಾಗಿ ಔರಂಗಾಬಾದ್‌ನಲ್ಲಿ ಒಂದು ತಿಂಗಳು ತಂಗಿದ್ದಾಗ, ಅಲ್ಲಿ ಪುರಾತತ್ವ ಇಲಾಖೆಯ ಅಧಿಕಾರಿಯಾಗಿದ್ದ ನನ್ನ ಮಿತ್ರ ಶ್ರೀ ಟಿ.ಎಂ. ಕೇಶವರಿಂದ ಅಶೋಕನ ಬ್ರಾಹ್ಮೀಲಿಪಿಯ ವರ್ಣಮಾಲೆಯನ್ನು ಕಲಿತು, ಪತ್ರವ್ಯವಹಾರ ಮಾಡುವಷ್ಟು ರೂಢಿಸಿಕೊಂಡೆ. ನಂತರ ಬ್ರಾಹ್ಮಿಯ ವಿವಿಧ ಪ್ರಕಾರಗಳು, ಮುಖ್ಯವಾಗಿ ಕದಂಬಶೈಲಿಯ ಬ್ರಾಹ್ಮೀ ಲಿಪಿಯನ್ನು ಅಧ್ಯಯನ ಮಾಡತೊಡಗಿದಂತೆ ಹಲ್ಮಿಡಿ ಶಾಸನದ ಭಾಷಾತ್ಮಕ ವಿವಾದಗಳು, ಲಿಪ್ಯಾತ್ಮಕ ವೈಶಿಷ್ಟ್ಯಗಳು ನನ್ನನ್ನು ಆಕರ್ಷಿಸತೊಡಗಿದವು. ಮುಂದೆ ಹಲ್ಮಿಡಿ ಶಾಸನವನ್ನೇ ಕುರಿತಂತೆ ಎಂ.ಫಿಲ್. ಪದವಿಗಾಗಿ ಅಧ್ಯಯನ ನಡೆಸಲು ಸಂಕಲ್ಪಿಸಿದೆನಾದರೂ, ನೇರವಾಗಿ ಬೇರೊಂದು ವಿಷಯದಲ್ಲಿ ಪಿಹೆಚ್.ಡಿ. ಪದವಿಗಾಗಿ ಸಂಶೋಧನೆ ನಡೆಸುವ ಅವಕಾಶ ದೊರೆತದ್ದರಿಂದ, ಈ ಕಾರ್ಯ ಸ್ಥಗಿತಗೊಂಡಿತ್ತು.

ಕ.ಸಾ.ಪ ದ ಹಾಸನ ಜಿಲ್ಲಾಧ್ಯಕ್ಷರಾದ ಶ್ರೀ ಎಚ್.ಬಿ. ಮದನಗೌಡರು ಹಲ್ಮಿಡಿಯಲ್ಲಿ ಶಾಸನದ ನೆನಪಿನ ಮಂಟಪವೊಂದನ್ನು ನಿರ್ಮಿಸುವ ಮಹೋದ್ದೇಶ ಹೊಂದಿ, ಅದಕ್ಕಾಗಿ ವಿನ್ಯಾಸವನ್ನು ಸಿದ್ಧಪಡಿಸಲು ನನ್ನನ್ನು ಆಹ್ವಾನಿಸಿದರು ಹಾಗೂ ಹಲ್ಮಿಡಿ ಶಾಸನದ ವೈಶಿಷ್ಟ್ಯವನ್ನು ಕುರಿತು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾಗಿ ಪುಸ್ತಕವೊಂದನ್ನು ರಚಿಸಿಕೊಡುವಂತೆ ಕೋರಿದರು. ಅದರಂತೆ ಹೆಚ್ಚು ವಿವಾದಾತ್ಮಕ ಅಂಶಗಳಿಲ್ಲದೆ ಸರಳವಾಗಿರುವಂತೆ ಹಾಗೂ ಹಲ್ಮಿಡಿ ಗ್ರಾಮ, ಇತಿಹಾಸ ಮತ್ತು ಶಾಸನವನ್ನು ಕುರಿತಂತೆ ಈ ಗ್ರಂಥವನ್ನು ರೂಪಿಸಿದ್ದೇನೆ. ವಿವಿಧ ಸಮಾರಂಭಗಳಲ್ಲಿ ಇದರ ಹಸ್ತಪ್ರತಿಯನ್ನು ಗಮನಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ ಶ್ರೀಮತಿ ರಾಣಿ ಸತೀಶ್‌ರವರೂ, ಅಂದಿನ ಹಾಸನ ಜಿಲ್ಲಾಧಿಕಾರಿ ಶ್ರೀ ಕನೀರಾಂರವರೂ, ಮೆಚ್ಚುಗೆ ಸೂಚಿಸಿದ್ದರು.

ಹಲ್ಮಿಡಿ ಶಾಸನದ ನೆನಪಿನಮಂಟಪದ ಶಿಲಾನ್ಯಾಸ ಸಂದರ್ಭದಲ್ಲಿ ಕ.ಸಾ.ಪ.ದ ಅಧ್ಯಕ್ಷರಾದ ಶ್ರೀಯುತ ಧರ್ಮದರ್ಶಿ ಹರಿಕೃಷ್ಣ ಪುನರೂರುರವರು ಮತ್ತು ಕ.ಸಾ.ಪ.ದ

ಗೌ॥ ಕೋಶಾಧ್ಯಕ್ಷರಾದ ಶ್ರೀಯುತ ಡಾ॥ ನಲ್ಲೂರು ಪ್ರಸಾದ್‌ರವರು ಈ ಪುಸ್ತಕವನ್ನು ಕ.ಸಾ.ಪ.ದ ಕೇಂದ್ರಕಚೇರಿಯ ಪ್ರಕಟಣಾ ವಿಭಾಗದಿಂದ ಪ್ರಕಟಿಸಲು ಆಯೋಜಿಸಿದರು.

ಹಲ್ಮಿಡಿ ಶಾಸನದ ಬಗ್ಗೆ ಅನೇಕ ಚಿಂತನೆಗಳು, ವಾದ-ವಿವಾದಗಳು, ವಿದ್ವತ್ಪೂರ್ಣ ಸಂಶೋಧನೆಗಳು ಪ್ರಕಟಗೊಂಡಿವೆ. ಆದರೆ ಹಲ್ಮಿಡಿಗ್ರಾಮ, ಇತಿಹಾಸ, ರಾಜವಂಶ, ರಾಜಕೀಯ, ಶಾಸನಪರಿಚಯ ಇತ್ಯಾದಿ ಎಲ್ಲ ವಿಚಾರಗಳನ್ನು ಏಕತ್ರಗೊಳಿಸಿ, ಜನಸಾಮಾನ್ಯರಿಗೆ ಒಂದೇ ಕಡೆ ಸಮಗ್ರ ಪರಿಚಯ ನೀಡಬಲ್ಲ ಸರ್ವತೋಮುಖ ಅಧ್ಯಯನ ಗ್ರಂಥವೊಂದು ಪ್ರಕಟವಾದಂತಿಲ್ಲ. ಈ ದೃಷ್ಟಿಯಿಂದ ಈ ಪುಟ್ಟ ಪುಸ್ತಕವು ಒಂದು ನೂತನ ಪ್ರಯೋಗವೆಂಬ ಭಾವನೆ ನನಗಿದೆ.

ಹಲ್ಮಿಡಿ ಶಾಸನ ಹಾಗೂ ಕನ್ನಡ ಭಾಷೆಯ ಬಗ್ಗೆ ಕ.ಸಾ.ಪ. ಕಾರ್ಯಕ್ರಮಗಳಲ್ಲಿ ವಿಚಾರ ಮಂಡನೆ, ಟೀಚರ್ಸ್ ಕ್ಲಸ್ಟರ್ ಕಾರ್ಯಕ್ರಮಗಳಲ್ಲಿ ಉಪನ್ಯಾಸ, ಕನ್ನಡರತ್ನ, ಎಂ.ಎ, ಮುಂತಾದ ವಿದ್ಯಾರ್ಥಿಗಳಿಗಾಗಿ ಬೋಧನೆ ಹೀಗೆ ನಾನಾ ಕಡೆಗಳಲ್ಲಿ ನನಗೆ ಎದುರಾದ ಪ್ರಶ್ನೆಗಳಿಗೆ ಇಲ್ಲಿ ಉತ್ತರ ನೀಡಲು ಯತ್ನಿಸಿದ್ದೇನೆ. ಇಷ್ಟಾದರೂ ಇದು ಸರಳ ಪರಿಚಯಾತ್ಮಕ ಗ್ರಂಥವಾಗಿರುವುದರಿಂದ ಹೆಚ್ಚಿನ ವಾದ-ವಿವಾದಗಳ ಹಿನ್ನೆಲೆಯುಳ್ಳ ಪದವಿಶೇಷಗಳನ್ನು, ಅವಕ್ಕೆ ನೀಡಬಹುದಾದ ಅರ್ಥವಿಶೇಷಗಳನ್ನು, ನಾನೇ ಹೊಸದಾಗಿ ಊಹಿಸಿಕೊಂಡಿರುವ ಹೊಸ ಅರ್ಥಗಳನ್ನು ಚರ್ಚಿಸಲು ಇಲ್ಲಿ ಅವಕಾಶವಾಗಿಲ್ಲ. ಹಾಗಾಗಿ ಅದಕ್ಕಾಗಿ ಮುಂದೆ ಬೇರೊಂದು ಪ್ರಯತ್ನ ನಡೆಸುತ್ತೇನೆ. ಸಾಮಾನ್ಯ ಓದುಗರಿಗೆ ಹಲ್ಮಿಡಿ ಶಾಸನದ ಪರಿಚಯವನ್ನು ಸ್ಪಷ್ಟವಾಗಿ ನೀಡಲು ಈ ಪುಸ್ತಕ ಉಪಯುಕ್ತವಾದಲ್ಲಿ ನನ್ನ ಪ್ರಯತ್ನ ಸಾರ್ಥಕವಾಯಿತೆಂದು ಭಾವಿಸುತ್ತೇನೆ.

ಈ ಪುಸ್ತಕವನ್ನು ಬರೆಯಲು ಪ್ರೇರಣೆ ನೀಡಿದ ಶ್ರೀ ಎಚ್.ಬಿ. ಮದನಗೌಡರು, ಕ.ಸಾ.ಪ. ಹಾಸನ ಜಿಲ್ಲಾಧ್ಯಕ್ಷರು -ಇವರಿಗೂ, ಕಡಿಮೆ ದರದಲ್ಲಿ ಹೆಚ್ಚು ಜನರಿಗೆ ಈ ಪುಸ್ತಕವು ತಲುಪುವಂತೆ ತಾವೇ ಪ್ರಕಟಣೆಯ ಹೊಣೆಹೊತ್ತು ಪ್ರೋತ್ಸಾಹಿಸಿದ ಶ್ರೀ ಹರಿಕೃಷ್ಣ ಪುನರೂರು -ಕೇಂದ್ರಾಧ್ಯಕ್ಷರು, ಕ.ಸಾ.ಪ. ಬೆಂಗಳೂರು, ಡಾ॥ ನಲ್ಲೂರುಪ್ರಸಾದ್ ಗೌ॥ ಕೋಶಾಧ್ಯಕ್ಷರು ಕ.ಸಾ.ಪ. ಬೆಂಗಳೂರು ಇವರುಗಳಿಗೂ, ಪ್ರಕಟಿಸಿದ ಕ.ಸಾ.ಪ. ಕೇಂದ್ರ ಕಚೇರಿ, ಪ್ರಕಟಣಾ ವಿಭಾಗ, ಅಲ್ಲಿನ ಸಿಬ್ಬಂದಿ ಇವರೆಲ್ಲರಿಗೂ ನಾನು ಕೃತಜ್ಞನಾಗಿದ್ದೇನೆ.

ನನ್ನೆಲ್ಲ ಸಾಹಿತ್ಯಾತ್ಮಕ ಕಾರ್ಯಗಳಿಗೆ ಗಂಗೋತ್ರಿ ಸ್ವರೂಪರೂ, ನನ್ನ ಬರಹಗಳ ಮೊದಲ ಓದುಗ-ವಿಮರ್ಶಕರೂ ಆಗಿರುವ ನನ್ನ ಓರೆಕೋರೆಗಳನ್ನು ತಿದ್ದುವ ನನ್ನ ತಂದೆ ಪಂಡಿತ್ ಎಂ. ಸೀತಾರಾಮಯ್ಯ (ಸೀತಾರಾಂ ವಟಿ)ನವರಿಗೂ, ನನ್ನ ತಾಯಿ

ಶ್ರೀಮತಿ ಗಂಗಮ್ಮನವರಿಗೂ ನನ್ನ ಪ್ರಣಾಮಗಳು. ನನ್ನ ಸಂಶೋಧನೆ - ಲೇಖನ ಕಾರ್ಯಗಳಲ್ಲಿ ಸರ್ವಸಹಕಾರ ನೀಡುವ ನನ್ನ ಪತ್ನಿ ಶ್ರೀಮತಿ ನವರತ್ನ ಎಸ್. ವಟಿ ಮತ್ತು ಮಕ್ಕಳು ಕಾವ್ಯಶ್ರೀ, ದಿವ್ಯಶ್ರೀಯವರಿಗೂ ಕೃತಜ್ಞತೆಗಳು.

ಹಲ್ಮಿಡಿ ಶಾಸನದ ನೆನಪಿನ ಮಂಟಪದ ನಿರ್ಮಾಣದಂತಹ ಐತಿಹಾಸಿಕ ಕಾರ್ಯವನ್ನು ಕೈಗೊಂಡು ಸ್ತುತ್ಯರಾಗಿರುವ ಶ್ರೀ ಎಚ್.ಬಿ. ಮದನಗೌಡರು ಅದರ ವಿನ್ಯಾಸವನ್ನು ಮಾಡಿಕೊಡಲು ನನ್ನನ್ನು ಆಯ್ಕೆಮಾಡಿದುದಲ್ಲದೆ, ನಾನು ರೂಪಿಸಿದ ವಿನ್ಯಾಸವನ್ನು ಸರ್ವರೂ ಮೆಚ್ಚುಗೆಯಿಂದ ಸ್ವೀಕರಿಸಿ ಶ್ಲಾಘಿಸಿದ್ದಾರೆ. ಇದಕ್ಕಾಗಿ ಎಲ್ಲರಿಗೂ ನನ್ನ ಕೃತಜ್ಞತೆಗಳು. ನೆನಪಿನ ಮಂಟಪದಲ್ಲಿ ಹಲ್ಮಿಡಿ ಶಾಸನದ ಪ್ರತಿಕೃತಿಯನ್ನೇ ನಿಲ್ಲಿಸಲು ನಾವು ಯೋಜಿಸಿದಂತೆ, ಅದಕ್ಕೆ ಶಾಸನದ ಪಡಿಯಚ್ಚಾದ ಪ್ರತಿಕೃತಿಯನ್ನೇ ನಿರ್ಮಿಸಿಕೊಟ್ಟ ಪುರಾತತ್ವ ಇಲಾಖೆಗೂ, ಅದರ ಛಾಯಾಗ್ರಹಣಾದಿ ಕಾರ್ಯಗಳಿಗೆ ಸಹಕರಿಸಿದ ಬೆಂಗಳೂರಿನ ಸರ್ಕಾರಿ ಮ್ಯೂಸಿಯಂನ ಅಧಿಕಾರಿಗಳು, ಮುಖ್ಯತಃ ಶ್ರೀ ಚಿಕ್ಕಮಾರೇಗೌಡರು ಸ|| ನಿರ್ದೇಶಕರು ಇವರಿಗೂ ನನ್ನ ಕೃತಜ್ಞತೆಗಳು. ಶಾಸನವು ಬೆಳಕಿಗೆ ಬಂದಂದಿನಿಂದ ಅದರ ಬಗ್ಗೆ ವಿಚಾರಾತ್ಮಕ ಚಿಂತನೆ ನಡೆಸಿ ಬೆಳಕು ಚೆಲ್ಲಿರುವ ವಿದ್ವಾಂಸರುಗಳಿಗೆ ನನ್ನ ವಂದನೆಗಳು.

ಹಲ್ಮಿಡಿ ಶಾಸನದ ಸಾಹಿತ್ಯ ಮತ್ತು ಶಿಲ್ಪಕಾರ್ಯಗಳ ಮೂಲಕ ಭಾಷಾಜಗತ್ತಿಗೆ ಅಮೂಲ್ಯ ಕೊಡುಗೆಯನ್ನಿತ್ತಿರುವ ಕದಂಬಕಾಲೀನ ಕವಿ-ಲಿಪಿಕಾರ -ರೂವಾರಿಗಳಾದ ಅಜ್ಞಾತ ಕಲಾವಿದರಿಗೆ ಈ ಪುಸ್ತಕವನ್ನು ಅರ್ಪಿಸುತ್ತೇನೆ.

- ಶ್ರೀವತ್ಸ ಎಸ್. ವಟಿ

ವಟೀ ಕುಟೀರ

ದಮಯಂತಿ ಹೊಂಡದ ಬೀದಿ

ಬೇಲೂರು-573115

ಹಾಸನ ಜಿಲ್ಲೆ

ಬೇಲೂರು

ಪರಿವಿಡಿ

ಚಿತ್ರಗಳು

ಅಧ್ಯಾಯ-೧

ಪ್ರಸ್ತಾವನೆ

'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು' ಎಂಬ ಗಾದೆಗೆ ನಮ್ಮ ಕರ್ನಾಟಕದ ಹಲ್ಮಿಡಿಯ ಶಾಸನವೇ ಪ್ರತೀಕವಾಗಿದೆ. ''ಹಲ್ಮಿಡಿ ಶಾಸನ'' ಎಂದೇ ಜನಪ್ರಿಯವಾದ ಈ ಪುಟ್ಟ ಶಿಲಾಶಾಸನವು ಪ್ರತಿಯೊಬ್ಬ ಶಾಸನಶಾಸ್ತ್ರದ ವಿದ್ಯಾರ್ಥಿಗೆ, ಕನ್ನಡ ಭಾಷಾಶಾಸ್ತ್ರದ ವಿದ್ಯಾರ್ಥಿಗೆ, ಲಿಪಿಶಾಸ್ತ್ರದ ವಿದ್ಯಾರ್ಥಿಗೆ ಅನಿವಾರ್ಯ ಪಠ್ಯವಾಗಿದೆ. ಕರ್ನಾಟಕದ ಇತಿಹಾಸ, ದ್ರಾವಿಡ ಭಾಷಾವಿಜ್ಞಾನ, ಭಾರತೀಯ ಲಿಪಿಗಳ ಉಗಮ-ಬೆಳವಣಿಗೆ ಮುಂತಾದ ಅಧ್ಯಯನಗಳಲ್ಲಿಯೂ ಹಲ್ಮಿಡಿ ಶಾಸನವು ಉದಾಹರಿಸಲ್ಪಡುತ್ತದೆ. ಕನ್ನಡ ಭಾಷೆ, ಲಿಪಿ ಮತ್ತು ಇತಿಹಾಸವನ್ನು ಕುರಿತ ಅಧ್ಯಯನ, ಸಂಪ್ರಬಂಧ, ಪ್ರೌಢ ಪ್ರಬಂಧಗಳಲ್ಲಿ ಹಲ್ಮಿಡಿ ಶಾಸನದ ಉಲ್ಲೇಖವಿರಲೇಬೇಕಾಗುತ್ತದೆ.

ಈ ಪುಟಾಣಿ ಶಾಸನವನ್ನು ಕುರಿತಂತೆ ಕನ್ನಡದ ಮಹಾ ಪಂಡಿತರುಗಳೂ, ಅನ್ವೇಷಕರೂ, ಸಂಶೋಧಕರೂ ಮಹತ್ವಪೂರ್ಣವಾದ ಪ್ರೌಢಚಿಂತನೆಗಳನ್ನು ನಡೆಸಿದ್ದಾರೆ. ಶ್ರೀಯುತರುಗಳಾದ ಎಂ.ಹೆಚ್. ಕೃಷ್ಣ, ಗೋವಿಂದ ಪೈ, ಟಿ.ವಿ. ವೆಂಕಟಾಚಲಶಾಸ್ತ್ರಿ, ಚಿದಾನಂದಮೂರ್ತಿ, ಆರ್.ಎಸ್. ಪಂಚಮುಖಿ, ಡಿ.ಎಲ್. ನರಸಿಂಹಾಚಾರ್, ರಂ.ಶ್ರೀ. ಮುಗಳಿ, ಎಂ.ಎಂ. ಕಲ್ಬುರ್ಗಿ ಇತ್ಯಾದಿ ಪಂಡಿತರುಗಳು ಈ ಶಾಸನದ ಪ್ರಮುಖ ಅಂಶಗಳನ್ನು ಕುರಿತು ಆಳವಾಗಿ ಸಮೀಕ್ಷಿಸಿದ್ದಾರೆ. ಒಂದೊಂದು ಪದವನ್ನೂ ಕುರಿತಂತೆ ಲೇಖನಗಳೇ ರಚಿತವಾಗಿವೆ. ಕೆಲವು ಪದಗಳ ಅರ್ಥವಿಶೇಷಗಳೇ ಅರ್ಥಸ್ಪಷ್ಟೀಕರಣ ಪಡೆಯದೆ ಆ ಬಗ್ಗೆ ವಾದವಿವಾದಗಳಾಗಿವೆ. ಜಿಜ್ಞಾಸೆ ನಡೆದಿದೆ. ಅಂತೂ ಕನ್ನಡದ ಚಿಂತಕರ ಚಿಂತನೆಯನ್ನು ಕೆದಕುತ್ತಾ, ನೂತನ ವಿಷಯಗಳಿಗೆ ಗ್ರಾಸವಾಗುತ್ತಾ ನಡೆದಿರುವ ಈ ಶಾಸನದ ಬಗ್ಗೆ ಪ್ರಬುದ್ಧ ಕರ್ನಾಟಕ, ಮಾನವಿಕ ಕರ್ನಾಟಕ, ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಕನ್ನಡ ನುಡಿ ಮುಂತಾದ ಪ್ರಬುದ್ಧ ಸಾಹಿತ್ಯಕ ನಿಯತಕಾಲಿಕಗಳು ಪಾಂಡಿತ್ಯಪೂರ್ಣ ಲೇಖನಗಳನ್ನು ಪ್ರಕಟಿಸಿವೆ.

ಶ್ರೀಯುತರುಗಳಾದ ಎಸ್. ಶ್ರೀಕಂಠಶಾಸ್ತ್ರಿ, ಟಿ.ಎ. ಗೋಪೀನಾಥರಾವ್, ಟಿ.ಎನ್. ಶ್ರೀಕಂಠಯ್ಯ, ಎಸ್. ನಾಗರಾಜು, ಎಂ. ಮರಿಯಪ್ಪಭಟ್ಟ, ಕೆ.ವಿ. ರಮೇಶ್, ಕೆ. ಶಿವರಾಮ ಐತಾಳ, ಎಂ. ಹನುಮಂತರಾವ್, ಎಂ.ಬಿ. ನೇಗಿನಹಾಳ, ಜಿ.ಎಸ್.

ಗಾಯಿ, ದೇವರಕೊಂಡಾರೆಡ್ಡಿ ಮುಂತಾದ ಲೇಖಕರು ತಮ್ಮ ತಮ್ಮ ಗ್ರಂಥಗಳಲ್ಲಿ - ಲೇಖನಗಳಲ್ಲಿ ಈ ಶಾಸನದ ಪ್ರಮುಖ ಅಂಶಗಳನ್ನು ಕುರಿತು ಚರ್ಚಿಸಿದ್ದಾರೆ. ಕರ್ನಾಟಕದ ಶಾಸನಗಳ ಜನಪ್ರಿಯ ಸಂಗ್ರಹವಾದ 'ಎಪಿಗ್ರಾಫಿಯ ಕರ್ನಾಟಿಕ'ದ ಬೇಲೂರು ತಾಲೂಕಿನ ಶಾಸನಗಳ ಸಂಪುಟ - 9ರ ಪೀಠಿಕೆಯ ಮುಖ್ಯಭಾಗವು ಹಲ್ಮಿಡಿ ಶಾಸನವನ್ನೇ ಕುರಿತು ಚರ್ಚಿಸಿದೆ. ಈ ರೀತಿ ಹಲ್ಮಿಡಿ ಶಾಸನವು ಕಂಡುಹಿಡಿಯಲ್ಪಟ್ಟ ದಿನದಿಂದ ಇಂದಿನವರೆಗೆ, ನಾನಾ ಸ್ವರೂಪಗಳಲ್ಲಿ ಪಂಡಿತರಿಂದ ಚರ್ಚೆಗೆ ಒಳಗಾಗುತ್ತಲೇ ಇದೆ. ಈ ಹಿನ್ನೆಲೆಯಲ್ಲಿ ಸಂಗ್ರಹಿತವಾಗಿರುವ ವಿಚಾರಗಳು, ನೂತನ ಅಂಶಗಳು ಮತ್ತು ಅವುಗಳ ವಿಶ್ಲೇಷಣಾತ್ಮಕ ಸಮೀಕ್ಷೆಯಿಂದ ಹೊರಬಂದಿರುವ ಐತಿಹಾಸಿಕ, ಭಾಷಾತ್ಮಕ ವಿವರಗಳು -ಇವೆಲ್ಲವನ್ನೂ ಸಮಗ್ರವಾಗಿ ಚಿತ್ರಿಸಲು ಒಂದು ಮಹಾಗ್ರಂಥವೇ ಅಗತ್ಯವಾಗುತ್ತದೆ. ಆ ಸಂಶೋಧನೆಗಳು, ವಾದ-ವಿವಾದಗಳು ಮುಂತಾದುವುಗಳಿಂದ ಸಕಾರಾತ್ಮಕವಾದ ವಿಷಯಗಳನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿಕೊಡುವುದರೊಂದಿಗೆ ಹಲ್ಮಿಡಿ ಗ್ರಾಮದ ಪರಿಚಯ, ಹಲ್ಮಿಡಿ ಶಾಸನದ ಆಕಾರ-ಸ್ವರೂಪಗಳ ವಿವರ, ಶಾಸನವನ್ನು ಹಾಕಿಸಿದ ರಾಜವಂಶ ಹಾಗೂ ಶಾಸನೋಕ್ತ ವಿವರಗಳಲ್ಲಿ ಅಡಗಿರುವ ಪುರಾತನ ರಾಜವಂಶಗಳ ಸಮೀಕ್ಷೆ, ಶಾಸನದ ಭಾಷೆ, ಲಿಪಿ, ಶಾಸನೋಕ್ತ ಸಾಹಿತ್ಯದ ಆಶಯ, ಅದರ ಅರ್ಥ, ಇವುಗಳನ್ನು ಈ ಪುಟ್ಟಪುಸ್ತಕದಲ್ಲಿ ಚರ್ಚಿಸಲಾಗಿದೆ.

ಇಂತಹ ಸಮೀಕ್ಷೆಯಿಂದ ಹಲ್ಮಿಡಿ ಶಾಸನದ ಸರ್ವತೋಮುಖ ಪರಿಚಯವಾಗುವುದು ಮಾತ್ರವಲ್ಲ-ಸುಮಾರು ಒಂದೂವರೆ ಸಾವಿರ ವರ್ಷಗಳಷ್ಟು ಹಿಂದೆ ಈ ಕನ್ನಡನೆಲದಲ್ಲಿ ನಡೆದ ರಾಜಕೀಯ ಆಗುಹೋಗುಗಳು, ಕೆಲವು ಯುದ್ಧಗಳು, ಅದಕ್ಕೆ ಕಾರಣೀಭೂತರಾದ ಹಲವು ರಾಜವಂಶಗಳು, ಅವುಗಳ ನಡುವಣ ಶತ್ರು-ಮಿತ್ರಸಂಬಂಧ ಯುದ್ಧವೀರರಿಗೆ ಸಲ್ಲುತ್ತಿದ್ದ ಗೌರವ, ದಾನ ನೀಡುವ ಆಚರಣೆ ಮತ್ತು ಅದರ ರಕ್ಷಣೆ, ಆಡಳಿತಾತ್ಮಕ ಸೌಕರ್ಯಕ್ಕಾಗಿ ಮಾಡಿಕೊಂಡ ಭೌಗೋಳಿಕ ವಿಭಾಗಗಳು, ರಾಜ್ಯಾಡಳಿತ ಪದ್ಧತಿ, ರಾಜನ ಅಧಿಕಾರಿಗಳು, ಕಂದಾಯಕ್ರಮ, ಜನಜೀವನ ಶೈಲಿ, ಸಂಸ್ಕೃತಿ, ಸಾಮಾಜಿಕ ಪದ್ಧತಿಗಳು ಹೀಗೆ ಇತಿಹಾಸ, ಸಮಾಜ ವಿಜ್ಞಾನಾದಿ ಮಾನವಿಕ ಶಾಸ್ತ್ರಗಳಿಗೆ ಸಂಬಂಧಿಸಿದ ಅನೇಕ ಅಂಶಗಳು ನೇರವಾಗಿ ಅಲ್ಲದಿದ್ದರೂ ಪರೋಕ್ಷವಾಗಿ ಸಿಗುತ್ತವೆ.

ಭಾಷಾವಿಜ್ಞಾನಕ್ಕಂತೂ ಹಲ್ಮಿಡಿಶಾಸನದ ಕೊಡುಗೆ ಅತ್ಯಂತ ಮಹತ್ತರವಾದದ್ದು. 15 ಶತಮಾನಗಳ ಹಿಂದೆ ಇದ್ದ ಕನ್ನಡ ಭಾಷೆಯ ಅಸ್ತಿತ್ವ, ಅದರ ಭಾಷಾನಿರ್ವಹಣಕ್ರಮ, ವ್ಯಾಕರಣ-ಅಲಂಕಾರ ಇವುಗಳ ಬಳಕೆ, ಕನ್ನಡದ ಮೇಲೆ

ಸಂಸ್ಕೃತ ಭಾಷೆಯ ಪ್ರಭಾವ ಇತ್ಯಾದಿ ಭಾಷಿಕ ಸ್ವರೂಪದ ವಿವರಗಳೂ, ಹಾಗೂ ಲಿಪಿಯ ಸ್ವರೂಪ, ಲೇಖನಕ್ರಮ ಇತ್ಯಾದಿ ಕನ್ನಡ ಲಿಪಿಯ ಅತಿ ಪ್ರಾಚೀನ ಸ್ವರೂಪದ ಅನೇಕ ವಿವರಗಳು ಈ ಶಾಸನದ ಸರ್ವತೋಮುಖ ಅಧ್ಯಯನದಿಂದ ನಮಗೆ ದೊರೆಯುತ್ತವೆ. ಈ ದೃಷ್ಟಿಯಿಂದ ಹಲ್ಮಿಡಿ ಶಾಸನವು ಇಲ್ಲಿಗೆ ಒಂದೂವರೆ ಸಾವಿರ ವರ್ಷಗಳ ಹಿಂದಿನ ಕನ್ನಡ ನಾಡು ಮತ್ತು ನುಡಿಗಳ ಜೀವಂತ ಪ್ರತೀಕವಾಗಿದೆ.

ಈ ಶಾಸನದ ಪದಪದವನ್ನೂ ಕುತೂಹಲ ಮತ್ತು ಚಿಕಿತ್ಸಕ ಬುದ್ಧಿಯಿಂದ ಪರಿಶೀಲಿಸಿರುವ ಪ್ರಾಜ್ಞರು ಒಂದೆಡೆಯಾದರೆ, ''ಹಲ್ಮಿಡಿ ಶಾಸನವೆಂದರೇನು ? ಅದರ ಸ್ವರೂಪ - ಆಶಯಗಳೇನು ?'' ಎಂಬುದನ್ನೇ ಅರಿಯದವರೂ ಇನ್ನೊಂದೆಡೆ ಇದ್ದಾರಷ್ಟೆ ! ಜತೆಗೇ ಶಾಸನದ ಬಗ್ಗೆ ತಿಳಿದರೂ ಅದರ ಮಹತ್ವ-ಗುರುತ್ವವನ್ನೇ ಪರಿಚಯಿಸಿಕೊಳ್ಳದ ಜನರೂ ಉಂಟು. ಆದುದರಿಂದ ಈ ಪುಟ್ಟ ಶಾಸನದ ಎಲ್ಲ ಮುಖಗಳನ್ನು ಪರಿಶೀಲಿಸುತ್ತಾ ಒಟ್ಟಾರೆ ಇದರ ಸರ್ವತೋಮುಖ ಪರಿಚಯವನ್ನು ಸಂಕ್ಷಿಪ್ತವಾಗಿ ಮಾಡಿಕೊಡುವುದು ಈ ಪುಸ್ತಕದ ಉದ್ದಿಶ್ಯ. ಇದಕ್ಕಾಗಿ ಅಗತ್ಯವಿದ್ದೆಡೆ ಬೇರೆ ಬೇರೆ ಲೇಖಕರು - ಸಂಶೋಧಕರ ವಿಚಾರಗಳನ್ನು ಸಹ ಇಲ್ಲಿ ನೇರವಾಗಿಯೂ, ತೌಲನಿಕವಾಗಿಯೂ ಬಳಸಲಾಗಿದೆ.

ಈ ಶಾಸನೋಕ್ತ ಸಾಹಿತ್ಯದಲ್ಲಿ ಅರ್ಥಸ್ಪಷ್ಟತೆಯನ್ನು ಪಡೆಯದ ಅನೇಕ ಪದಗಳಿವೆ. ಶಾಸನ ಸಾಹಿತ್ಯವು ಹೆಚ್ಚು ಸ್ಪಷ್ಟ ಮತ್ತು ಅರ್ಥವತ್ತಾಗಿ ಮನದಟ್ಟಾಗಲಿ ಎಂಬುದು ಇಲ್ಲಿನ ಆಶಯ.

ಅಧ್ಯಾಯ-೨

ಹಲ್ಮಿಡಿ ಗ್ರಾಮದ ಪರಿಚಯ

'ಹಲ್ಮಿಡಿ' ಒಂದು ಪುಟ್ಟಗ್ರಾಮ. ಸುಮಾರು 300 ಮನೆಗಳು 1200 ಜನವಸತಿಯುಳ್ಳ, ಇನ್ನೂ ನಾಗರಿಕ ಸವಲತ್ತುಗಳು ತಲಪದೇ ಇರುವ ಗ್ರಾಮ. ಹಾಸನ ಜಿಲ್ಲೆಯ ಉತ್ತರ ತುದಿಯು ಚಿಕ್ಕಮಗಳೂರು ಜಿಲ್ಲೆಯ ಜತೆ ಸೇರುವ ಗಡಿಭಾಗದಲ್ಲಿ ಅಂದರೆ ಬೇಲೂರು ತಾಲ್ಲೂಕಿನ ಉತ್ತರಭಾಗದ ಕೊನೆಯಲ್ಲಿ ಈ ಊರು ನೆಲೆಸಿದೆ. ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಜನಜೀವನಕ್ಕೆ ಯೋಗ್ಯವಾಗಿ, ಕೆರೆಕಟ್ಟೆಗಳಿಂದ ಕೂಡಿ ವ್ಯವಸಾಯಯೋಗ್ಯ ಗದ್ದೆಗಳು ರೂಪುಗೊಂಡು ರಾಜನಿಗೆ ಕಂದಾಯ ಕೊಡುವಷ್ಟು ಮಟ್ಟಿಗೆ ಆಗಲೇ ಈ ಹಳ್ಳಿ ಬೆಳೆದಿತ್ತು.

ಸ್ಥಳನಾಮ :

ಶಾಸನದಲ್ಲಿ ಹಲ್ಮಿಡಿಯನ್ನು 'ಪಲ್ಮಡಿ' ಎಂದು ಕರೆಯಲಾಗಿದೆ. ಒಂದೂವರೆ ಸಾವಿರ ವರ್ಷಗಳ ಹಿಂದೆ ಈ ಊರನ್ನು ಹಾಗೆ ಕರೆಯುತ್ತಿದ್ದರು ಎಂಬುದು ಸ್ಪಷ್ಟ. ಆದರೆ ಇಂದಿನ ಕಂದಾಯ ಇಲಾಖೆಯ ದಾಖಲೆಗಳಲ್ಲಿ ಜನಸಾಮಾನ್ಯರ ಬಾಯಲ್ಲೂ 'ಹನುಮಿಡಿ' ಎಂಬ ರೂಪವೂ ಬಳಕೆಯಲ್ಲಿದೆ. ಇಂದು ಕೆಲವರು 'ಹನುಮಿಡಿ' ಎಂದು ಉಚ್ಚರಿಸಿದ ಮಾತ್ರಕ್ಕೆ ಆ ಊರಿನ ನಿಜವಾದ ಹೆಸರೂ ಅದೇ ಇರಬೇಕಿಲ್ಲ. ಸ್ಥಳನಾಮವು ಪೀಳಿಗೆಯಿಂದ ಪೀಳಿಗೆಗೆ ರೂಪಾಂತರ ಹೊಂದುತ್ತಾ ಬರುತ್ತದೆಂಬುದು ಸ್ಥಳನಾಮಗಳ ಸಮೀಕ್ಷೆಯಿಂದ ಸಿದ್ಧವಾಗಿದೆ. ಒಂದು ಸ್ಥಳದ ಪುರಾತನ ನಾಮರೂಪ ಮತ್ತು ರೂಪಾಂತರಗಳನ್ನು ತಿಳಿಯಲು ಶಾಸನ ಸಾಹಿತ್ಯವು ಅಧಿಕೃತ ಸಾಕ್ಷ್ಯವಾಗಿರುತ್ತದೆ. ಹಲ್ಮಿಡಿ ಶಾಸನದಲ್ಲಿ ಊರಿನ ಹೆಸರು 'ಪಲ್ಮಡಿ' ಎಂದಿದೆ. ಇದರ ನಂತರದಲ್ಲಿ ಹಾಕಲ್ಪಟ್ಟ, ಕ್ರಿ.ಶ.520 ರ ಕದಂಬರ 5ನೇ ರಾಜನಾದ ಇಮ್ಮಡಿ ಕೃಷ್ಣವರ್ಮನ ತಾಮ್ರಶಾಸನದಲ್ಲೂ 'ಪಲ್ಮಡಿ ಗ್ರಾಮ' ಎಂದೇ ಇದೆ. ಮುಂದೆ ಗಂಗರಾಜರ ಆಡಳಿತಾವಧಿಯಲ್ಲಿ ರಾಚಮಲ್ಲನ ಚಿಕ್ಕಮಗಳೂರು ಶಾಸನ (ಕ್ರಿ.ಶ. 899) ಮತ್ತು ಎರಡನೇ ಬೂತುಗನ ಬಪ್ಪವಳ್ಳಿಯ ಶಾಸನ (ಕ್ರಿ.ಶ.959)ಗಳಲ್ಲಿ 'ಪಲ್ಮಾಡಿ' ಎಂದು ಕರೆಯಲಾಗಿದೆ.


ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ಕ್ರಿ.ಶ. 1523ರಲ್ಲಿ ಶೃಂಗೇರಿಯ ಬಸದಿಗೆ ಕೊಡುಗೆ ನೀಡಿದ ದೇವಣಸೆಟಿಯ ಊರು 'ಹಲುಮಿಡಿ'. ಕೃಷ್ಣದೇವರಾಯನ ಆಡಳಿತಕಾಲದ ಕ್ರಿ.ಶ. 1524ರ ಬೇಲೂರು ಶಾಸನದ ಎರಡು ಪ್ರತಿಗಳಲ್ಲಿ 'ಹಲುಮಿಡಿ' ಮತ್ತು 'ಹಲುಮಿರಿ' ಎಂಬ ರೂಪಗಳು ಕಾಣಸಿಗುತ್ತವೆ.

ಈ ರೀತಿ ಒಂದೂವರೆ ಸಾವಿರ ವರ್ಷಗಳ ಹಿಂದೆ 'ಪಲ್ಮಿಡಿ' ಎಂದಿದ್ದ ಹೆಸರು ನಂತರ ಪಲ್ಮಾಡಿ, ಪಲುಮಿಡಿ, ಹಲುಮಿಡಿ, ಹಲುಮಿರಿ ಮುಂತಾದ ರೂಪಾಂತರಗಳನ್ನು ಹೊಂದಿ ಜನಸಾಮಾನ್ಯರ ಬಾಯಲ್ಲಿ 'ಹಲ್ಮಿಡಿ'ಯಾಗಿ ಉಳಿದಿರಬೇಕು. ಆದರೆ 'ಹನುಮಿಡಿ' ಎಂಬ ರೂಪವು ಯಾವ ಶಾಸನದಲ್ಲೂ ದಾಖಲಾಗಿಲ್ಲ. ಬಹುಶಃ ಇಸ್ಲಾಂ ಮತ್ತು ಬ್ರಿಟಿಷ್ ಆಡಳಿತ ಕಾಲದಲ್ಲಿನ ಕಂದಾಯ ಇಲಾಖೆಯ ದಾಖಲೆಗಳಲ್ಲಿ 'ಹಲುಮಿಡಿ'ಯು 'ಹನುಮಿಡಿ' ಎಂದು ದಾಖಲಾಗತೊಡಗಿ ಕ್ರಮೇಣ ಜನಸಾಮಾನ್ಯರಲ್ಲಿ ಹಲ್ಮಿಡಿ, ಹನುಮಿಡಿ ಈ ಎರಡೂ ರೂಪಗಳು ಬಳಕೆಯಲ್ಲಿ ಉಳಿದವು. ಊರಿನ ಗಡಿ ಕಲ್ಲಿನಲ್ಲಿಯೂ ಈ ಎರಡೂ ನಾಮರೂಪಗಳನ್ನು ಕಾಣಬಹುದು. ಮತ್ತೆ ಕೆಲವರು 'ಹಲ್ಮುಡಿ' ಎಂದೂ ಕರೆಯುತ್ತಾರೆ. ಇದೂ 'ಹಲ್ಮಿಡಿ'ಯ ಅಪಭ್ರಂಶ. ಹೀಗೆ ಹನುಮಿಡಿ, ಹಲ್ಮುಡಿ ಇತ್ಯಾದಿ ಅರ್ವಾಚೀನ ಅಪಭ್ರಂಶಗಳನ್ನೇ ಮುಂದುವರಿಸದೆ ಶಾಸನತಜ್ಞರು ಒಪ್ಪಿ ಬಳಸಿಕೊಂಡು ಬಂದಿರುವ 'ಹಲ್ಮಿಡಿ' ನಾಮರೂಪವನ್ನೇ ಈ ಪುಸ್ತಕದಲ್ಲಿಯೂ ಸ್ವೀಕರಿಸಿ ಬಳಸಿದೆ.

ಗ್ರಾಮೀಣ ಜನರಲ್ಲೂ ಈ ಎರಡು ಹೆಸರುಗಳಲ್ಲಿ ಸರಿ ಯಾವುದು ಎಂಬ ಜಿಜ್ಞಾಸೆ ಇತ್ತು. ಹಲ್ಮಿಡಿ ಶಾಸನದ ನೆನಪಿನ ಮಂಟಪ ನಿರ್ಮಾಣಕಾರ್ಯದ ನಿಮಿತ್ತ ಯುವಕ ಸಂಘದವರು ನನ್ನಲ್ಲಿ ಚರ್ಚಿಸಿ -ಇನ್ನು ಮುಂದೆ 'ಹಲ್ಮಿಡಿ' ನಾಮರೂಪವನ್ನೇ ಸರ್ಕಾರೀ ವ್ಯವಹಾರಗಳಲ್ಲೂ ಬಳಸುವಂತೆ ಸರ್ಕಾರೀ ಕಚೇರಿಗಳಿಗೆ ಮನವಿ ಮಾಡಲು ನಿರ್ಧರಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತು ಕೂಡ 'ಹಲ್ಮಿಡಿ' ನಾಮರೂಪವನ್ನೇ ಮಾನ್ಯಮಾಡಿದೆ.

ಭೌಗೋಳಿಕ ಸ್ಥಾನ : ಭೂಗೋಳದಲ್ಲಿ ಹಲ್ಮಿಡಿಯ ಸ್ಥಾನ 13.2° ಉತ್ತರ ಅಕ್ಷಾಂಶ ಮತ್ತು 76.66° ಪೂರ್ವರೇಖಾಂಶಗಳು ಸಂಧಿಸುವಲ್ಲಿ ಇದೆ. ಈ ಭಾಗವನ್ನು ಇಂದು ನಾವು ಹಾಸನ ಜಿಲ್ಲೆಯ, ಬೇಲೂರು ತಾಲ್ಲೂಕಿನ ಉತ್ತರ ತುದಿ ಎಂದು ಗುರ್ತಿಸುತ್ತೇವೆ. ಆದರೆ ಪುರಾತನ ಕಾಲದಲ್ಲಿ - ಹಲ್ಮಿಡಿ ಶಾಸನದಲ್ಲಿರುವ ಉಲ್ಲೇಖದಂತೆ ಈ ಭೂಭಾಗವನ್ನು 'ನರಿದಾವಿಳೆ ನಾಡು' ಎಂದು ಕರೆಯಲಾಗಿದೆ. ನಂತರದಲ್ಲಿ ಇದು ದಾವಿಳೆ > ದಾವಳಿಗೆ > ದೇವಳಿಗೆ > ದೇವಾಳ್ಗೆ ಮುಂತಾಗಿ ರೂಪಭೇದಗಳನ್ನು ಹೊಂದಿರಬೇಕು. ಏಕೆಂದರೆ ಕದಂಬರ ಸಮಕಾಲೀನವಾದ ನೆರೆಯ

ಕದಂಬರ ರಾಜ್ಯದ ನಕ್ಷೆ



ಚಿತ್ರ 1

ಗಂಗ ರಾಜ್ಯದಲ್ಲಿ ಕ್ರಿ.ಶ. 460 ರ ಮೂರನೇ ಮಾಧವನ ಕಾಲದ ಸಂಸ್ಕೃತ ತಾಮ್ರಶಾಸನದಲ್ಲಿಯೇ 'ದೇವಾಳ್ಗೆ ವಿಷಯ' ಎಂಬ ಉಲ್ಲೇಖವಿದೆ.

ಗಂಗರಾಜ ಎರಡನೇ ಬೂತುಗನ ಕ್ರಿ.ಶ. 959ರ ಶಾಸನದಲ್ಲಿ 'ದೇವಳಿಗೆ ಎಪ್ಪತ್ತು' ಎಂದೂ, ಹೊಯ್ಸಳರ ವಿನಯಾದಿತ್ಯನ ಕಾಲದ ಕ್ರಿ.ಶ. 1074 ರ ಶಾಸನದಲ್ಲೂ

'ದೇವಳಿಗೆ ನಾಡ ಎಳ್ಪತ್ತು' ಎಂದೂ ಇರುವ ಉಲ್ಲೇಖಗಳಿಂದ ಈ 'ದೇವಳಿಗೆ' ಎಂಬ ವಿಭಾಗವು ಎಪ್ಪತ್ತು ಹಳ್ಳಿಗಳ ಸಮುದಾಯವೆಂದು ಊಹಿಸಬಹುದು. 'ದೇವಳಿಗೆ ನಾಡು' ಎಂಬ ಆಡಳಿತ ವಿಭಾಗದ ಉಲ್ಲೇಖವನ್ನು ವಿಷ್ಣುವರ್ಧನನ ಕ್ರಿ.ಶ. 1117ರ ಬೇಲೂರು ಶಾಸನ ಮತ್ತು ಅವನ ಮೊಮ್ಮಗ ವೀರಬಲ್ಲಾಳನ ಕ್ರಿ.ಶ. 1200ರ ತಾಮ್ರಶಾಸನಗಳಲ್ಲಿ ಕಾಣಬಹುದು.

ವಿಜಯನಗರದ ಆಡಳಿತ ಕಾಲಕ್ಕೆ ಸೇರಿದ ಕ್ರಿ.ಶ. 1404 ರ ಅಂಬಳೆಯ ಶಾಸನವು ದೇವಳಿಗೆ ಸೀಮೆಯ ನಿರ್ದಿಷ್ಟ ಸ್ಥಾನಸೂಚನೆಯನ್ನು ನೀಡಿದೆ.

''ವೇಲಾಪುರ್ಯಾಃ ಉದಗ್ದಿಶಿ ಕ್ರೋಶದ್ವಯ ಮಿತೇ ದೇಶೇ ।
ಸುಖಸಂವಾಸನೋಚಿತೇ ದೇವಳಾಭಿದ ಸೀಮಾಯಾಃ ॥''

ಎಂಬ ಭಾಗವು ''ವೇಲಾಪುರ ಅಂದರೆ ಬೇಲೂರು ಪಟ್ಟಣದ ಉತ್ತರ ದಿಕ್ಕಿಗೆ ಎರಡು ಕ್ರೋಶಗಳಷ್ಟು ದೂರದಲ್ಲಿ ಜನವಸತಿಗೆ ಅತ್ಯಂತ ಯೋಗ್ಯವಾದ ದೇವಳ ಎಂಬ ಹೆಸರಿನ ಸೀಮೆಯಲ್ಲಿ....'' ಎಂದರ್ಥ ಕೊಡುತ್ತದೆ. ಹಲ್ಮಿಡಿ ಶಾಸನದ ನರಿದಾವಿಳೆ ನಾಡು ಎಂಬ ವಿಭಾಗದ ಜಾಗವೂ ಇದೇ ಆಗಿದೆ.

ಈ ದೇವಳಿಗೆ ನಾಡಿನಲ್ಲೇ ಹಲ್ಮಿಡಿ ಗ್ರಾಮವು ಇತ್ತು ಎಂಬುದಕ್ಕೆ ಇನ್ನೊಂದು ಖಚಿತ ಪುರಾವೆಯಾಗಿ ಕೃಷ್ಣದೇವರಾಯನ ಆಳ್ವಿಕೆಯ ಕಾಲದ ಕ್ರಿ.ಶ. 1524ರ ಶಿಲಾಶಾಸನವನ್ನು ಉದಾಹರಿಸಬಹುದು. ಬೇಲೂರಿನ ದೊಡ್ಡಕೆರೆ ವಿಷ್ಣುಸಮುದ್ರದ ಉತ್ತರ ಭಾಗವನ್ನು ಪುಷ್ಕರಿಣಿಯಾಗಿ ರೂಪಿಸಿದ ಬಗ್ಗೆ ಹಾಕಿಸಿದ ಈ ಶಾಸನದಲ್ಲಿ. ''.....ಕೃಷ್ಣದೇವ ಮಹಾರಾಯರು ನಾಯಕತನಕೆ ಪಾಲಿಸಿದ ವಸ್ತಾರೆಯ ಸೀಮೆಗೆ ಸಲುವ ದೇವಣಿಗೆಯ ನಾಡೊಳಗಣ ನಾರಾಯಣಪುರದ ಗ್ರಾಮ ೧, ಹಲುಮಿಡಿಯ ಗ್ರಾಮ ೧ - ಉಭಯ ಗ್ರಾಮಕ್ಕೆ ಸಲುವ ಗದ್ದೆ ಬೆದ್ದಲು ತೋಟತುಡಿಕೆ.....'' ಎಂಬ ಸಾಲುಗಳಲ್ಲಿ ಹಲ್ಮಿಡಿ ಮತ್ತು ಅದರ ಪಕ್ಕದ ನಾರಾಯಣಪುರ ಗ್ರಾಮಗಳು ದೇವಳಿಗೆ ನಾಡಿಗೆ ಸೇರಿದ್ದವೆಂಬುದು ಖಚಿತವಾಗುತ್ತದೆ. ಆದುದರಿಂದ ನರಿದಾವಿಳೆ ನಾಡು ಮತ್ತು ದೇವಳಿಗೆ ನಾಡು ಈ ಎರಡೂ ಸಹ ಒಂದೇ ಎಂದು ಖಚಿತವಾಗಿ ತೀರ್ಮಾನಿಸಬಹುದು.

ಮತ್ತೊಂದು ಕುತೂಹಲಕರ ವಿಷಯವೆಂದರೆ ದೇವಳಿಗೆ ನಾಡನ್ನು ವಸ್ತಾರೆ ಸೀಮೆಗೆ ಸೇರಿದುದೆಂದು ಈ ಬೇಲೂರು ಶಾಸನದಲ್ಲಿ ಹೇಳಲಾಗಿದೆ. ಅಂದರೆ ವಿಜಯನಗರ ಆಡಳಿತ ಕಾಲದಲ್ಲಿ ಈ ಭೂಭಾಗವು ವಸ್ತಾರೆ ಸೀಮೆಗೆ ಸೇರಿತ್ತೆಂದು ತಿಳಿಯುತ್ತದೆ. ಆದರೆ ಕದಂಬರ ಕಾಲದ ಕ್ರಿ.ಶ. 520 ರ ಸುಮಾರಿನ ಇಮ್ಮಡಿ

ಕೃಷ್ಣವರ್ಮನ ತಾಮ್ರಶಾಸನದ 3ನೇ ಪುಟದಲ್ಲಿ ''ಸೇನ್ದ್ರಕ ವಿಷಯಾಂತರ್ಗತ ಪಲ್ಮಡಿ ಗ್ರಾಮೇ....'' ಎಂದಿದೆ, ಇದಲ್ಲದೆ ಕ್ರಿ.ಶ. 460 ರ ಗಂಗವಂಶದ ಮೂರನೇ ಮಾಧವನ ಆಳ್ವಿಕೆಯ ತಾಮ್ರಶಾಸನದಲ್ಲಿ ''ದೇವಾಳ್ಗೆವಿಷಯ'' ಎಂದಿದೆ. 'ವಿಷಯ' ಎಂಬುದು ಅನೇಕ ಸೀಮೆಗಳನ್ನೊಳಗೊಂಡ ಭೂಭಾಗ. ಆದುದರಿಂದ ದೇವಳಿಗೆ ಎಂಬ ಆಡಳಿತ ವಿಭಾಗವು ಒಮ್ಮೆ ತಾನೇ ಒಂದು ಪ್ರಾಂತ್ಯವಾಗಿತ್ತು. ನಂತರ ಒಮ್ಮೆ ಸೇಂದ್ರಕ ಪ್ರಾಂತ್ಯಕ್ಕೂ, ಮತ್ತೊಮ್ಮೆ ವಸ್ತಾರೆ ಪ್ರಾಂತ್ಯಕ್ಕೂ ಸೇರಿದ ಭಾಗವಾಗಿತ್ತು ಎಂದು ಊಹಿಸಬಹುದು. ದೇವಳಿಗೆ ನಾಡು ಒಂದೂವರೆ ಸಾವಿರ ವರ್ಷಗಳ ಅವಧಿಯಲ್ಲಿ ಅನೇಕ ಆಡಳಿತಾತ್ಮಕ ಬದಲಾವಣೆಯನ್ನು ಕಂಡಿದೆಯಾದರೂ ಹಲ್ಮಿಡಿ ಗ್ರಾಮವು ಮಾತ್ರ ದೇವಳಿಗೆ ನಾಡಿನಲ್ಲೇ ಇದೆ.

ಕದಂಬ ರಾಜ್ಯದ ದಕ್ಷಿಣ ತುದಿಯ ಒಂದು ಪ್ರಾಂತ್ಯವಾಗಿದ್ದ ಈ ವಿಭಾಗವು ಎಪ್ಪತ್ತು ಹಳ್ಳಿಗಳನ್ನು ಒಳಗೊಂಡಿತ್ತು. ಹಲ್ಮಿಡಿ, ನಾರಾಯಣಪುರ, ಮುಗುಳುವಳ್ಳಿ, ಸೋಮಶೆಟ್ಟಿಹಳ್ಳಿ, ಮರ್ಲೆ, ಚಿಕ್ಕಮಗಳೂರು, ಬಸವನಹಳ್ಳಿ, ಅಂಬಳೆ, ಹಿರೇಮಗಳೂರು ಮತ್ತು ಇವುಗಳ ಅಕ್ಕಪಕ್ಕದ ಊರುಗಳೇ ಈ ಎಪ್ಪತ್ತು ಹಳ್ಳಿಗಳಾಗಿದ್ದವು ಎಂಬ ಅಂಶವು ಶಾಸನಗಳ ಸೂಕ್ಷ್ಮ ಅಧ್ಯಯನದಿಂದ ತಿಳಿಯುತ್ತದೆ. ಒಟ್ಟಿನಲ್ಲಿ ಇಂದಿನ ಬೇಲೂರು ತಾಲೂಕಿನ ಉತ್ತರ ಭಾಗ ಮತ್ತು ಚಿಕ್ಕಮಗಳೂರು ತಾಲೂಕಿನ ದಕ್ಷಿಣ ಭಾಗಗಳು ಸೇರಿ ದೇವಳಿಗೆ ನಾಡು ರೂಪಿತವಾಗಿತ್ತು. ಈ ದೇವಳಿಗೆ ನಾಡೇ ಹಲ್ಮಿಡಿ ಶಾಸನದ 'ನರಿದಾವಿಳೆ ನಾಡು' ಎಂದು ಊಹಿಸಬಹುದು.

ಈ ನರಿದಾವಿಳೆ ನಾಡಿನ ದಕ್ಷಿಣ ತುದಿಯಲ್ಲಿ ನಾರಾಯಣಪುರ ಮತ್ತು ಮುಗುಳುವಳ್ಳಿಗಳ ನಡುವೆ ಹಲ್ಮಿಡಿ ಗ್ರಾಮವಿದೆ. ಶಿಲಾಯುಗದ ಕಾಲದಿಂದಲೂ ನೀರಿನಾಸೆಯ ಅಂದರೆ ನದಿ-ಹಳ್ಳಗಳ ತೀರದಲ್ಲಿ ನಾಗರಿಕ ವಸತಿಗಳು ಅರಳುತ್ತಾ ಬಂದಿವೆಯಷ್ಟೆ. ಬೇಲೂರು ತಾಲೂಕಿಗೆ ಯಗಚಿ ನದಿಯು ಜೀವನದಿಯಾಗಿದೆ. ಇದರ ದಡದಲ್ಲಿ ಶಿಲಾಯುಗದ ಕಾಲದಿಂದಲೂ ಜನವಸತಿ ಇದ್ದು ನಾಗರೀಕತೆ ರೂಪುಗೊಳ್ಳುತ್ತಾ ಬಂದಿದೆ. ಈ ಯಗಚೀ ನದಿಗೆ ಸೇರುವ ಹಳ್ಳವಾದ 'ಬೆನಕನಹಳ್ಳ'ದ ದಡದಲ್ಲಿ ಈ ಹಲ್ಮಿಡಿಗ್ರಾಮ ಹುಟ್ಟಿಬೆಳೆದಿದೆ. ಬಹುಶಃ ಬೃಹತ್ ಶಿಲಾಯುಗದ ಅವಧಿಯಿಂದಲೇ ಇಲ್ಲಿ ಜನರು ವಾಸಿಸಲು ಆರಂಭಿಸಿದ್ದು, ಇಲ್ಲಿಗೆ ಒಂದೂವರೆ ಸಾವಿರ ವರ್ಷಗಳಿಗೂ ಮೊದಲೇ ಹಲ್ಮಿಡಿಯು ಒಂದು ಬಲಿಷ್ಠ ಗ್ರಾಮವಾಗಿ ನಿಂತಿತ್ತು. ಕದಂಬರ ಆಳ್ವಿಕೆಯ ಕಾಲದಲ್ಲೇ ಬಹುಶಃ ಒಂದು ಮಣ್ಣಿನ ಕೋಟೆಯೂ ಇತ್ತೆಂತು ಕಾಣುತ್ತದೆ. ಊರಿನ ಸುತ್ತಲೂ ಆಳವಾದ ಕಂದಕ ತೋಡಿ ಆ ಮಣ್ಣನ್ನು ಒಳ ಅಂಚಿಗೆ ಗೋಡೆಯಂತೆ ಸುರಿದು ಕೋಟೆಯನ್ನು ಕಟ್ಟುವ ಪುರಾತನ ತಂತ್ರವನ್ನು ಇಲ್ಲಿ

ಬಳಸಲಾಗಿದೆ.

ಈ ಕೋಟೆಗೆ ಕನಿಷ್ಟ ಎರಡು ದ್ವಾರಗಳಾದರೂ ಇದ್ದವು. ಒಂದು ಪೂರ್ವಕ್ಕೆ, ಇನ್ನೊಂದು ಪಶ್ಚಿಮಕ್ಕೆ. ಇನ್ನೂ ಎರಡು ದ್ವಾರಗಳ ಸಾಧ್ಯತೆಯೂ ಕಂಡುಬರುತ್ತದೆ. ಪೂರ್ವದ ಮಹಾದ್ವಾರವು ಬಹುಶಃ ನಂತರದಲ್ಲಿ ಪುನರ್ನವೀಕರಿಸಲ್ಪಟ್ಟಿದ್ದು, ಅದರ ಭಾಗಗಳು ಇಂದೂ ಇವೆ. ಉಳಿದ ದ್ವಾರಗಳು ಪೂರ್ಣವಾಗಿ ನಾಶವಾಗಿವೆ. ಕೋಟೆಯ ಮಣ್ಣು ಕೂಡಾ ಕುಸಿದು, ಕಂದಕವು ಮುಚ್ಚಿಕೊಂಡು, ಗುರುತು ಸಿಕ್ಕದಂತಾಗಿದೆ. ಪ್ರಯತ್ನಿಸಿದರೆ ಕೋಟೆ-ಕಂದಕಗಳನ್ನು ಗುರ್ತಿಸಬಹುದು. ಕೋಟೆಯ ಪಶ್ಚಿಮಭಾಗದ ಅವಶೇಷವು ದಿಣ್ಣೆಯಂತಾಗಿದೆ. (ಅಲ್ಲೊಂದೆಡೆ ಒಂದು ಪ್ರತಿಮೆಯೂ ಇದ್ದು ಇಂದು ಅದನ್ನು 'ಬೊಮ್ಮೇಶ್ವರ' ಎಂಬ ಹೆಸರಿನಿಂದ ಪೂಜಿಸುತ್ತಾರಾದರೂ ಇದು ಯಾರೋ ರಾಜದಂಪತಿ ಅಥವ ನಾಯಕ ದಂಪತಿಗಳದ್ದಾಗಿರುವಂತಿದೆ)

ಕದಂಬರ ಕಾಲಕ್ಕಾಗಲೇ ವ್ಯವಸ್ಥಿತರೂಪವನ್ನು ಹೊಂದಿದ್ದ ಈ ಊರಿಗೆ ಒಳ್ಳೆಯ ಕೆರೆಯೂ, ಆ ಕೆರೆಯ ನೀರಾವರಿಯಿಂದ ಬೆಳೆ ಬೆಳೆಯುವ ಗದ್ದೆಗಳ ಸಮೂಹವೂ ಇತ್ತು ಎಂಬುದು ಹಲ್ಮಿಡಿ ಶಾಸನದಿಂದಲೇ ಸ್ಪಷ್ಟವಾಗಿದೆ. ಈ ಊರು ಆಗಲೇ ಜನರ ಸುಖಜೀವನಕ್ಕೆ ಅಗತ್ಯವಾದ ಗ್ರಾಮೀಣ ಸವಲತ್ತುಗಳನ್ನು ಹೊಂದಿದ್ದು ಇಂತಹ ಸಮೃದ್ಧ ಗ್ರಾಮದಲ್ಲಿ ತೋಟ-ತುಡಿಕೆಗಳಿದ್ದವು. ಅಂತೆಯೇ ಕಂದಾಯ ವಸೂಲಿಯೂ ಆಗುತ್ತಿತ್ತು ಎಂಬುದನ್ನೂ ಅನೇಕ ಶಾಸನಗಳಿಂದ ತಿಳಿಯಬಹುದು. ಅಂತೂ ಹಾಸನ ಜಿಲ್ಲೆಯ ಪುರಾತನ ಜನವಸತಿಗಳಲ್ಲಿ ಹಲ್ಮಿಡಿಗ್ರಾಮವೂ ಒಂದು. ಇದು ಪುಟ್ಟಗ್ರಾಮವಾದರೂ ಈ ನೆಲದಿಂದ ಕನ್ನಡ ನಾಡಿನ ವಾಙ್ಮಯ ಇತಿಹಾಸ, ಭಾಷೆ, ಲಿಪಿ, ಸಂಸ್ಕೃತಿ, ಜನಜೀವನ ಮುಂತಾಗಿ ನಾನಾರಂಗಗಳಿಗೆ ಪ್ರಥಮ ಲಿಖಿತ ದಾಖಲೆ ಎನಿಸುವಂತಹ ಶಾಸನವೊಂದು ನಮಗೆ ಉಡುಗೊರೆಯಾಗಿ ದೊರೆತಿದೆ.

●

ಅಧ್ಯಾಯ-೩

ಶಾಸನವು ಸಿಕ್ಕಿದ ಬಗೆ

ಹಲ್ಮಿಡಿ ಗ್ರಾಮಕ್ಕೆ ಪುರಾತನವಾದ ಒಂದು ಮಣ್ಣಿನ ಕೋಟೆಯಿತ್ತು ಎಂದು ಈ ಮುನ್ನ ಪ್ರಸ್ತಾಪಿಸಿದೆ. ಆ ಕೋಟೆಗೆ ಪಶ್ಚಿಮ ದಿಕ್ಕಿನಲ್ಲೂ ಒಂದು ಮಹಾದ್ವಾರವಿತ್ತು. ಬಹುಶಃ ಇಂದು ಜನರು ಗಡಿಯಿಂದ ಗ್ರಾಮಕ್ಕೆ ಪ್ರವೇಶಿಸುವ ದಾರಿಯು ಕೋಟೆಯ ಅವಶೇಷಗಳನ್ನು ಸಂಧಿಸುವಲ್ಲಿ ಈ ದ್ವಾರವಿದ್ದಿರಬೇಕು. ಈ ದ್ವಾರವೇ ಪ್ರಧಾನ ದ್ವಾರವಾಗಿರಲೂಬಹುದು. ಈ ದ್ವಾರದ ಮೂಲಕ ಓಡಾಡುವ ಗ್ರಾಮಸ್ಥರು ಮತ್ತು ಬೇರೆ ಊರಿನ ಜನರಿಗೂ ಸದಾ ಗೋಚರವಾಗುವಂತೆ ಅಲ್ಲಿ ಈ ಶಾಸನವನ್ನು ನಿಲ್ಲಿಸಲಾಗಿತ್ತು.

ಆದರೆ ಸಾವಿರಾರು ವರ್ಷಗಳ ಅಂತರದಲ್ಲಿ ಕನ್ನಡ ಭಾಷೆಯ ಲಿಪಿ ಸ್ವರೂಪವು ಅತೀವ ಬದಲಾವಣೆ ಹೊಂದಿರುವುದರಿಂದ ಈ ಶಾಸನದಲ್ಲಿ ಏನು ಬರೆದಿದೆ ಎಂಬುದೇ ಪೀಳಿಗೆಯಿಂದ ಪೀಳಿಗೆಗೆ ಮರೆತುಹೋಗುತ್ತಾ ಬಂತು. ಜನರಲ್ಲಿ ಆಸಕ್ತಿಯ ಕೊರತೆಯೂ ಇದಕ್ಕೆ ಕಾರಣ. ಕಡೆಗೆ ಕೇಳುವವರಿಲ್ಲದೆ ಮೋಟು ಕಲ್ಲಿನ ಗೂಟದಂತೆ ದನಗಳು ಮೈ ಉಜ್ಜುವ ಕಲ್ಲಾಗಿ ನಿಂತಿತ್ತು. ಹೀಗೇ ಹತ್ತಾರು ಶತಮಾನಗಳ ಕಾಲ ಮಳೆ-ಬಿಸಿಲುಗಳಲ್ಲಿ ಆ ಶಾಸನ ತನ್ನ ಪಾಡಿಗೆ ನಿಂತಿತ್ತು. ನಂತರ ಕೋಟೆಯೂ ಹೆಚ್ಚು ಕಡಿಮೆ ನಾಶದ ಹಂತಕ್ಕೆ ತಲುಪಿ ಊರ ಬಾಗಿಲೂ ಬಿದ್ದುಹೋದ ಮೇಲೆ ಶಾಸನವೂ ನೆಲಕ್ಕೆ ಬಿದ್ದು ಹೋಯಿತು. ಸ್ವಲ್ಪಕಾಲ ಹುಡುಗರ ಕಲ್ಲೇಟಿಗೂ ಗುರಿಯಾಗಿ ಶಾಸನವು ಸ್ವಲ್ಪ ವಿರೂಪಗೊಂಡಿರಬಹುದು.

ಈ ಕಲ್ಲಿನ ಮೇಲೆ ಏನೋ ಬರಹವಿದ್ದುದನ್ನು ಕಂಡ ಊರಿನ ಜನರು ಕ್ರಿ.ಶ. 1930ರ ಹೊತ್ತಿಗೆ ಇದನ್ನು ಕಾಪಾಡಲು ಯತ್ನಿಸಿದರು. ಅಂದಹಾಗೆ ಹಲ್ಮಿಡಿ ಗ್ರಾಮಪರಿಸರದಲ್ಲಿ ಇನ್ನೂ ಅನೇಕ ವೀರಗಲ್ಲು ಮುಂತಾದ ಶಾಸನಗಳಿದ್ದವು. ಅವುಗಳೊಂದಿಗೆ ಇದನ್ನು ಸಂಗ್ರಹಿಸಿ ದೇವಾಲಯದಲ್ಲಿ ಇಡಲು ಯತ್ನಿಸಿದರು. ಹಲ್ಮಿಡಿಯಲ್ಲಿ ಆ ಸಮಯಕ್ಕೆ ಎರಡು ಮೂರು ದೇವಾಲಯಗಳಿದ್ದವು. ಅದರಲ್ಲಿ ಹೊಯ್ಸಳರ ಕಾಲದ ಈಶ್ವರ ದೇವಾಲಯವು ಪುರಾತನವಾದರೂ ತುಂಬಾ ಶಿಥಿಲವಾಗಿತ್ತು. ಆಧುನಿಕವಾದ ವೀರಭದ್ರ ದೇವಾಲಯವು ಭದ್ರವಾಗಿಯೂ, ಊರಿನ

ಕೇಂದ್ರಭಾಗದಲ್ಲಿಯೂ ಎತ್ತರದಲ್ಲಿಯೂ ಇದ್ದುದರಿಂದ ಅದೇ ಸೂಕ್ತ ಸ್ಥಳವೆಂದು ಶಾಸನಗಳನ್ನು ಅಲ್ಲಿಗೆ ತಂದು ನೆಟ್ಟರು. (ಎಪಿಗ್ರಾಫಿಯ ಕರ್ನಾಟಿಕಾ ಸಂಪುಟ 9 ರ ಸಂಗ್ರಹದಲ್ಲಿ ಹಲ್ಮಿಡಿಯ ಮೂರು ಶಾಸನಗಳನ್ನು ಮಾತ್ರ ಉಲ್ಲೇಖಿಸಲಾಗಿದೆ. ಆದರೆ ಹಲ್ಮಿಡಿಯಲ್ಲಿ ಐದಾರು ಶಾಸನಗಳಿವೆ. ಅವುಗಳ ಸಾಹಿತ್ಯವನ್ನು ಸಂಗ್ರಹಿಸಿ ಪರಿಶೀಲಿಸುವ ಕಾರ್ಯ ಆಗಬೇಕಾಗಿದೆ).

ಅಂತೂ ಕ್ರಿ.ಶ. 1930ರವರೆಗೆ ಅನಾಥವಾಗಿದ್ದ ಶಾಸನವು ನಂತರ ವೀರಭದ್ರೇಶ್ವರ ದೇವಾಲಯದೆದುರು ಸುರಕ್ಷಿತವಾಗಿ ಮತ್ತೆ ಜನರ ಗಮನ ಸೆಳೆಯುತ್ತಾ ನಿಂತಿತು. ಆ ಕಲ್ಲಿನ ಮೇಲೆ ಏನೇನೋ ಅಕ್ಷರಗಳು ಇದ್ದುದು ಜನರಿಗೆ ಕಾಣುತ್ತಿತ್ತೇ ವಿನಃ ಅದೇನು ಎಂಬುದು ಮಾತ್ರ ತಿಳಿಯಲು ಸಾಧ್ಯವಿರಲಿಲ್ಲ. ಏಕೆಂದರೆ ಆ ಶಾಸನದಲ್ಲಿ ಬಳಸಿದ್ದ ಲಿಪಿಯು ಬಳಕೆಯಿಂದ ಕೈಬಿಟ್ಟು ಹೋಗಿ ಬಹಳ ಕಾಲವಾಗಿತ್ತು.

ಆದರೂ ಏನೋ ಅಪರೂಪದ ಕುತೂಹಲಕರ ವಸ್ತುವಾಗಿ ಜನರ ಗಮನವನ್ನು ಸೆಳೆಯುತ್ತಾ ಆ ಕಲ್ಲು ವೀರಭದ್ರೇಶ್ವರ ದೇವಾಲಯದ ಮುಂದೆ ಮತ್ತೆ ಆರೇಳು ವರ್ಷಕಾಲ ಸ್ತಂಭಿಸಿ ನಿಂತಿತ್ತು. ಆನಂತರ ಇದಕ್ಕೆ ಒಂದು ಪರ್ವ ಕಾಲ ಬಂತು.

ಮೈಸೂರು ಸಂಸ್ಥಾನದ ಪುರಾತತ್ವ ತಜ್ಞರುಗಳಲ್ಲಿ ಒಬ್ಬರಾದ ಡಾ|| ಎಂ.ಹೆಚ್. ಕೃಷ್ಣರವರು 1929ರಲ್ಲಿ ಮೈಸೂರು ಪುರಾತತ್ವ ಇಲಾಖೆಯ ಅಧಿಕಾರಿಯಾದ ನಂತರ, ಆಮುನ್ನ ಬಿ. ಲೂಯಿಸ್ ರೈಸ್‌ರವರ ಸಂಗ್ರಹಕ್ಕೆ ಸೇರದೆ ಉಳಿದ ಶಾಸನಗಳನ್ನು ಸಂಗ್ರಹಿಸಲು ವ್ಯಾಪಕ ಗ್ರಾಮೀಣ ಸಮೀಕ್ಷೆ ನಡೆಸಿದರು. ಈ ಯತ್ನದಲ್ಲಿ ಅವರು ಹಲ್ಮಿಡಿ ಗ್ರಾಮಕ್ಕೆ 1936 ರಲ್ಲಿ ಭೇಟಿ ನೀಡಿದಾಗ ವೀರಭದ್ರೇಶ್ವರ ದೇವಾಲಯದೆದುರು ನಿಂತಿದ್ದ ಶಾಸನಗಳು ಕಣ್ಣಿಗೆ ಬಿದ್ದವು. ಕೆಲವು ಹಳಗನ್ನಡದಲ್ಲಿದ್ದರೆ ಒಂದು ಮಾತ್ರ ದಾಕ್ಷಿಣಾತ್ಯ ಬ್ರಾಹ್ಮೀ ಲಿಪಿಯಲ್ಲಿ ಇತ್ತು. ಹಾಗಾಗಿ ಪುರಾತನ ಶಾಸನವಿದೆಂದು ಊಹಿಸಿದ ಕೃಷ್ಣರವರು ಇದರ ಸಾಹಿತ್ಯವನ್ನು ಓದಿದಾಗ - ''ಇದು ಕೇವಲ ಪುರಾತನವಾದುದಷ್ಟೇ ಅಲ್ಲ, ಕನ್ನಡ ಭಾಷೆಯ ಮೊತ್ತಮೊದಲ ಶಾಸನ'' ಎಂಬ ಸತ್ಯವೂ ಹೊಳೆಯಿತು. ಯಾರಿಗೂ ಬೇಕಿಲ್ಲದಂತೆ ಊರಬಾಗಿಲಿನ ವೋಟು ಕಂಬವಾಗಿ ಸಾವಿರಾರು ವರ್ಷಗಳಿಂದ ನಿಂತಿದ್ದ ಆ ಕಲ್ಲುತುಂಡು ''ಕನ್ನಡ ನಾಡಿನ ಅತಿಮಹತ್ವದ ದಾಖಲೆ'' ಎಂಬ ಸತ್ಯದ ಸಾಕ್ಷಾತ್ಕಾರವಾದ ಸುವರ್ಣಕ್ಷಣ ಅದು !

ಅಂತೂ ಕನ್ನಡ ನಾಡಿನ ಸಂಸ್ಕೃತಿ ಕನ್ನಡ ಭಾಷೆಯ ಇತಿಹಾಸ ಇವಕ್ಕೆಲ್ಲ ಕನಿಷ್ಟ ಹದಿನೈದು ಶತಮಾನಗಳಷ್ಟು ಪುರಾತನತೆ ಇದೆ ಎಂಬುದಕ್ಕೆ ಅಧಿಕೃತವಾದ ಲಿಖಿತ ದಾಖಲೆಯೊಂದು ಹಲ್ಮಿಡಿ ಗ್ರಾಮದಿಂದ ನಮಗೆ, ಎಂ.ಹೆಚ್. ಕೃಷ್ಣರವರ ಮೂಲಕ ಭಾಷಾಪ್ರಪಂಚಕ್ಕೆ ದೊರೆಯಿತು. ಅಂದಿನಿಂದ ಈ ಶಾಸನವು 'ಹಲ್ಮಿಡಿ ಶಾಸನ' ಎಂದೇ

ಜನಪ್ರಿಯವಾಗಿದೆ.

ಕೃಷ್ಣರವರ ಸಂಗ್ರಹಕ್ಕೆ ಹಲ್ಮಿಡಿ ಶಾಸನದ ಸಾಹಿತ್ಯವು ದೊರೆತ ನಂತರ ಅದೇ ವರ್ಷದ ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್ (ಎಂ.ಎ.ಆರ್. 1936 : ಪುಟ 74) ಮತ್ತು ಪ್ರಬುದ್ಧ ಕರ್ನಾಟಕದಲ್ಲಿ ಇದರ ವಿವರಗಳು ಪ್ರಕಟಗೊಂಡು ನಾಡಿನ ಜನತೆ ಮತ್ತು ಭಾಷಾವಿದ್ವಾಂಸರು ಚಕಿತಗೊಳ್ಳುವಂತಾಯಿತು.

ಒಂದೂವರೆ ಸಾವಿರ ವರ್ಷಗಳಿಂದ ಅನಾಥವಾಗಿ ಬಯಲಿನಲ್ಲಿ ನಿಂತು ಗಾಳಿ-ಮಳೆ-ಬಿಸಿಲುಗಳಂತಹ ನೈಸರ್ಗಿಕ ಧಾಳಿಯ ಜತೆಗೆ ಊರಿನ ದನಗಳು ಮೈಉಜ್ಜಿ, ಹುಡುಗರು ಕಲ್ಲಿನಿಂದ ಹೊಡೆದು ಶಾಸನದ ಮೈಮೇಲೆ ಅನೇಕ ಗಾಯಗಳಾಗಿದ್ದವು. ಶಾಸನ ಪಾಠವಿರುವಲ್ಲಿ ಚಕ್ಕೆ ಎದ್ದುಹೋಗಿತ್ತಷ್ಟೆ, ಇದುವರೆಗೆ ಇದರ ಮಹತ್ವ ತಿಳಿಯದೇ ಹೀಗಾಗಿತ್ತು. ಮುಂದೆ ಹೀಗಾಗದಂತೆ ಸಂರಕ್ಷಿಸಬೇಕೆಂದು ಆ ಶಾಸನವನ್ನು ಹಲ್ಮಿಡಿಯಿಂದ ಸಾಗಿಸಿ ಮೈಸೂರಿನ ಪುರಾತತ್ವ ಇಲಾಖೆಯ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇರಿಸಲಾಯಿತು. ನಂತರ ಅದನ್ನು ಬೆಂಗಳೂರಿನ ಕಬ್ಬನ್‌ಪಾರ್ಕ್ ಆವರಣದ ಸರ್ಕಾರೀ ವಸ್ತುಸಂಗ್ರಹಾಲಯದಲ್ಲಿ ಇತರ ಶಾಸನಗಳೊಂದಿಗೆ ರಕ್ಷಿಸಿಡಲಾಯಿತು. ಇದರ ಬಗ್ಗೆ ಸಂಶೋಧಕರ - ಜಿಜ್ಞಾಸುಗಳ ಕುತೂಹಲವು ಹೆಚ್ಚುತ್ತಾ ಬಂದಿದ್ದರಿಂದ ಈಗ ಅದೇ ಸಂಗ್ರಹಾಲಯದ ತಾಮ್ರ ಶಾಸನಗಳು ಮತ್ತು ಅತಿಪುರಾತನ ವಸ್ತುಗಳ ವಿಭಾಗದಲ್ಲಿ ಮರದ ಪೀಠದ ಮೇಲೆ ತುಂಬಾ ಮುತುವರ್ಜಿಯಿಂದ ರಕ್ಷಿಸಿಡಲಾಗಿದೆ.

ಇದು ಸಾರ್ವಜನಿಕ ಪ್ರದರ್ಶನವಾಗಿರುವುದರಿಂದ ಆಸಕ್ತರುಗಳು ಅಲ್ಲಿಗೆ ಹೋಗಿ ಹಲ್ಮಿಡಿ ಶಾಸನದ ಸರ್ವಸ್ವರೂಪಗಳನ್ನೂ ಪ್ರತ್ಯಕ್ಷವಾಗಿ ಪರಿಶೀಲಿಸಬಹುದು.

●

ಅಧ್ಯಾಯ - 4

ಹಲ್ಮಿಡಿ ಶಾಸನದ ಬಾಹ್ಯ ಸ್ವರೂಪ


ಇತಿಹಾಸ, ಭಾಷಾಶಾಸ್ತ್ರ, ಲಿಪಿಶಾಸ್ತ್ರ, ಸಾಮಾಜಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ಜಾನಪದ, ವ್ಯಾಕರಣ ಮುಂತಾದ ನಾನಾರಂಗಗಳ ಹತ್ತಾರು ವಿದ್ವಾಂಸರುಗಳು ಅನೇಕ ವಿಧಾನಗಳಿಂದ ಈ ಶಾಸನವನ್ನು ಪರಿಶೀಲಿಸುತ್ತ ಬಂದಿದ್ದಾರೆ. ವಿವಿಧ ವಿದ್ವಾಂಸರು ಪರಿಕಲ್ಪಿಸಿರುವ, ಬೇರೆ ಬೇರೆಯದೇ ಅರ್ಥಗಳನ್ನು ಧ್ವನಿಸುವ ವಿವಿಧ ತೀರ್ಮಾನಗಳು ವಾದಗಳಿಗೆ - ಭಿನ್ನಾಭಿಪ್ರಾಯಗಳಿಗೆ ಕಾರಣವಾಗುವುದರೊಂದಿಗೆ ಆಸಕ್ತಿ ಕೆರಳಿಸಿವೆ. ಹೊಸ ಹೊಸ ಸಂಶೋಧನೆಗಳಿಗೆ ಮಾರ್ಗ ಕಲ್ಪಿಸಿಕೊಟ್ಟಿವೆ. ಹೀಗಾಗಿ ಹಲ್ಮಿಡಿ ಶಾಸನವು ಸಾಹಿತ್ಯರಂಗದಲ್ಲಿ 'ಸದಾ ಚರ್ಚಿತವಾಗುತ್ತಲೇ ಇರುವ ಶಾಸನ' ಎನಿಸಿಕೊಂಡಿದೆ. ಇಷ್ಟಾಗಿಯೂ ಈ ಶಾಸನದ ಪಾಠ, ಪದಗಳ ಸ್ವರೂಪ, ಪದಗಳ ಖಚಿತ ಅರ್ಥ, ವಾಕ್ಯಗಳ ಸಂದರ್ಭ, ಶಾಸನದ ಕಾಲ, ಶಾಸನದ ನಿರ್ಮಾತೃ ಮುಂತಾದ ಪ್ರಮುಖ ಅಂಶಗಳ ನಿರ್ಧಾರದಲ್ಲೂ ಅಲ್ಲಲ್ಲಿ ಗೊಂದಲ ಉಳಿದಿರುವುದಂತೂ ನಿಜ. ಅನೇಕ ಪದಗಳಂತೂ ಇಂದೂ ಅರ್ಥಸ್ಪಷ್ಟತೆಯನ್ನೇ ಪಡೆಯದೆ ವಿದ್ವಾಂಸರನ್ನು ಕೆಣಕುತ್ತಿವೆ.

ಇಷ್ಟೆಲ್ಲ ವೈಶಿಷ್ಟ್ಯಗಳನ್ನು ಹೊಂದಿರುವ ಈ ಶಾಸನದ ದೇಹಗಾತ್ರವಾದರೂ ಎಷ್ಟು? ಅದರ ದೈಹಿಕ ಸ್ವರೂಪವೇನು? ಇದನ್ನು ಮೊದಲು ತಿಳಿಯಬೇಕು.

ಹಲ್ಮಿಡಿ ಶಾಸನವು ಒಂದು ಶಿಲಾಶಾಸನ. ಇದಕ್ಕೆ ಬಳಸಿರುವ ಕಲ್ಲು ಒಂದುರೀತಿಯ ಬಳಪದಕಲ್ಲು. ಸಾಧಾರಣವಾಗಿ ಹೊಯ್ಸಳ ಶೈಲಿಯ ದೇವಾಲಯ ನಿರ್ಮಾಣಕ್ಕೆ ಬಳಸುವ 'ಕ್ಲೊರೇಟಿಕ್‌ ಷಿಸ್ಟ್' ಎಂಬ ಜಾತಿಯ ಬಳಪದ ಕಲ್ಲನ್ನು ಹೋಲುವ ಮೃದುಶಿಲೆ.


ಶಾಸನದ ಎತ್ತರ ಎರಡೂವರೆ ಅಡಿ, ಅಗಲ ಒಂದು ಅಡಿ, ದಪ್ಪ ಒಂಭತ್ತು ಅಂಗುಲ. ಚಿತ್ರದಲ್ಲಿ ತೋರಿಸಿರುವಂತೆ ಶಾಸನ ಶಿಲೆಯ ಬುಡದ ಭಾಗದಲ್ಲಿ ಗೂಟದಂತಹ ಒಂದು ಕೆತ್ತನೆ ಇದೆ. ಸುಮಾರು 9 x 8 ಅಂಗುಲ ಗಾತ್ರದ ಈ ಗೂಟವನ್ನು ಪೀಠಶಿಲೆಯ ಗುಳಿಯಲ್ಲಿ ತೂರಿಸಿ ಶಾಸನವು ಭದ್ರವಾಗಿ, ನೆಟ್ಟಗೆ ನಿಲ್ಲುವಂತೆ ಮಾಡಿದ್ದರೆಂದು ಊಹಿಸಬಹುದು. ಈಗ ಪೀಠದ ಭಾಗವು

ಹಲ್ಮಿಡಿ ಶಾಸನದ ಸ್ವರೂಪ



ಶಾಸನದ ಶಿರೋಭಾಗ - ಸುದರ್ಶನ ಚಕ್ರ

ಇದನ್ನು ಅಗ್ನಿಜ್ವಾಲೆ ಎಂದೂ, ಸೂರ್ಯ ಎಂದೂ ಕೆಲವರು ಭಾವಿಸಿದ್ದಾರೆ. ಈ ಭಾಗವನ್ನು ಹಂಪೆಯ ಕನ್ನಡ ವಿಶ್ವವಿದ್ಯಾಲಯದ ಲಾಂಛನಕ್ಕೆ ಮಾದರಿಯಾಗಿ ಬಳಸಲಾಗಿದೆ.



ಬಲಬದಿ ಮುಂಬದಿ ಹಿಂಬದಿ ಎಡಬದಿ

ಚಿತ್ರ 2

ಕಣ್ಮರೆಯಾಗಿದೆ. ಈ ಪೀಠದಮೇಲೆ ಶಾಸನವನ್ನು ಭದ್ರವಾಗಿ ನಿಲ್ಲುವಂತೆ ಸಿಕ್ಕಿಸಿ, ಸಾರ್ವಜನಿಕರು ಇದನ್ನು ಸದಾ ಗಮನಿಸಲು ಅನುವಾಗುವಂತೆ ಪ್ರದರ್ಶಿಸಲಾಗಿತ್ತು. 'ಶಾಸನ' ಎಂಬ ಪದದ ಲಕ್ಷಣವೇ ಇದು ಅಲ್ಲವೆ?

'ಶಾಸನ' ಎಂಬ ಪದದ ಮೂಲ ಅರ್ಥ 'ಅಧಿಕಾರ ನಡೆಸುವಿಕೆ' ಎಂದಿತ್ತು. ಕ್ರಮೇಣ ಅದು 'ರಾಜನ ಆಜ್ಞೆ' ಎಂಬ ಅರ್ಥವ್ಯಾಪ್ತಿ ಪಡೆಯಿತು. ನಂತರ ಪ್ರಮುಖ ರಾಜಾಜ್ಞೆಗಳು ಲಿಪಿರೂಪದಲ್ಲಿ ದಾಖಲಾಗುತ್ತಾ ಇದ್ದುದರಿಂದ 'ಬರೆಯಲ್ಪಟ್ಟ ರಾಜಾಜ್ಞೆ' ಎಂಬ ಅರ್ಥದಲ್ಲಿ ಬಳಕೆಗೊಂಡಿತು. ಕ್ರಮೇಣ ರಾಜಾಜ್ಞೆಗಳೊಂದಿಗೆ ದಾನದ ದಾಖಲೆ ಅಕ್ಷರಸಾಹಿತ್ಯಉಳ್ಳ ವೀರರ ಸ್ಮಾರಕ, ಇವೆಲ್ಲವನ್ನು 'ಶಾಸನ' ಎಂದೇ ಕರೆಯತೊಡಗಿದರು. ಈ ರೀತಿ 'ಶಾಸನ' ಎಂಬ ಪದವು ನಿರ್ದಿಷ್ಟ ಅರ್ಥಪರಿಧಿಯೇ ಇಲ್ಲದೆ ವ್ಯವಹರಿಸಲ್ಪಡತೊಡಗಿತು.

'ಶಾಸನ' ಪದಕ್ಕೆ ನಿರ್ದಿಷ್ಟ ಅರ್ಥವ್ಯಾಪ್ತಿಯನ್ನು ರೂಪಿಸಿ, ಆ ಅರ್ಥವು ಆಧುನಿಕ ಭಾಷಿಕ ಅಗತ್ಯವನ್ನು ಸಮರ್ಥವಾಗಿ ಪೂರೈಸುವಂತಾಗಬೇಕೆಂದು 'ಇನ್‌ಸ್ಕ್ರಿಪ್ಷನ್' (INSCRIPTION) ಎಂಬ ಪದ ಸರಿಯಾದುದೆಂದು ನಿರ್ಧರಿಸಲಾಗಿದೆ. 'INSCRIBE' ಎಂದರೆ 'ಕೊರೆದು ಬರೆ' ಎಂದು ಅರ್ಥ. ಆದುದರಿಂದ ''INSCRIPTION ಎಂದರೆ ಗಟ್ಟಿಯಾದ ವಸ್ತುವಿನ ಮೇಲೆ ಕೊರೆದ ದಾಖಲಾತಿ'' ಎಂಬ ಅರ್ಥವು 'ಎನ್‌ಸೈಕ್ಲೋಪೀಡಿಯಾ ಬ್ರಿಟಾನಿಕಾ'ದಲ್ಲಿದೆ.

ಶಾಸನಾಧ್ಯಯನ ಶಾಸ್ತ್ರವು ಇಂದು 'ಶಾಸನ' ಎಂಬ ಪದಕ್ಕೆ ಮಾನ್ಯ ಮಾಡಿರುವ ಅರ್ಥ ಹೀಗಿದೆ.... ''.....ಶಾಸನವೆಂದರೆ ಅದು ಅಧಿಕೃತವಾಗಿರಬೇಕು. ಸರಿಸುಮಾರು ಸಾರ್ವಜನಿಕರ ಗಮನಕ್ಕೆ ಬರುವ ಉದ್ದೇಶದಿಂದ ಪ್ರದರ್ಶಿಸಲ್ಪಟ್ಟಿರಬೇಕು. ಶಾಶ್ವತ ದಾಖಲೆಯಾಗುವ ಉದ್ದಿಶ್ಯವನ್ನು ಹೊಂದಿರಬೇಕು. ದಿನಾಂಕವಿರಬಹುದು - ಇಲ್ಲದಿರಲೂಬಹುದು....'' ಇತ್ಯಾದಿ. ಈ ಅರ್ಥವ್ಯಾಪ್ತಿಯುಂಟಾಗಲು ಶಾಸನಾನ್ವೇಷಣಾಧಿಕಾರಿ ಜೆ.ಎಫ್. ಫ್ಲೀಟ್ ಎಂಬುವವರ ನಿರ್ದಿಷ್ಟ ವಿವರಣೆಯು ಕಾರಣವಾಯಿತು.

ಈ ವಿವರದ ಹಿನ್ನೆಲೆಯಲ್ಲಿ ಹಲ್ಮಿಡಿ ಶಾಸನವು ಈ ಅರ್ಥಕ್ಕೆ ಎಷ್ಟು ಮಟ್ಟಿಗೆ ಹೊಂದಿಕೊಳ್ಳುತ್ತದೆಂದು ನೋಡೋಣ.

ಇದೊಂದು ಶಿಲಾಶಾಸನ. ಕಲ್ಲಿನ ಮೇಲೆ ಕೊರೆದು ಬರೆಯಲ್ಪಟ್ಟಿದೆ. ರಾಜಾಧಿಕಾರಿಗಳಿಂದ ಅಧಿಕೃತವಾಗಿದೆ. ಸಾರ್ವಜನಿಕರಿಗೆ ಸದಾ ಗಮನಕ್ಕೆ ಬರುವಂತೆ ಊರ ಬಾಗಿಲಲ್ಲಿ ನಿಲ್ಲಿಸಲ್ಪಟ್ಟಿದೆ. ಶಾಶ್ವತ ದಾಖಲೆಯಾಗಬೇಕೆಂಬ ಶಾಸನಕರ್ತೃವಿನ ಆಶಯವೂ ಸ್ಪಷ್ಟ. ಈ ರೀತಿ ಹಲ್ಮಿಡಿ ಶಾಸನವು ಶಾಸನಾಧ್ಯಯನ ಶಾಸ್ತ್ರದ ಪ್ರಕಾರ

'ಶಾಸನ' ಎಂಬ ಪದಕ್ಕಿರುವ ಎಲ್ಲ ಲಕ್ಷಣಗಳನ್ನೂ ಹೊಂದಿದೆ.

ಶಾಸನದ ಕೆಳಭಾಗದಲ್ಲಿರುವ ಗೂಟದಂತಹ ಭಾಗವನ್ನು ಬಿಟ್ಟರೆ, ಶಾಸನಪಾಠವಿರುವ ಭಾಗವನ್ನು ಎರಡು ವಿಭಾಗ ಮಾಡಬಹುದು. ಶಾಸನದ ಮೇಲುಭಾಗವು ಸುಮಾರು ವೃತ್ತಾಕಾರದಲ್ಲಿದ್ದು, ಮೇಲ್ತುದಿಯು ಕಮಲದ ಮೊಗ್ಗಿನಂತೆ ಚೂಪಾಗಿದೆ. (ಚಿತ್ರದಲ್ಲಿ ವಿವರಗಳನ್ನು ಗಮನಿಸಿ) ಈ ವೃತ್ತವು ಸುಮಾರು ಹನ್ನೊಂದು ಅಂಗುಲ ವ್ಯಾಸದ್ದು. ಈ ವೃತ್ತದೊಳಗೆ ಮತ್ತೆರಡು ಆಂತರಿಕ ವೃತ್ತಗಳಿವೆ. ತೀರಾ ಒಳಗಿನ ವೃತ್ತದಲ್ಲಿ ಒಂದು ಚಕ್ರಾಕಾರವಿದ್ದು ಅದಕ್ಕೆ 9 ಅಂಗುಲಗಳಿವೆ. ಇದನ್ನು 'ಸುದರ್ಶನ ಚಕ್ರ'ವೆಂದೇ ಪ್ರಸಿದ್ಧವಾಗಿರುವ ವಿಷ್ಣುಚಕ್ರ ಎಂದು ಭಾವಿಸಲಾಗಿದೆ. ಈ ಸುದರ್ಶನ ಚಕ್ರದ ಸುತ್ತಲೂ ಹೊರವೃತ್ತವು ಒಂದು ಕಮಾನಿನಂತಿದ್ದು ಅದರೊಳಗೆ ವಿಷ್ಣುವನ್ನು ಸ್ತುತಿಸುವ ಒಂದು ಶ್ಲೋಕವಿದೆ. ಇದು ಶಾಸನದ ಮೊದಲನೇ ಸಾಲು ಕೂಡ ಆಗಿದೆ.

ಮೇಲುಭಾಗದ ಈ ವೃತ್ತಾಕಾರದ ನಂತರ, ಅದರ ಕೆಳಗಿನ ಭಾಗವು ಶಾಸನದ ನಿಜವಾದ ಪಾಠಭಾಗವಾಗಿದೆ. 12 ಅಂಗುಲ ಅಗಲ, 18 ಅಂಗುಲ ಎತ್ತರದ ಆಯತಾಕಾರದ ಈ ಫಲಕ ಭಾಗದಲ್ಲಿ ಶಾಸನದ ಸಾಹಿತ್ಯವು ಕೊರೆಯಲ್ಪಟ್ಟಿದೆ. ಈ ಆಯತಾಕಾರದ ಭಾಗದಲ್ಲಿ 14 ಸಾಲುಗಳಿವೆ. ಎಡದಿಂದ ಬಲಕ್ಕೆ ಸಾಗುವಂತೆ ನೇರಸಾಲುಗಳಲ್ಲಿ ಬರೆಯಲಾಗಿದೆ. ಅಕ್ಷರಗಳು ಸುಮಾರು ಮುಕ್ಕಾಲು ಅಂಗುಲ ಗಾತ್ರದವು. ಶಾಸನದ ಫಲಕಭಾಗವನ್ನು ಹಲಗೆಯಂತೆ ಸಮತಲಗೊಳಿಸಿ, ನಯಮಾಡಿ ಅದರ ಮೇಲೆ ಈ ಅಕ್ಷರಗಳನ್ನು ಕೊರೆಯಲಾಗಿದೆ.

ಶಾಸನ ಫಲಕದ ಜಾಗದಲ್ಲಿ 14 ಸಾಲುಗಳಿವೆ. ಇದಲ್ಲದೆ ಶಾಸನದ ಬಲಗಡೆಯ ಬದಿಯಲ್ಲಿ ಇನ್ನೊಂದು ಸಾಲನ್ನು ಕೊರೆಯಲಾಗಿದೆ. ಈ ಅಕ್ಷರಗಳು ಸ್ವಲ್ಪ ಹೆಚ್ಚು ಗಾತ್ರವಾಗಿವೆ. ಹೀಗೆ ಶಾಸನದಲ್ಲಿ ಒಟ್ಟು 16 ಸಾಲುಗಳನ್ನು ಕೊರೆಯಲಾಗಿದೆ.

ಇತರ ಕೆಲವು ಶಾಸನಗಳಲ್ಲಿರುವಂತೆ ಪಟ್ಟಿಕೆಗಳಾಗಲೀ, ದೇವತಾಚಿತ್ರಗಳಾಗಲೀ ಈ ಶಾಸನದಲ್ಲಿ ಕೆತ್ತಲ್ಪಟ್ಟಿಲ್ಲ. ಸುದರ್ಶನ ಚಕ್ರದಾಕಾರವನ್ನೇ ಚಿತ್ರಫಲಕ ಎಂದುಕೊಳ್ಳಬಹುದು.

ಶಾಸನ ದೇಹದ ಎಡಭಾಗದಲ್ಲಿ ಶಿಲಾದೋಷದ ಕಾರಣದಿಂದಾಗಿ ಒಂದು ಬಿರುಕು ಮೂಡಿ ಕೆಳಕ್ಕೆ ಬಂದಂತೆ ಅಗಲವಾಗುತ್ತಾ ಬಂದಿದೆ. ಬುಡದ ಗೂಟದ ಭಾಗದಲ್ಲಿ ತುಂಬಾ ಆಳವಾಗಿ ಸೀಳಿಕೊಂಡಿದೆ. ಚಿತ್ರ ಎರಡರಲ್ಲಿ ಇದನ್ನು ಗುರ್ತಿಸಬಹುದು.

ಅಧ್ಯಾಯ-5

ಶಾಸನದ ಲಿಪಿ ಸ್ವರೂಪ

ಹಲ್ಮಿಡಿ ಶಾಸನವನ್ನು ನೋಡುತ್ತೇವೆ. ಅದರ ಆಕಾರವನ್ನು ಗಮನಿಸುತ್ತೇವೆ, ಅದರ ಮೇಲೆ ಏನೋ ಬರೆದಿರುವುದನ್ನು ಕಾಣುತ್ತೇವೆ. ಆದರೆ ಏನು ಬರೆದಿದೆ ಎಂಬುದನ್ನು ಮಾತ್ರ ಸಾಮಾನ್ಯ ಜನರಾದ ನಾವು ಓದಿ ತಿಳಿಯಲಾರೆವು. ಏಕೆಂದರೆ ಜಗತ್ತಿನಲ್ಲಿ ಇಂದು ಬಳಕೆಯಲ್ಲಿರುವ ಯಾವುದೇ ಭಾಷೆಯ ಲಿಪಿ ಇದಲ್ಲ. ಆದ್ದರಿಂದಲೇ ಸಾಕ್ಷರರಾಗಿಯೂ, ಅನೇಕ ಭಾಷೆಗಳನ್ನು ಅರಿತಿದ್ದರೂ ಇದನ್ನು ನಾವು ಓದಲಾರೆವು. ''ಹಾಗಾದರೆ ಇದು ಯಾವ ಲಿಪಿ?'' ಎಂಬ ಪ್ರಶ್ನೆ ಏಳುತ್ತದೆ.

ಹಲ್ಮಿಡಿ ಶಾಸನದಲ್ಲಿ ಬಳಸಿರುವ ಲಿಪಿಯನ್ನು ಭಾಷಾಶಾಸ್ತ್ರಜ್ಞರು ಬ್ರಾಹ್ಮೀಲಿಪಿಯ ಒಂದು ಪ್ರಭೇದ ಎಂದು ಗುರ್ತಿಸಿದ್ದಾರೆ. ಬ್ರಾಹ್ಮೀಲಿಪಿಯು ಭಾರತದ ಪ್ರಾಚೀನ ಲಿಪಿಗಳಲ್ಲಿ ಒಂದು. ಅತಿ ಪ್ರಾಚೀನವೆಂದು ಊಹಿಸಲಾಗಿರುವ ಸಿಂಧೂ ನಾಗರೀಕತೆಯ ಸಾಂಕೇತಿಕ ಚಿತ್ರಲಿಪಿಯ ನಂತರ ಭಾರತದಲ್ಲಿ ಇನ್ನೂ ಹಲವು ಲಿಪಿಗಳು ಬಳಕೆಗೆ ಬಂದವು. ಇವುಗಳಲ್ಲಿ ಪ್ರಮುಖವಾದವು ಎರಡು. ಆ ಲಿಪಿಗಳನ್ನು 'ಬ್ರಾಹ್ಮೀ' ಮತ್ತು 'ಖರೋಷ್ಠೀ' ಎಂದು ಹೆಸರಿಸಲಾಗಿದೆ. ಭಾರತದ ಕೆಲವು ಪರಿಮಿತ ಪ್ರದೇಶಗಳಲ್ಲಿ ಮಾತ್ರ ಖರೋಷ್ಠೀ ಲಿಪಿ ಬಳಸಲ್ಪಟ್ಟಿದೆ. ಆದರೆ ಬ್ರಾಹ್ಮೀಲಿಪಿಯೇ ಹೆಚ್ಚು ಜನಪ್ರಿಯವಾಗಿ ಸರಿಸುಮಾರು ಭಾರತದೇಶದ ಪೂರ್ತಿ ಬಳಕೆಯಲ್ಲಿತ್ತು ಎಂಬ ಅಂಶ ಶಾಸನಗಳ ಅಧ್ಯಯನದಿಂದ ತಿಳಿದುಬಂದಿದೆ.

ಬ್ರಾಹ್ಮೀಲಿಪಿಯು ''ಭಾರತದಲ್ಲಿಯೇ ವೇದಕಾಲೀನ ಪವಿತ್ರ ಚಿಹ್ನೆಗಳಿಂದ ಹುಟ್ಟಿದೆ'' ಎಂದು ಕೆಲವರೂ, ''ವಿದೇಶೀ ಸಂಪರ್ಕದಿಂದ ಈ ಲಿಪಿಯು ಭಾರತಕ್ಕೆ ಆಮದಾಗಿದೆ'' ಎಂದು ಕೆಲವರೂ ಊಹಿಸಿದ್ದಾರೆ. ಅಂದರೆ ಬ್ರಾಹ್ಮೀಲಿಪಿಯ ಮೂಲವು ಖಚಿತವಾಗಿಲ್ಲ. ಏನೇ ಆದರೂ ಭಾರತದೇಶದ ಅತಿಪುರಾತನ ಲಿಪಿಗಳಲ್ಲಿ ಬ್ರಾಹ್ಮೀಲಿಪಿಯೂ ಒಂದು ಎಂಬುದು ಮಾತ್ರ ಸ್ಪಷ್ಟವಾಗಿದೆ. ''ಬಹುಶಃ ಕ್ರಿ.ಪೂ. ಎಂಟರಿಂದ ಆರನೆಯ ಶತಾಬ್ದದ ಒಳಗೆ ಬ್ರಾಹ್ಮೀಲಿಪಿಯು ಹೊರಗಿನಿಂದ ಬಂದು ಸಂಸ್ಕೃತ ವರ್ಣಮಾಲೆಗೆ ಅಳವಡಿಸಿರಬೇಕು'' ಎಂದು ಪುರಾತತ್ವ ವಿದ್ವಾಂಸ ಡಾ॥ ಎಸ್. ಶ್ರೀಕಂಠಶಾಸ್ತ್ರಿಗಳ ಅಭಿಪ್ರಾಯ. ಇಂದಿಗೂ ಸಂಸ್ಕೃತ, ಹಿಂದಿ ಮುಂತಾದ ಪ್ರಧಾನ

ಭಾಷೆಗಳಿಗೂ ಸ್ವಂತಲಿಪಿ ಇಲ್ಲ ಎಂಬುದನ್ನು ಇಲ್ಲಿ ನೆನಪು ಮಾಡಿಕೊಳ್ಳಬೇಕು.

ಆದಿತೀರ್ಥಂಕರನಾದ ಋಷಭದೇವನು ತನ್ನ ಹಿರಿಯ ಮಗಳಿಗೆ 'ಬ್ರಾಹ್ಮೀ' ಎಂದೇ ಹೆಸರಿಟ್ಟು ಅವಳಿಗೆ ಲಿಪಿಯನ್ನು ಕಲಿಸಿದ ಎಂದು ಜೈನರ ನಂಬಿಕೆ. ಜೈನರು ಒಪ್ಪುವ ಪುರಾತನ ಅಷ್ಟಾದಶ ಲಿಪಿಗಳಲ್ಲಿ ಬ್ರಾಹ್ಮಿಯೂ ಒಂದು.

ವೇದಕಾಲದಲ್ಲಿ ವೈದಿಕರೂ ಈ ಲಿಪಿಯನ್ನೇ ಬಳಸಿರಬೇಕು. ಆದರೆ ಅವರು ತಮ್ಮ ವಾಙ್ಮಯವನ್ನು ಬರೆದಿಡದೇ ಬಾಯಿಪಾಠ ಮಾಡುತ್ತಾ, ಅದನ್ನು ಶಿಷ್ಯರಿಗೆ ಮೌಖಿಕವಾಗಿ ವರ್ಗಾಯಿಸುತ್ತಿದ್ದರು ಎಂದು ಹೇಳುತ್ತಾರೆ. ವೇದಕಾಲೀನ ಜನರು ಬರೆಯುತ್ತಲೇ ಇರಲಿಲ್ಲವೋ ಅಥವಾ ಅಕಸ್ಮಾತ್ ಬರೆದಿದ್ದರೂ ಅವು ಇಂದು ಉಳಿದಿಲ್ಲವೋ, ಅಂತೂ ಭಾರತದ ವೇದಕಾಲೀನ ಲಿಪಿಸ್ವರೂಪವೇನು ಎಂಬುದು ಖಚಿತವಾಗಿಲ್ಲ. ಪುರಾತನ ಶಿಲಾಶಾಸನಗಳೇ ನಮಗೆ ಭಾರತದ ಪುರಾತನ ಲಿಪಿಸ್ವರೂಪದ ಪ್ರಾಥಮಿಕ ದಾಖಲೆಗಳಾಗಿದ್ದು, ಆ ಶಾಸನಗಳಲ್ಲಿ ಬ್ರಾಹ್ಮೀಲಿಪಿಯೇ ಹೆಚ್ಚು ಬಳಸಲ್ಪಟ್ಟಿದೆ.

ಒಂದು ವಿಷಯವನ್ನು ಇಲ್ಲಿ ಗಮನಿಸಬೇಕು. ಅತಿಪುರಾತನವಾದ ಪ್ರಾಕೃತ-ಸಂಸ್ಕೃತ ಭಾಷೆಯ ಶಾಸನಗಳು ಹೆಚ್ಚಾಗಿ ಸಿಕ್ಕಿರುವುದು ಉತ್ತರ ಭಾರತದಲ್ಲಿ. ಇವುಗಳಲ್ಲಿ ಕ್ರಿ.ಪೂ. 3 ನೇ ಶತಮಾನದ ಅಶೋಕನ ಧರ್ಮಲಿಪಿ (ಧರ್ಮಶಾಸನ)ಗಳು ಉಲ್ಲೇಖನೀಯ. ಅಶೋಕನ ಶಾಸನಗಳಲ್ಲಿ ಕೆಲವು ಖರೋಷ್ಠೀ ಲಿಪಿಯಲ್ಲಿದ್ದರೂ ಬಹುತೇಕ ಶಾಸನಗಳು ಬ್ರಾಹ್ಮೀಲಿಪಿಯಲ್ಲಿವೆ.

ಹಲ್ಮಿಡಿ ಶಾಸನದ ಲಿಪಿಯು ಬ್ರಾಹ್ಮೀಲಿಪಿಯ ಒಂದು ವಿಧವೇ ಆಗಿದೆಯಾದರೂ ಅಶೋಕನ ಕಾಲದ ಬ್ರಾಹ್ಮಿಗೂ ಇದಕ್ಕೂ ಬಹಳ ವ್ಯತ್ಯಾಸವಿದೆ. ಇವೆರಡು ಹಂತಗಳ ನಡುವೆ ಸುಮಾರು ಏಳುನೂರು ವರ್ಷಗಳ ಅಂತರವಿರುವುದೇ ಈ ವ್ಯತ್ಯಾಸಕ್ಕೆ ಕಾರಣ. ಬರೆಯುವ ಕ್ರಮ ಮತ್ತು ಬರೆಯಲು ಬಳಸುತ್ತಿದ್ದ ವಸ್ತುಗಳು ನಿರಂತರವಾಗಿ ಲಿಪಿಸ್ವರೂಪದಲ್ಲಿ ಬದಲಾವಣೆ ಮಾಡುತ್ತಾ ಹೋಗುತ್ತವೆ. ಅಶೋಕನ ಕಾಲಕ್ಕೆ ಉತ್ತರ ಭಾರತದಲ್ಲಿ ಶಾಸನೇತರವಾದ ಸಾಮಾನ್ಯ ಬರವಣಿಗೆಗೆ ಭೂರ್ಜ ಪತ್ರದ ತೊಗಟೆಯನ್ನು ಬಳಸುತ್ತಿದ್ದರು. ಹಾಗೆಯೇ ದಕ್ಷಿಣ ಭಾರತದಲ್ಲಿ ತಾಳೆಗರಿಯ ಮೇಲೆ ಕಬ್ಬಿಣದ ಕಡ್ಡಿಯ ಚೂಪುತುದಿಯುಳ್ಳ 'ಕಂಟ'ದಿಂದ ಬರೆಯುತ್ತಿದ್ದರು. ಇದರಿಂದ ಬರೆಯುವ ಶೈಲಿಗಳೂ ಬದಲಾವಣೆಗೊಂಡು ಉತ್ತರ ಭಾರತದಲ್ಲಿಯೇ ಒಂದುರೀತಿ ಮತ್ತು ದಕ್ಷಿಣ ಭಾರತದಲ್ಲಿಯೇ ಇನ್ನೊಂದು ರೀತಿ -ಹೀಗೆ ಬ್ರಾಹ್ಮೀಲಿಪಿಯಲ್ಲಿ ಎರಡು ಲೇಖನ ಶೈಲಿಗಳು ಉಂಟಾದವು. ಈ ಎರಡು ಪ್ರಮುಖ ಪ್ರಭೇದಗಳನ್ನು

'ಔತ್ತರೇಯ ಬ್ರಾಹ್ಮೀ' ಮತ್ತು 'ದಾಕ್ಷಿಣಾತ್ಯ ಬ್ರಾಹ್ಮೀ' ಎಂದು ಹೆಸರಿಸಲಾಗಿದೆ.

ಉತ್ತರ ಭಾರತದ ಭಾಷಾಲಿಪಿಗಳು ಔತ್ತರೇಯ ಬ್ರಾಹ್ಮೀ ಶೈಲಿಯಿಂದಲೂ, ದಕ್ಷಿಣ ಭಾರತದ ಭಾಷಾಲಿಪಿಗಳು ದಾಕ್ಷಿಣಾತ್ಯ ಬ್ರಾಹ್ಮೀ ಶೈಲಿಯಿಂದಲೂ ಉಗಮಿಸಿವೆ. ನಮ್ಮ ಕನ್ನಡ ಲಿಪಿಯೂ ಈ ದಾಕ್ಷಿಣಾತ್ಯ ಬ್ರಾಹ್ಮೀ ಲಿಪಿಯಿಂದಲೇ ಹುಟ್ಟಿಬಂದಿರುವ ಲಿಪಿಭೇದಗಳಲ್ಲಿ ಒಂದು.

ಹಲ್ಮಿಡಿ ಶಾಸನದಲ್ಲಿ ನಾವು ಕಾಣುವ ಲಿಪಿಯು ದಾಕ್ಷಿಣಾತ್ಯ ಬ್ರಾಹ್ಮೀ ಲಿಪಿಯಿಂದ ಕನ್ನಡ ಲಿಪಿಯು ಉಗಮವಾಗುವ ಪರ್ವಕಾಲದ್ದು. ಮೂಲ ಬ್ರಾಹ್ಮೀ ಲಿಪಿಯಿಂದ್ಧ. ಕನ್ನಡ ಲಿಪಿಯು ಉಗಮಿಸಿ ಇಂದಿನ ರೂಪಕ್ಕೆ ಬರುವತನಕ ಹೊಂದುತ್ತಾ ಬಂದ ರೂಪಾಂತರಮಾರ್ಗದ ಪ್ರಮುಖ ಹಂತಗಳಲ್ಲಿ ಕೆಲವನ್ನು ಇಲ್ಲಿನ ಚಿತ್ರದಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

ಮೂಲ ಬ್ರಾಹ್ಮೀಲಿಪಿಯು ನೇರ ಮತ್ತು ಅಡ್ಡಗೆರೆಗಳೇ ಪ್ರಧಾನವಾಗಿರುವ ನೀಳ ಅಕ್ಷರಗಳನ್ನು ಹೊಂದಿತ್ತು. ಅಶೋಕನ ಶಾಸನಗಳಲ್ಲಿ ಈ ಲಿಪಿ ಸ್ವರೂಪವನ್ನು ಕಾಣಬಹುದು. ಅಶೋಕನ ನಂತರದಲ್ಲಿ ಮಧ್ಯ ಮತ್ತು ದಕ್ಷಿಣ ಭಾರತವನ್ನು ಆಳಿದ ಶಾತವಾಹನ ರಾಜರ ಕಾಲದಲ್ಲಿ ಬ್ರಾಹ್ಮೀಲಿಪಿಯ ನೇರವಾದ ಗೆರೆಗಳು ಸ್ವಲ್ಪಮಟ್ಟಿಗೆ ಬಾಗತೊಡಗಿದವು. ಲಿಪಿಕಾರರು ತಮ್ಮ ಬರವಣಿಗೆಯನ್ನು ಸುಂದರವಾಗಿ ಕಾಣಿಸಲು ಅಲಂಕಾರಯುಕ್ತವಾಗಿ ಬರೆಯಲೆತ್ನಿಸುತ್ತಾರಲ್ಲವೆ - ಹಾಗೆಯೇ ಕ್ರಿ.ಶ. ಒಂದನೇ ಶತಮಾನದಲ್ಲಿ ಇಂತಹ ಪ್ರಯೋಗಗಳಿಂದ ದಕ್ಷಿಣ ಭಾರತದ ಬ್ರಾಹ್ಮೀಲಿಪಿಯ ನೇರಗೆರೆಗಳು ಸ್ವಲ್ಪ ಬಾಗಿದ ಗೆರೆಗಳಾಗಿ ಮಾರ್ಪಟ್ಟವು, ಅಂದರೆ ಸ್ವಲ್ಪ ಕಮಾನಿನಂತಾದವು. ಇದು ನೇರಗೆರೆಯ ಅಕ್ಷರವು ದುಂಡು ಅಕ್ಷರವಾಗಿ ಬದಲಾಗತೊಡಗಿದ ಮೊದಲ ಹಂತವಾಗಿದೆ. ಮುಂದೆ ಅಕ್ಷರಗಳಿಗೆ ತಲೆಕಟ್ಟು ಬರೆಯುವ ಪ್ರವೃತ್ತಿಯೂ ತೊಡಗಿಕೊಂಡಿತು. ಪೂರ್ಣರೂಪದಲ್ಲಿ ಅಲ್ಲದಿದ್ದರೂ, ಅಕ್ಷರಗಳ ಮೇಲುತುದಿಯನ್ನು ತ್ರಿಕೋಣಾಕಾರದಲ್ಲಿ ಅಲಂಕಾರಯುತವಾಗಿ ಬರೆಯುವ ಕ್ರಮ ಆರಂಭವಾಯಿತು. ಶಾತವಾಹನರ ಅಧಿಕಾರದ ಕಾಲದಲ್ಲಿ ಈ ರೂಪಾಂತರವಾದುದರಿಂದ ಇದನ್ನು 'ಶಾತವಾಹನ ಲಿಪಿ' ಎನ್ನುತ್ತೇವೆ.

ಬ್ರಾಹ್ಮೀಲಿಪಿಯ ಶಾತವಾಹನಕಾಲೀನ ರೂಪವು ಎರಡು ಮೂರು ಶತಮಾನಗಳಷ್ಟು ಕಾಲ ಬಳಕೆಯಲ್ಲಿದ್ದೂ, ನಿಧಾನವಾಗಿ ಮಾರ್ಪಾಡನ್ನು ಹೊಂದುತ್ತಾ ಬಂತು. ಕ್ರಿ.ಶ. ನಾಲ್ಕನೇ ಶತಮಾನದ ವೇಳೆಗೆ ಕನ್ನಡ ನೆಲವು ಶಾತವಾಹನರಿಂದ ಕದಂಬರು, ಪಲ್ಲವರು ಮುಂತಾದ ರಾಜವಂಶಗಳ ಕೈಗೆ ಬಂತು. ನೆರೆಯ ಗುಪ್ತರ

ಕಾಲದಲ್ಲಿ ಬಳಕೆಗೆ ಬಂದ ರೂಪಭೇದಕ್ಕೆ 'ಗುಪ್ತರ ಲಿಪಿ' ಎಂದು ಹೆಸರು. ಗುಪ್ತರ ಕಾಲದ ಲಿಪಿರೂಪಾಂತರವು ಕದಂಬರು ಬಳಸಿದ ಲಿಪಿಯ ಮೇಲೆ ಸಾಕಷ್ಟು ಪ್ರಭಾವ ಬೀರಿತ್ತು. ಕದಂಬರ ಆಡಳಿತದ ಸುಮಾರು ಎರಡು ಶತಮಾನಗಳ ಕಾಲದಲ್ಲೂ ಲಿಪಿಯು ಕ್ರಮೇಣ ಬದಲಾವಣೆ ಹೊಂದಿದೆ. ಕದಂಬರ ಆರಂಭಕಾಲದ ಶಾಸನಲಿಪಿಗೂ (ಉದಾಹರಣೆಗೆ ಮಯೂರವರ್ಮನ ಚಂದ್ರವಳ್ಳಿ ಶಾಸನ) ಮಧ್ಯಕಾಲೀನ ಶಾಸನಗಳ ಲಿಪಿಗೂ (ಉದಾ: ತಾಳಗುಂದದ ಶಾಂತಿವರ್ಮನ ಸ್ತಂಭ ಶಾಸನ) ಸಾಕಷ್ಟು ವ್ಯತ್ಯಾಸಗಳಿರುವುದು ಬ್ರಾಹ್ಮೀಲಿಪಿಯಲ್ಲಿ ನಿರಂತರವಾಗಿ ನಡೆದ ಸ್ವರೂಪ ಬದಲಾವಣೆಯನ್ನು ಎತ್ತಿತೋರಿಸುತ್ತದೆ. ಈರೀತಿ ಅಶೋಕನ ಕಾಲದಿಂದ ಕದಂಬರ ಕಾಲದವರೆಗಿನ ಸುಮಾರು ಏಳುನೂರು ವರ್ಷಗಳ ಅವಧಿಯಲ್ಲಿ ಬ್ರಾಹ್ಮೀಲಿಪಿಯು ಸಾಕಷ್ಟು ರೂಪಾಂತರ ಹೊಂದಿತು.

ಕದಂಬರ ಕಾಲದಲ್ಲಿ - ಹಲ್ಮಿಡಿ ಶಾಸನವು ಸೃಷ್ಟಿಯಾಗುವ ಹೊತ್ತಿಗೆ ಇಂತಹ ಅನೇಕರೀತಿಯ ಲಿಪ್ಯಾತ್ಮಕ ಬದಲಾವಣೆಗಳು ನಡೆದು ಒಂದು ವಿಶಿಷ್ಟರೀತಿಯ ದಾಕ್ಷಿಣಾತ್ಯ ಬ್ರಾಹ್ಮೀಲಿಪಿ ಸ್ವರೂಪವು ರೂಪುಗೊಂಡಿತ್ತು. ಕದಂಬರ ರಾಜರು ತಮ್ಮ ಆರಂಭಕಾಲೀನ ಸಂಸ್ಕೃತ ಭಾಷೆಯ ಶಾಸನಗಳಿಗೂ ಇದೇ ಲಿಪಿಯನ್ನೇ ಬಳಸಿದ್ದಾರೆ. ಆ ಕಾಲದಲ್ಲಿ ಬಳಕೆಯಲ್ಲಿದ್ದ ಪ್ರಾಕೃತ, ಸಂಸ್ಕೃತ, ಕನ್ನಡ ಮುಂತಾದ ಎಲ್ಲ ಭಾಷೆಗಳಿಗೂ ಸ್ವತಂತ್ರ ಲಿಪಿ ಇರಲೇ ಇಲ್ಲ. ಲಭ್ಯವಿದ್ದ ಬ್ರಾಹ್ಮೀಲಿಪಿಯನ್ನೇ ಎಲ್ಲ ಭಾಷೆಗಳೂ ಬಳಸಿಕೊಂಡವು ಎಂಬ ಸತ್ಯವನ್ನು ಕಾಣಬಹುದು. ಆದರೆ ಇದೇ ಪರಿಸ್ಥಿತಿ ಮುಂದೆಯೂ ಉಳಿಯಲಿಲ್ಲ.

ದಕ್ಷಿಣ ಭಾರತದಲ್ಲಿ ಪ್ರಚಾರದಲ್ಲಿದ್ದ ದಾಕ್ಷಿಣಾತ್ಯ ಬ್ರಾಹ್ಮೀಲಿಪಿಯಿಂದ ಮುಂದೆ ದಕ್ಷಿಣ ಭಾರತದ ಭಾಷೆಗಳಾದ ಕನ್ನಡ, ತೆಲುಗು, ತಮಿಳು, ಮಲೆಯಾಳಿ, ತುಳು ಮುಂತಾದ ಭಾಷೆಗಳು ತಮ್ಮ ತಮ್ಮ ಸ್ವಂತ ಲಿಪಿಗಳನ್ನು ರೂಪಿಸಿಕೊಂಡವು. ಕ್ರಮೇಣ ತುಳು ಭಾಷೆಯು ತನ್ನ ಲಿಪಿಯನ್ನು ಬಳಸದೇ ಮರೆತುಕೊಂಡಿತಾದರೂ ಕನ್ನಡ, ತೆಲುಗು, ತಮಿಳು, ಮಲೆಯಾಳೀ ಭಾಷೆಗಳು ತಮ್ಮ ತಮ್ಮ ಲಿಪಿಗಳನ್ನು ಅದ್ಭುತವಾಗಿ ಅಭಿವೃದ್ಧಿಪಡಿಸಿಕೊಂಡವು.

ಅತ್ತ ಉತ್ತರ ಭಾರತದಲ್ಲಿ ಔತ್ತರೇಯ ಬ್ರಾಹ್ಮೀಲಿಪಿಯು ಬಂಗಾಳೀ, ಗುಜರಾಥೀ, ಒರಿಯಾ ಮುಂತಾದ ಭಾಷೆಗಳಿಗೆ ಸ್ವತಂತ್ರ ಲಿಪಿಯನ್ನೂ ಸಂಸ್ಕೃತ, ಹಿಂದೀ ಮುಂತಾದ ಭಾಷೆಗಳಿಗೆ ದೇವನಾಗರೀ ಲಿಪಿಯನ್ನೂ ಒದಗಿಸಿಕೊಟ್ಟಿತು. ನಾಗರಿ, ನಂದಿನಾಗರಿ, ಶಾರದಾ ಮುಂತಾದ ಅನೇಕ ಲಿಪಿಪ್ರಭೇದಗಳು ಜನ್ಮಪಡೆದು ಕೆಲವುಕಾಲ

ಬಳಕೆಗೊಂಡರೂ, ಈಚೆಗೆ ಬಳಕೆಯಿಂದ ದೂರಾಗಿವೆ.

ಒಟ್ಟಿನಲ್ಲಿ ಇಂದು ಭಾರತದಲ್ಲಿ ಬಳಕೆಯಲ್ಲಿರುವ ಭಾರತೀಯ ಭಾಷಾಲಿಪಿಗಳಿಗೆಲ್ಲ ಬ್ರಾಹ್ಮೀಲಿಪಿಯೇ ತಾಯಿಯಾಗಿ ವರ್ತಿಸಿದೆ. ಕದಂಬರ ಆಳ್ವಿಕೆಯ ಹೊತ್ತಿಗೆ ಬ್ರಾಹ್ಮೀಲಿಪಿಯ ದಾಕ್ಷಿಣಾತ್ಯ ಪ್ರಭೇದವು ಗುಂಡು ಅಕ್ಷರಗಳಾಗುವ ಹಂತಕ್ಕೆ ಬಂದಿದ್ದು, ತಲೆಕಟ್ಟೂ ಕೂಡ ಕಾಣಿಸಿಕೊಂಡಿತ್ತು. ತಲೆಕಟ್ಟು ಈಗಿರುವಂಥಲ್ಲದಿದ್ದರೂ, ಅದರ ಮೊಳಕೆ ಎನ್ನುವ ಹಂತದಲ್ಲಿತ್ತು. ಈ ಲಿಪಿಹಂತವನ್ನು 'ಕದಂಬ ಶೈಲಿಯ ದಾಕ್ಷಿಣಾತ್ಯ ಬ್ರಾಹ್ಮೀ' ಎಂದು ಕರೆಯಲಾಗಿದೆ. ಈ ಲಿಪಿಯನ್ನೇ ಕದಂಬರು ತಮ್ಮ ಸಂಸ್ಕೃತ ಶಾಸನಗಳಿಗೂ ಬಳಸಿದ್ದಾರೆ.

ಕದಂಬರ ಆಡಳಿತಾವಧಿಯ ಮಧ್ಯಭಾಗದಲ್ಲಿ ಹಲ್ಮಿಡಿ ಶಾಸನದ ಆವಿರ್ಭಾವವಾಯಿತು. ಇದರಲ್ಲಿ ಕನ್ನಡ ಭಾಷೆಯನ್ನು ಬಳಸಲಾಗಿದೆ. ಈ ಶಾಸನದ ಕಾಲಕ್ಕಿಂತ ಮೊದಲಿನ ಯಾವ ಕನ್ನಡ ಶಾಸನವೂ ಇಲ್ಲಿಯತನಕ ಲಭ್ಯವಾಗಿಲ್ಲವಾದುದರಿಂದ ಹಲ್ಮಿಡಿ ಶಾಸನವನ್ನು 'ಕನ್ನಡದ ಮೊತ್ತಮೊದಲ ಲಿಖಿತ ಕನ್ನಡ ದಾಖಲೆ' ಎಂದು ಸ್ವೀಕರಿಸಲಾಗಿದೆ. ಆದುದರಿಂದಲೇ ಈ ಶಾಸನಕ್ಕೆ ಭಾಷಾಜಗತ್ತಿನಲ್ಲಿ ಮೊದಲ ಮಣೆ, ಅಗ್ರತಾಂಬೂಲ.

ಇಲ್ಲಿ ಒಂದು ಅಂಶವನ್ನು ಸ್ಪಷ್ಟಮಾಡಿಕೊಳ್ಳಬೇಕು. ಮೊತ್ತಮೊದಲು ಕನ್ನಡದ ಅಧಿಕೃತ ಅತಿಪುರಾತನ ಲಿಖಿತ ದಾಖಲೆ ಸಿಕ್ಕಿರುವುದು ಹಲ್ಮಿಡಿ ಗ್ರಾಮದಲ್ಲಿ. ಆದರೆ ಈ ಅಂಶವನ್ನು ಉತ್ಪ್ರೇಕ್ಷಿಸಿ ಕೆಲವರು 'ಕನ್ನಡ ಭಾಷೆಯು ಜನಿಸಿದ್ದೇ ಹಲ್ಮಿಡಿ ಗ್ರಾಮದಲ್ಲಿ' ಎಂದೂ ಭಾವಿಸುವುದುಂಟು. ಹಾಗೆಂದುಕೊಳ್ಳುವುದು ಒಂದು ಭ್ರಮೆಯೇ ಹೊರತು ವಾಸ್ತವವಲ್ಲ. ಹಲ್ಮಿಡಿಯ ಶಾಸನವು ನಿರ್ಮಾಣವಾಗುವ ಬಹಳ ಮೊದಲೇ ಕನ್ನಡ ಭಾಷೆಯು ಮೂಲದ್ರಾವಿಡ ಭಾಷೆಯಿಂದ ಸ್ವತಂತ್ರತೆಯನ್ನು ಕಂಡುಕೊಂಡಿತ್ತು. ಸ್ವಂತ ಅಸ್ತಿತ್ವವನ್ನು ಪಡೆದಿತ್ತು. ಹಲ್ಮಿಡಿ ಶಾಸನದಲ್ಲಿ ನಾವು ಕಾಣುವುದು ಕನ್ನಡ ಭಾಷೆಯ ಪ್ರೌಢಸ್ವರೂಪವನ್ನು, ಶೈಶವಾವಸ್ಥೆಯನ್ನಲ್ಲ. ಆದ್ದರಿಂದ ಹಲ್ಮಿಡಿ ಗ್ರಾಮವು ನಮಗೆ ಮೊತ್ತಮೊದಲು ಕನ್ನಡ ಭಾಷೆಯ ಲಿಖಿತ ದಾಖಲೆಯನ್ನು ನೀಡಿದ ಗ್ರಾಮವೇ ಹೊರತು ಕನ್ನಡಭಾಷೆಯ ಜನ್ಮಭೂಮಿಯಲ್ಲ. ಕನ್ನಡ ಭಾಷೆಯ ಶಾಸನದ ಲಭ್ಯತೆಯಿಂದಾಗಿ ಆ ಊರಿಗೆ ಪ್ರಾಶಸ್ತ್ಯವೇ ಹೊರತು, ಆ ಊರಿನಿಂದಲೇ ಕನ್ನಡ ಭಾಷೆಗೆ ಪ್ರಾಶಸ್ತ್ಯವಲ್ಲ. ಈ ಅಂಶವನ್ನು ಮೊದಲು ಖಚಿತಪಡಿಸಿಕೊಳ್ಳಬೇಕು.

ನಂತರ ಗಮನಿಸಬೇಕಾದ ಮುಂದಿನ ಅಂಶವೆಂದರೆ - ಹಲ್ಮಿಡಿ ಶಾಸನವು ಕನ್ನಡ ಶಾಸನ ನಿಜ. ಆದರೆ ಅದರಲ್ಲಿ ಬಳಸಲ್ಪಟ್ಟಿರುವ ಲಿಪಿಯು ಕನ್ನಡ ಲಿಪಿಯ ಮೂಲ

ಸ್ವರೂಪವಾಗಿದೆ. ಇಂದು ನಾವು ಬಳಸುತ್ತಿರುವ ಕನ್ನಡ ಲಿಪಿ ಸ್ವರೂಪವಲ್ಲ. ಆದುದರಿಂದ ಇಂದಿನ ಕನ್ನಡ ಲಿಪಿಯನ್ನು ಓದಬಲ್ಲ ನಾವು ಆ ಶಾಸನದ ಕನ್ನಡ ಲಿಪಿಯನ್ನು ಓದಲಾರೆವು. ಅದೇ ಲಿಪಿಯು 15 ಶತಮಾನಗಳ ಅವಧಿಯಲ್ಲಿ ನಿರಂತರ ವಿಕಸನಗೊಂಡು ಇಂದಿನ ಹಂತವನ್ನು ತಲುಪಿದೆ.

ಹಾಗೆನೋಡಿದರೆ ಲಿಪಿಯ ವಿಕಾಸ ಪ್ರಕ್ರಿಯೆಯಲ್ಲಿ ಕನ್ನಡ ಲಿಪಿಯು ಸ್ವತಂತ್ರ ರೂಪವನ್ನು ಪಡೆದುಕೊಂಡ ಮೇಲೆ ಬ್ರಾಹ್ಮೀಲಿಪಿಯ ಬಳಕೆ ನಿಂತುಹೋಯಿತು. ಒಂದೊಮ್ಮೆ ಬ್ರಾಹ್ಮೀಲಿಪಿಯನ್ನು ಓದುವವರೇ ಇಲ್ಲವಾಗಿ ಆ ಲಿಪಿಯು ಮರೆತೇಹೋಗಿಬಿಟ್ಟಿತ್ತು. ಬ್ರಿಟಿಷರು ಭಾರತವನ್ನಾಳುವಾಗ ಬ್ರಿಟಿಷ್ ಅಧಿಕಾರಿಗಳು ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳಿಂದ ಆಕರ್ಷಿತರಾಗಿ ಅವುಗಳ ಆಳವಾದ ಸಂಶೋಧನೆಗಿಳಿದರು. ಭಾರತದ ಪುರಾತನ ಶಾಸನಗಳಲ್ಲಿ ಬಳಕೆಗೊಂಡಿದ್ದ ಬ್ರಾಹ್ಮೀಲಿಪಿಯು ಯಾವ ಭಾರತೀಯನೂ ಓದಲು ಸಾಧ್ಯವಿಲ್ಲದಷ್ಟು ಮರೆತೇಹೋಗಿದ್ದುದರಿಂದ ಇತಿಹಾಸಕ್ಕೆ ಆಕರಗಳಾದ ಶಾಸನಗಳನ್ನು ಓದಲು ಸಾಧ್ಯವಾಗಲಿಲ್ಲ. ಮೊದಲಿಗೆ ಆ ಲಿಪಿಯ ಉಚ್ಚಾರವನ್ನು ನಿರ್ಧರಿಸಿಕೊಂಡು ನಂತರ ಶಾಸನಗಳನ್ನು ಓದಬೇಕಾಯ್ತು. ಕ್ರಿ.ಶ. 1836 ರಲ್ಲಿ ಜೇಮ್ಸ್ ಪ್ರಿನ್ಸೆಪ್ ಎಂಬ ಬ್ರಿಟಿಷ್ ಅಧಿಕಾರಿಯು ಎರಡು ಭಾಷೆಗಳಲ್ಲಿ ಟಂಕಿಸಲ್ಪಟ್ಟ ಪುರಾತನ ನಾಣ್ಯಗಳ ಮೇಲಿನ ಅಕ್ಷರಗಳನ್ನು ಪರಸ್ಪರ ಸಮೀಕರಿಸಿ, ತಾಳೆನೋಡಿ ಸ್ವರ, ವ್ಯಂಜನ, ಒತ್ತಕ್ಷರ, ಕಾಗುಣಿತ ಮುಂತಾದುವನ್ನು ಗುರ್ತಿಸುವ ಮೂಲಕ ಬ್ರಾಹ್ಮೀಲಿಪಿಯ ಅನೇಕ ಅಕ್ಷರಗಳನ್ನು ಓದಲು ಶಕ್ತನಾದನು. ಜೇಮ್ಸ್ ಪ್ರಿನ್ಸೆಪ್‌ನ ಈ ಸಾಧನೆ ಮತ್ತು ಇತರ ಸಂಶೋಧಕರು ನಂತರ ಮಾಡಿದ ಸಂಶೋಧನೆಗಳಿಂದ ಬ್ರಾಹ್ಮೀಲಿಪಿಯ ರಹಸ್ಯವನ್ನು ಭೇದಿಸಲು ಸಾಧ್ಯವಾಯ್ತು. ಅನ್ಯಥಾ ಬ್ರಾಹ್ಮೀಲಿಪಿಯೂ ಸಹ ಸಿಂಧೂಲಿಪಿ ಹಾಗೂ ವಿಶ್ವದ ಇತರ ಅನೇಕ ಲಿಪಿಗಳಂತೆ ದುರ್ಭೇದ್ಯವಾಗಿ ಉಳಿಯುತ್ತಿತ್ತೋ ಏನೋ! ಈ ಸಂಶೋಧನೆಗಳ ನಂತರವೇ ಬ್ರಾಹ್ಮೀಲಿಪಿಯ ಮೂಲಸ್ವರೂಪ, ನಂತರದ ಕಾಲಾನುಕ್ರಮದಲ್ಲಿ ಆ ಲಿಪಿಯ ವಿಕಾಸದ ಹಂತಗಳು, ರೂಪಪರಿವರ್ತನೆಗಳು ಇತ್ಯಾದಿ ಹಂತಗಳನ್ನು ಗುರ್ತಿಸಲು ಸಾಧ್ಯವಾಯ್ತು. ಇದರಿಂದ ಶಾಸನಗಳ ಲಿಪಿಯ ಕಾಲಾನುಕ್ರಮವನ್ನು ಸುಲಭವಾಗಿ ಗುರ್ತಿಸಿ, ಅವನ್ನು ಸಮರ್ಥವಾಗಿ ಓದಲೂ ಸಾಧ್ಯವಾಯಿತು.

ಬ್ರಾಹ್ಮೀಲಿಪಿಯ ಪುರಾತನತೆಯನ್ನು ಕನಿಷ್ಟ ಕ್ರಿ.ಪೂ. 6ನೇ ಶತಮಾನಕ್ಕೆ ಒಯ್ಯಲು ಯತ್ನಿಸಲಾಗಿದೆ. ಅಶೋಕನಿಗಿಂತ ಒಂದೆರಡು ಶತಮಾನಗಳ ಹಿಂದಿನದು ಎನ್ನುವ


ಕೆಲವು ಲೇಖನಗಳನ್ನು ತಜ್ಞರು ದಾಖಲಿಸಿದ್ದಾರೆ. ಆದರೆ ಅವುಗಳು ಒದಗಿಸುವ ಮಾಹಿತಿ ಅತ್ಯಲ್ಪ ಮತ್ತು ಸಂದಿಗ್ಧ. ಆದರೆ ಕ್ರಿ.ಪೂ. 3ನೇ ಶತಮಾನದ ಅಶೋಕನ ಧರ್ಮಶಾಸನಗಳು ಬ್ರಾಹ್ಮೀಲಿಪಿಯ ಪೂರ್ಣಮಾಹಿತಿ ನೀಡುವುದರಿಂದ ಭಾರತೀಯ ಪುರಾತನ ಲಿಪಿಶಾಸ್ತ್ರ (PALAEOGRAPHY) ದಲ್ಲಿ ಅಶೋಕನ ಲಿಪಿಯನ್ನೇ ಬ್ರಾಹ್ಮೀಲಿಪಿಯ ಪ್ರಾಚೀನರೂಪವೆಂದು ಒಪ್ಪಬಹುದಾಗಿದೆ. ಇದನ್ನೇ 'ಮೂಲ ಬ್ರಾಹ್ಮೀಲಿಪಿ' ಎಂದೂ ಸ್ವೀಕರಿಸಬಹುದು. ಇದರ ನಂತರದ ವಿಕಾಸ ಹಂತಗಳನ್ನು ಕ್ರಿ.ಶ. 1 ನೇ ಶತಮಾನದಲ್ಲಿ ಶಾತವಾಹನ ಬ್ರಾಹ್ಮೀ, ಕ್ರಿ.ಶ. 3 ನೇ ಶತಮಾನದಲ್ಲಿ ಗುಪ್ತರ ಬ್ರಾಹ್ಮೀ, ಕ್ರಿ.ಶ. 4ನೇ ಶತಮಾನದಲ್ಲಿ ಕದಂಬರ ಬ್ರಾಹ್ಮೀ ಹೀಗೆ ಗುರ್ತಿಸಲಾಗಿದೆ. ಹಲ್ಮಿಡಿ ಶಾಸನದ ಲಿಪಿ 'ಕದಂಬ ಬ್ರಾಹ್ಮಿ'ಯಾಗಿದ್ದು ಇದು ಕನ್ನಡಲಿಪಿಯ ಮೂಲಸ್ವರೂಪವೆಂದು ಒಪ್ಪಲಾಗಿದೆ. ಇಲ್ಲಿಂದ ಮುಂದಕ್ಕೆ ಕನ್ನಡ ಲಿಪಿಯು ಸ್ವತಂತ್ರ ಅಸ್ತಿತ್ವವನ್ನು ಪಡೆಯುತ್ತಾ ಬಂತು.

ಈ ಹಿನ್ನೆಲೆಯಲ್ಲಿ ಅಶೋಕನ ಬ್ರಾಹ್ಮಿಯಿಂದ ಕಂಪ್ಯೂಟರ್ ಕನ್ನಡದವರೆಗಿನ ಲಿಪಿವಿಕಾಸದ ವಿವಿಧ ಮುಖ್ಯ ಘಟ್ಟಗಳನ್ನು 'ಹಲ್ಮಿಡಿಯ ಕನ್ನಡ ಶಾಸನ' ಎಂಬ ಅಕ್ಷರಗಳನ್ನು ಮಾದರಿಯಾಗಿ ಬಳಸಿ ಲಿಪಿ ರೂಪಾಂತರವನ್ನು ಕಾಲಾನುಕ್ರಮದಲ್ಲಿ ತೋರಿಸುವಂತೆ ಇಲ್ಲಿ ಒಂದು ಚಿತ್ರವನ್ನು ರೂಪಿಸಿ ಕೊಡಲಾಗಿದೆ. (ಚಿತ್ರ 3)

ಇದನ್ನು ಪರಿಶೀಲಿಸಿ ನೋಡಿ. ಅಶೋಕಕಾಲೀನ ಲಿಪಿಯಲ್ಲಿ ನೇರವಾದ ಪ್ರಧಾನಗೆರೆಯೊಂದು ಅಕ್ಷರಗಳ ಅಕ್ಷರೇಖೆಯಂತಿದೆ. ಬರೆಯುವ ಶೈಲಿ ಮತ್ತು ದೇಶಾಂತರ ವೈವಿಧ್ಯತೆಗಳಿಂದ ಶಾತವಾಹನ ಮತ್ತು ಗುಪ್ತರ ಕಾಲದಲ್ಲಿ ನೇರ ಅಕ್ಷರೇಖೆಯು ಬಾಗುತ್ತಾ ಬಂದು ಕದಂಬರ ಕಾಲಕ್ಕೆ ನೇರ ಅಕ್ಷರೇಖೆ ಇಲ್ಲದೆ ಅಕ್ಷರವು ದುಂಡಾಗುವ ಹಂತಕ್ಕೆ ಬಂದಿತ್ತು. ಆದರೆ ಗ-ಸ ಇವೆರಡರ ವಿನಃ ಯಾವುದೇ ಅಕ್ಷರವು ಇಂದಿನ ಸ್ವರೂಪಕ್ಕೆ ಬಂದಿರುವುದಿಲ್ಲ.

ಅಶೋಕನ ಲಿಪಿಯಲ್ಲಿ ಅಕ್ಷರಗಳಿಗೆ ತಲೆಕಟ್ಟು ಹಾಕುವ ಪರಿಕಲ್ಪನೆಯೇ ಇರಲಿಲ್ಲ. ಆದರೆ ಶಾತವಾಹನರ ಕಾಲದಲ್ಲಿ ತಲೆಕಟ್ಟು ಅಂಕುರಿಸಿ, ಕದಂಬರ ಕಾಲದ ಹೊತ್ತಿಗೆ ಸ್ಪಷ್ಟರೂಪ ಪಡೆಯಿತು. ಅಲ್ಲಿ ತ್ರಿಕೋನಾಕಾರ, ಆಯತಾಕಾರ (ಪೆಟ್ಟಿಗೆಯಂತಹ ಆಕಾರ) ಮತ್ತು ವಕ್ರರೇಖೆಯಂತಹ ತಲೆಕಟ್ಟುಗಳ ವೈವಿಧ್ಯತೆಗಳನ್ನು ಕಾಣುತ್ತೇವೆ. ಹಲ್ಮಿಡಿ ಶಾಸನದ ಲಿಪಿಯಲ್ಲಿ ವಕ್ರರೇಖೆಯಂತಹ ಪುಟ್ಟ ತಲೆಕಟ್ಟನ್ನು ಬಳಸಲಾಗಿದೆ. ಇದೇ ಗೆರೆಯು ಅಭಿವೃದ್ಧಿ ಹೊಂದಿ ಚಾಲುಕ್ಯ ಮತ್ತು ಹೊಯ್ಸಳರ ಲಿಪಿಗಳಲ್ಲಿ ಅರ್ಧಚಂದ್ರಾಕಾರಕ್ಕೆ ಬಂದು ಇಂದು ಕೊಕ್ಕೆಯಂತೆ ಸ್ಪಷ್ಟರೂಪವನ್ನು ಪಡೆದಿದೆ.

ಅಶೋಕನಿಂದ ಆಧುನಿಕ ಕಾಲದವರೆಗೆ ಕನ್ನಡ ಲಿಪಿಯು ಬೆಳೆದು ಬಂದ ದಾರಿ



೧ ಅಶೋಕನ ಬ್ರಾಹ್ಮೀ (ಕ್ರಿ.ಪೂ.೩ನೇ ಶ.)

೨ ಶಾತವಾಹನರ ಬ್ರಾಹ್ಮೀ (ಕ್ರಿ.ಶ. ೧ನೇ ಶ.)

೩ ಕದಂಬಲಿಪಿ (ಕ್ರಿ.ಶ.೫ನೇ ಶ.) ಕನ್ನಡದ ಮೂಲ ಲಿಪಿ

೪ ಬಾದಾಮಿ ಚಾಲುಕ್ಯ ಲಿಪಿ (ಕ್ರಿ.ಶ. ೭ನೇ ಶ.)

೫ ರಾಷ್ಟ್ರಕೂಟ ಲಿಪಿ (ಕ್ರಿ.ಶ. ೯ನೇ ಶ.)

೬ ಕಲ್ಯಾಣ ಚಾಲುಕ್ಯ ಲಿಪಿ (ಕ್ರಿ.ಶ. ೧೧ನೇ ಶ.)

೭ ಹೊಯ್ಸಳ ಲಿಪಿ (ಕ್ರಿ.ಶ. ೧೩ನೇ ಶ.)

೮ ವಿಜಯನಗರ ಲಿಪಿ (ಕ್ರಿ.ಶ. ೧೫ನೇ ಶ.)

೯ ಒಡೆಯರ್ ಲಿಪಿ (ಕ್ರಿ.ಶ. ೧೮ನೇ ಶ.)

೧೦ ಆಧುನಿಕ ಕನ್ನಡ ಲಿಪಿ (ಕ್ರಿ.ಶ. ೨೦ನೇ ಶ.)

೧೧ ಕಂಪ್ಯೂಟರ್ ಕನ್ನಡ ಲಿಪಿ (ಕ್ರಿ.ಶ. ೨೧ನೇ ಶ.)

(ಚಿತ್ರ 3)

ಈ ಚಿತ್ರದಲ್ಲಿರುವ ಹಂತಗಳು ಕೇವಲ ಸ್ಥೂಲ ಘಟ್ಟಗಳು. ಇವುಗಳ ನಡುವೆ ಉಪ ಘಟ್ಟಗಳೂ ಉಂಟು. ಗವಿಲಿಪಿ, ಗುಪ್ತಲಿಪಿ, ಮಯೂರನ ಚಂದ್ರವಳ್ಳಿ ಶಾಸನದ ಲಿಪಿ, ಶಾಂತಿವರ್ಮನ ತಾಳಗುಂದ ಶಾಸನದ ಲಿಪಿ, ಮೃಗೇಶವರ್ಮನ ಪಿರಿಯಾಪಟ್ಟಣ ತಾಮ್ರಶಾಸನದ ಲಿಪಿ, ಹೊಯ್ಸಳರ ಆರಂಭಕಾಲ ಮತ್ತು ಅಂತ್ಯಕಾಲದ ಲಿಪಿಗಳು, ಮೋಡಿ ಲಿಪಿ ಇತ್ಯಾದಿಯಾಗಿ ಸ್ವಲ್ಪ ಸ್ವಲ್ಪ ವ್ಯತ್ಯಾಸವಿರುವ ಲಿಪಿಭೇದಗಳು ಇವೆ. ಕಾಲದ ನಿರಂತರ ಪ್ರವಾಹದಲ್ಲಿ - ಎರಡೂವರೆ ಸಾವಿರ ವರ್ಷಗಳ ಅವಧಿಯಲ್ಲಿ ಬ್ರಾಹ್ಮೀಲಿಪಿಯು ಹೊಂದುತ್ತಾ ಬಂದ ರೂಪಪರಿವರ್ತನೆಯ ಹಾಗೂ ಕನ್ನಡಲಿಪಿಯ ಉಗಮ ಮತ್ತು ವಿಕಾಸದ ಕೆಲವು ಮಜಲುಗಳನ್ನು ಮಾತ್ರ ಈ ಚಿತ್ರದಲ್ಲಿ ಸ್ಥೂಲವಾಗಿ ಕಾಣಬಹುದು. (ವಿವಿಧ ಕಾಲ ಶಾಸನಗಳಲ್ಲಿ ಬಳಕೆಯಾಗಿರುವ ಲಿಪಿಗಳ ಆಧಾರದಿಂದ ಈ ಚಿತ್ರವನ್ನು ರಚಿಸಲಾಗಿದೆ)

ಹಲ್ಮಿಡಿ ಶಾಸನದ ಕಾಗುಣಿತ ಸ್ವರೂಪ -ಅಂದರೆ ವ್ಯಂಜನಗಳಿಗೆ ವಿವಿಧ ಸ್ವರ ಚಿಹ್ನೆಗಳನ್ನು ಸೇರಿಸುವ ಕ್ರಮ - ಕೂಡ ಅಧ್ಯಯನಯೋಗ್ಯವಾಗಿದೆ. ಅಶೋಕನ ಬ್ರಾಹ್ಮಿಯಲ್ಲಿ ಅಕ್ಷರಗಳ ವಿವಿಧ ಭಾಗಗಳಿಗೆ ನೇರವಾದ ಗೆರೆಗಳನ್ನು ಸೇರಿಸುವ ಮೂಲಕ ಕಾಗುಣಿತವನ್ನು ಸಾಧಿಸಲಾಗುತ್ತಿತ್ತು. ಈ ಪದ್ಧತಿಯೇ ಮುಂದುವರಿದು ಶಾತವಾಹನ, ಗುಪ್ತರನ್ನು ದಾಟಿ ಕದಂಬರನ್ನು ತಲುಪುವ ವೇಳೆಗೆ ಸ್ವರಚಿಹ್ನೆಗಳು ನೇರಗೆರೆಯ ಬದಲು ಸ್ವಲ್ಪ ಡೊಂಕಾದ ಆಕಾರವನ್ನು ಗಳಿಸಿದ್ದವು. ಇಳಿ, ಕೊಂಬು, ಕೊಂಬಿನ ಇಳಿ ಮುಂತಾದುವು ಸಾಕಷ್ಟು ವಕ್ರವಾಗಿದ್ದರೆ ಗುಣಿಸುಗಳಾದ ಇ-ಈ ಸ್ವರಚಿಹ್ನೆಗಳು ಪೂರ್ಣವಾಗಿ ವೃತ್ತಸ್ವರೂಪವನ್ನೇ ಹೊಂದಿ ಆಗಿತ್ತು. ಆದರೆ ಅನುಸ್ವಾರ ಮತ್ತು ವಿಸರ್ಗಗಳಾದ ಅಂ-ಆಃ ಸ್ವರಗಳ ಚಿಹ್ನೆಗಳು ಇಂದಿನಂತೆ ವೃತ್ತವಾಗಿರದೆ ಕೇವಲ ಚುಕ್ಕಿಗಳ ರೂಪದಲ್ಲಿದ್ದವು. ಅಂ ಚಿಹ್ನೆಯು ಅಕ್ಷರಗಳ ತಲೆಯ ಮೇಲೆ ಒಂದು ಚುಕ್ಕಿಯಂತೆ ಹಾಕಲ್ಪಡುತ್ತಿತ್ತು. ಇದೇ ಸ್ವರಚಿಹ್ನೆಗಳೇ ಇನ್ನೂ ಬಾಗುತ್ತಾ, ಸ್ವಲ್ಪ ಸ್ಥಳಾಂತರಗೊಳ್ಳುತ್ತಾ ಇಂದಿನ ಹಂತಕ್ಕೆ ಬಂದುಮುಟ್ಟಿವೆ.

ಹಲ್ಮಿಡಿ ಶಾಸನದಲ್ಲಿ ಅನುಸ್ವಾರ ವಿಸರ್ಗಗಳೆಂಬ ಎರಡು ಚಿಹ್ನೆಗಳು ಮಾತ್ರ ಬಳಕೆಯಾಗಿವೆ. ಆದರೆ ಜಿಹ್ವಾಮೂಲೀಯ ಮತ್ತು ಉಪಧ್ಮಾನೀಯಗಳು ಬಳಕೆಗೊಂಡಿಲ್ಲ (ಕದಂಬರ ಇತರ ಸಂಸ್ಕೃತ ಶಾಸನಗಳಲ್ಲಿ ಈ ಚಿಹ್ನೆಗಳನ್ನು ಕಾಣುತ್ತೇವೆ. ಉದಾ: ಕದಂಬರ ತಾಳಗುಂದ ಶಿಲಾಸ್ತಂಭ ಶಾಸನ).

ಇಂತಹ ಅನೇಕ ಲಕ್ಷಣಗಳು ಹಲ್ಮಿಡಿ ಶಾಸನದಲ್ಲಿದ್ದು, ಕನ್ನಡ ಲಿಪಿಯ ಅತಿಪ್ರಾಚೀನ ಸ್ವರೂಪಕ್ಕೆ ಸಾಕ್ಷಿಯಾಗಿವೆ. ಅಶೋಕನ ಕಾಲದಲ್ಲಿ ನೇರಗೆರೆಗಳನ್ನು

ಆಧರಿಸಿ ಬ್ರಾಹ್ಮೀ ಅಕ್ಷರಗಳೇ ಅಭಿವೃದ್ಧಿ ಹೊಂದುತ್ತಾ ಬಂದು ಇಂದಿನ 'ಮುತ್ತು ಪೋಣಿಸಿದಂತಹ' ಲಿಪಿಸ್ವರೂಪದವರೆಗೆ ಕನ್ನಡ ಲಿಪಿಯು ತಳೆದ ನಾನಾ ಹಂತಗಳಲ್ಲಿ ಹಲ್ಮಿಡಿ ಶಾಸನದ ಲಿಪಿಘಟ್ಟವು ಕನ್ನಡದ ಸ್ವತಂತ್ರಲಿಪಿಯ ಉಗಮದ ನಿರ್ಣಾಯಕ ಕವಲು ದಾರಿಯನ್ನು ಸ್ಪಷ್ಟೀಕರಿಸಿದೆ.

ಈ ಲಿಪಿ ಘಟ್ಟವೇ ಕದಂಬ, ಗಂಗ ನಂತರದಲ್ಲಿ ಬಾದಾಮಿ ಚಾಲುಕ್ಯ ರಾಷ್ಟ್ರಕೂಟ, ಕಲ್ಯಾಣ ಚಾಲುಕ್ಯ, ಹೊಯ್ಸಳ, ವಿಜಯನಗರ, ಮೈಸೂರರಸರು ಹೀಗೆ ನಾನಾ ರಾಜ ಪರಂಪರೆಯ ಶಾಸನಗಳಲ್ಲಿ ಕ್ರಮವಾಗಿ, ಹಂತಹಂತವಾಗಿ ಬದಲಾಗುತ್ತಾ ಇಂದು ಕಂಪ್ಯೂಟರ್ ಸಾಫ್ಟ್‌ವೇರ್‌ಗಳ ಮೂಲಕ ಅತ್ಯಂತ ಗುಂಡಾದ ಮುದ್ದಾದ ಸ್ವರೂಪವನ್ನು ಹೊಂದಿ ಕಲಾತ್ಮಕ ಲಿಪಿ ಎನಿಸಿಕೊಂಡಿದೆ.

ಸಾವಿರಾರು ವರ್ಷಗಳ ನಿರಂತರ ಯಾನದಲ್ಲಿ ಕನ್ನಡ ಲಿಪಿಯು ಸಾಗಿ ಬಂದ ದಾರಿ ಇದು. ಹಲ್ಮಿಡಿ ಶಾಸನದ ಕಾಲದಿಂದಲೇ ಕನ್ನಡ ಭಾಷೆಯು ತನ್ನದೇ ಆದ ಲಿಪಿಯನ್ನು ಗಳಿಸುವ ಯತ್ನದಲ್ಲಿತ್ತೆಂಬುದನ್ನು ಹಲ್ಮಿಡಿ ಶಾಸನವು ಅತ್ಯಂತ ಖಚಿತವಾಗಿ ದಾಖಲಿಸಿಕೊಟ್ಟಿದೆ.

ಅಧ್ಯಾಯ-೬

ಹಲ್ಮಿಡಿ ಶಾಸನದ ಭಾಷಾ ಸ್ವರೂಪ

ಹಲ್ಮಿಡಿ ಶಾಸನವು ಭಾಷಾಶಾಸ್ತ್ರಕ್ಕೆ ನೀಡಿರುವ ಮತ್ತೊಂದು ಮಹತ್ವದ ಕೊಡುಗೆಯೆಂದರೆ ಕೆಲವು ವಿಶಿಷ್ಟ ಅಕ್ಷರಗಳ ಉಲ್ಲೇಖ. ಅದೆಂದರೆ-

ಬ್ರಾಹ್ಮೀಲಿಪಿಯು ವರ್ಣಾತ್ಮಕ ಲಿಪಿ. (ಇದನ್ನು 'ಆಲ್ಫಾಬಿಟಿಕಲ್' ಎಂದು ಕರೆಯುತ್ತಾರೆ.) ಅಂದರೆ ಲಿಪಿಸಂಕೇತಗಳು ನಿರ್ದಿಷ್ಟ ಉಚ್ಚಾರಣೆಯನ್ನು ಹೊಂದಿದ್ದು ಅವುಗಳ ಸಂಯೋಜನೆಯಿಂದ ಅರ್ಥಬದ್ಧ ಪದಗಳನ್ನು ಸೃಷ್ಟಿಮಾಡಿಕೊಳ್ಳಬಹುದು. ಹೆಚ್ಚು ಕಡಿಮೆ ಸಂಸ್ಕೃತದ ವರ್ಣಾಕ್ಷರಗಳೇ ಕನ್ನಡ ವರ್ಣಮಾಲೆಯಲ್ಲೂ ಇವೆ. ಕೆಲವು ಸಂಸ್ಕೃತ ವರ್ಣಗಳು ಕನ್ನಡದಲ್ಲಿ ಇಲ್ಲ (ಉದಾ: ಌ ೡ, ಕ್ಷ, ತ್ರ, ಜ್ಞ ಇತ್ಯಾದಿ) ಹಾಗೆಯೇ ಸಂಸ್ಕೃತ ವರ್ಣಮಾಲೆಯಲ್ಲಿಲ್ಲದ ಕೆಲವು ಅಕ್ಷರಗಳು ಕನ್ನಡ ವರ್ಣಮಾಲೆಯಲ್ಲಿದ್ದವು. ಉದಾ: ಶಕಟರೇಫ (ಱ) ಮತ್ತು ರಳ (ೞ)ಗಳು. ಇವು ದ್ರಾವಿಡ ಭಾಷಾಸಂಪ್ರದಾಯದ ವರ್ಣಗಳು. ಹಲ್ಮಿಡಿ ಶಾಸನವು ಈ ಎರಡೂ ವರ್ಣಾಕ್ಷರಗಳನ್ನು ದಾಖಲಿಸಿದೆ. ಬಾಳ್ಗೞ್ಚು, ಮೂೞವಳ್ಳಿ, ಕುಱುಂಬಿಡಿ, ಪೊಗೞ್ಪೊಟ್ಟಣ, ಕಾದೆಱದು -ಈ ಪದಗಳಲ್ಲಿ ಸಂಸ್ಕೃತ ವರ್ಣಮಾಲೆಯಲ್ಲಿಲ್ಲದ ಱ, ೞ ಅಕ್ಷರಗಳನ್ನು ಪ್ರಯೋಗಿಸಲಾಗಿದೆ. ಕನ್ನಡ ಲಿಪಿಯ ಇತಿಹಾಸದಲ್ಲಿ ಈ ಅಕ್ಷರಗಳು ಉಲ್ಲೇಖಿತವಾಗಿರುವುದು ಇದೇ ಮೊದಲಬಾರಿ. ಆದುದರಿಂದ ಮೊದಲ ಬಾರಿಗೆ ಇವನ್ನು ಪರಿಚಯಿಸಿದ ಕೀರ್ತಿ ಹಲ್ಮಿಡಿ ಶಾಸನಕ್ಕೆ ದಕ್ಕಬೇಕು.

ಇಲ್ಲಿ ಒಂದು ವಿಷಯವನ್ನೂ ಪರ್ಯಾಲೋಚಿಸಬೇಕು. ಱ ಮತ್ತು ೞ ಅಕ್ಷರಗಳುಳ್ಳ ಪದಗಳು ಹಲ್ಮಿಡಿ ಶಾಸನದಲ್ಲಿ ಪ್ರಯೋಗವಾಗಿರುವ ರೀತಿಯನ್ನು ನೋಡಿದರೆ ಬಾಳ್ಗೞ್ಚು, ಕುಱುಂಬಿಡಿ ಮುಂತಾದ ಅಚ್ಚ ಕನ್ನಡ ಪದಗಳು ಜನಪದದಲ್ಲಿ ಬೇರೂರಿತ್ತೆಂದು ಕಾಣುತ್ತದೆ. ಶಾಸನದಲ್ಲಿ ಬಳಸಿರುವ ಭಾಷೆ ಸರಳವಾಗಿದ್ದರೂ ಅದು ಶೈಶವವೇನಲ್ಲ. ಸಾಕಷ್ಟು ಬೆಳೆದಿರುವ ಭಾಷೆ. ಹೀಗೆ ಒಂದು ಭಾಷೆ ಪ್ರವರ್ಧಮಾನಕ್ಕೆ ಬರಲು ಹಲವು ಶತಮಾನಗಳಾದರೂ ಬೇಕು. ಆದುದರಿಂದ ಕನ್ನಡ ಭಾಷೆಯು ಹಲ್ಮಿಡಿ ಶಾಸನ ನಿರ್ಮಾಣಕ್ಕಿಂತ ಸುಮಾರು 500 ರಿಂದ 1000 ವರ್ಷಗಳ ಹಿಂದೆಯೇ ಮೂಲ ದ್ರಾವಿಡ ಭಾಷೆಯಿಂದ ಸ್ವತಂತ್ರಗೊಂಡಿರಬೇಕೆಂಬುದು ಖಚಿತವಾಗಿ ಗೋಚರಿಸುತ್ತದೆ.

ಹೀಗೆ ಕನ್ನಡ ಭಾಷೆಯ ಪ್ರಾಚೀನತೆಯನ್ನು ಕನಿಷ್ಠ ಎರಡರಿಂದ ಎರಡೂವರೆ ಸಾವಿರ ವರ್ಷಗಳ ಹಿಂದಿನ ತನಕ ಊಹಿಸಬಹುದೆಂಬ ಸೂಚನೆ ಹಲ್ಮಿಡಿ ಶಾಸನದಿಂದ ಸಿಗುತ್ತದೆ.

ಅಕ್ಷರ ಲೇಖನದಲ್ಲಿ ಅನುನಾಸಿಕಗಳನ್ನು ಪ್ರಯೋಗಿಸುವಾಗ ನಾವಿಂದು ಙ, ಞ, ಣ, ನ, ಮ ಗಳ ಬದಲು ಬಿಂದು (ಂ) ಯನ್ನು ಬರೆಯುತ್ತೇವಷ್ಟೆ. (ಉದಾ: ಬಿನ್ದು →ಬಿಂದು, ಅಮ್ಬಾ → ಅಂಬಾ....) ಆದರೆ ಹಲ್ಮಿಡಿ ಶಾಸನದಲ್ಲಿ ಪುರಾತನ ಪದ್ಧತಿಯಂತೆ ಅನುನಾಸಿಕಗಳನ್ನೂ ಬಳಸಲಾಗಿದೆ. ಉದಾ: ಪರಿಷ್ವಙ್ಗ, ಶ್ಯಾಙ್ಗ, ಕದಮ್ಬ, ಸಟ್ಬಙ್ಗಾ, ಕುಱುಮ್ಬಿ, ಪತ್ತೊನ್ದಿ ಹೀಗೆ ತಜ್ಜಾತೀಯ ಅನುನಾಸಿಕಗಳ ಪ್ರಯೋಗವನ್ನು ಕಾಣುತ್ತೇವೆ. ಆದರೆ ಶಾಸನ ಭಾಷೆಯು ಈ ನಿಯಮಕ್ಕೆ ಸಂಪೂರ್ಣವಾಗಿ ಬದ್ಧವಾಗಿಲ್ಲ. ಸುತನ್ಗೆ ಎಂಬಲ್ಲಿ ವಿಜಾತೀಯ ಅನುನಾಸಿಕದ ಪ್ರಯೋಗವೂ ಇದೆ. ಅಲ್ಲಲ್ಲಿ ಅನುನಾಸಿಕದ ಬದಲು ಬಿಂದುವನ್ನೂ ಬಳಸಲಾಗಿದೆ (ಕದಂಬಪ, ವಿಜಾರಸರುಂ, ಪಲ್ಲವರಂ, ಪಲ್ಮಡಿಉಂ). ಗಮನಾರ್ಹ ಅಂಶವೆಂದರೆ ಇಡೀ ಶಾಸನದಲ್ಲಿ 'ಮ'ಕ್ಕೆ ಬದಲಾಗಿ ಮಾತ್ರ ಬಿಂದುವನ್ನು ಬಳಸಲಾಗಿದೆ. ಉಳಿದಂತೆ ತಜ್ಜಾತೀಯ ಅನುನಾಸಿಕಾಕ್ಷರಗಳೇ ಕೊರೆಯಲ್ಪಟ್ಟಿವೆ. ಅನುನಾಸಿಕಕ್ಕೆ ಬದಲು ಬಿಂದುವನ್ನು ಬಳಸುವ ಕ್ರಮದ ಆರಂಭ ಇದಾಗಿರಬಹುದು.

ಒತ್ತಕ್ಷರಗಳು ಇಂದಿನಂತೆ ವ್ಯಂಜನಾಕ್ಷರಕ್ಕಿಂತ ಭಿನ್ನವಾದ ರೂಪದಲ್ಲಿ ಇಲ್ಲ. ಬದಲಿಗೆ ವ್ಯಂಜನದ ಕೆಳಗೆ ಇನ್ನೊಂದು ವ್ಯಂಜನವನ್ನೇ ಸ್ವಲ್ಪ ಚಿಕ್ಕದಾಗಿ ಬರೆಯುವ ಮೂಲಕ ಒತ್ತಕ್ಷರವನ್ನು ಸಾಧಿಸಲಾಗಿದೆ. ಶಾಸನದ ಚಿತ್ರದಲ್ಲಿ ಯುಗಾನ್ತಾಗ್ನಿಃ, ಶಿಷ್ಟಾನಾಂತು, ಪೊಗಟಿಪ್ಪೊಟ್ಟಣ, ಪಲ್ಮಡಿ - ಹೀಗೆ ಪದಗಳ ಲಿಪಿಸ್ವರೂಪದ ಮೂಲಕ ಇದನ್ನು ಗಮನಿಸಬಹುದು. ಈರೀತಿ ಅಕ್ಷರಗಳ ಕೆಳಗೆ (ಒಮ್ಮೊಮ್ಮೆ ಪಕ್ಕದಲ್ಲಿ) ಚಿಕ್ಕದಾಗಿ ಅಕ್ಷರವನ್ನು ಬರೆಯುವ ಕ್ರಮವೇ ಕ್ರಮೇಣ ಬದಲಾವಣೆ ಹೊಂದುತ್ತಾ ಇಂದಿನ ಒತ್ತಕ್ಷರಗಳಾದ ೨, ೯, ಲ, ೧, ೧, ೪, ೩, ೪ - ರೂಪಗಳನ್ನು ಹೊಂದಿರುವುದನ್ನು ಲಿಪಿಶಾಸ್ತ್ರದ ಅಧ್ಯಯನದಲ್ಲಿ ಕಾಣಬಹುದು. ಅಂತೂ ಒಂದೂವರೆ ಸಾವಿರ ವರ್ಷಗಳ ಹಿಂದೆ ಇದ್ದ ಒತ್ತಕ್ಷರ ಸ್ವರೂಪಕ್ಕೆ ಹಲ್ಮಿಡಿ ಶಾಸನ ಸಾಕ್ಷಿಯಾಗಿದೆ.

ಇಂದಿನ ಕನ್ನಡಲಿಪಿಯಲ್ಲಿ '೰' (ಅರ್ಕಾಒತ್ತು) ಚಿಹ್ನೆಯು ಯಾವ ಮೂಲರೂಪದಿಂದ ಜನಿಸಿದೆ ಎಂದು ಸರಿಯಾಗಿ ತಿಳಿಯದೇ ಕೆಲವರು ''ಅರ್ಕಾ ಒತ್ತು ಸಹಜವಾದ ಲಿಪಿಯಲ್ಲವೇ ಅಲ್ಲ. ಯಾವ ಮೂಲವೂ ಇಲ್ಲದ ಅನಾಥ ಚಿಹ್ನೆಯು ನಿರರ್ಥಕವಾಗಿ ಕನ್ನಡ ಲಿಪಿಯಲ್ಲಿ ಸೇರಿಬಿಟ್ಟಿದೆ'' ಎಂದು ವಾದಿಸಿರುವುದೂ ಉಂಟು.

ಏಕೆಂದರೆ ಉಚ್ಚಾರ ಸ್ಥಾನಕ್ಕಿಂತ ಒಂದಕ್ಷರ ಮುಂದಕ್ಕೆ ಈ ಚಿಹ್ನೆಯನ್ನು ಹಾಕುವ ಕ್ರಮ (ಉದಾ: ಅರ್ಕ = ಅರ್‌ಕ)ವು ಆಶ್ಚರ್ಯ - ಅನುಮಾನಗಳನ್ನು ಮೂಡಿಸುವುದು ಸಹಜ. ಆದರೆ ಇದು ಅಸಹಜವಾಗಿ ಬಂದಿರುವುದೇನೂ ಅಲ್ಲ. ಇದಕ್ಕೆ ಉತ್ತರವೂ ಹಲ್ಮಿಡಿ ಶಾಸನದಲ್ಲಿದೆ. ಇದರ ಮೊದಲನೇ ಸಾಲಿನ ''ಶಾರ್ಙ್ಗ'' 'ಯರ್ಙ್ಗಾನ್ತಾಗ್ನಿ' ನಾಲ್ಕನೇ ಸಾಲಿನ 'ಆಭೀಳಬ್ಬ್ಟಹರ್....' 7ನೇ ಸಾಲಿನ 'ಶೌರ್ಯ್ಯೋದ್ಯಮ' 16ನೇ ಸಾಲಿನ '....ಭಟ್ಟರ್ಗ್ಗೀಗಟ್ಟಿ' ಮುಂತಾದ ಪದಗಳಲ್ಲಿ ಬ್ರಾಹ್ಮೀಲಿಪಿಯ ಅಕಾರ ಒತ್ತು ಸರ್ಪಾಕಾರದ ರೇಖೆಯಂತೆ ಅಕ್ಷರದ ಶಿರೋಭಾಗದಲ್ಲಿ ಬಲಭಾಗಕ್ಕೆ ಚಾಚಿದೆ. ಇದೇ ಸರ್ಪಾಕಾರದ ಚಾಚುರೇಖೆಯು ದೇವನಾಗರಿ ಲಿಪಿಯಲ್ಲಿ ಅಂದರೆ ಸಂಸ್ಕೃತ, ಹಿಂದೀ ಭಾಷೆಯ ಲೇಖನದಲ್ಲಿ ಇಂದೂ ಕೊಕ್ಕೆಯಂತೆ ಬರೆಯಲ್ಪಡುತ್ತದೆ. ಆದರೆ ಕನ್ನಡದಲ್ಲಿ ತಲೆಯಮೇಲೆ ಬರೆಯಲ್ಪಡುತ್ತಿದ್ದ ವಕ್ರರೇಖೆಯು ಕ್ರಮೇಣ ಕೆಳಗಿಳಿಯುತ್ತಾ ಬಂದುದರಿಂದ ಅರ್ಕಾಒತ್ತು ವಿಧಿಯಿಲ್ಲದೆ ಅಕ್ಷರದ ಮುಂದೆ ಬರೆಯಲ್ಪಡುವ ಪದ್ಧತಿಯುಂಟಾಯಿತು. ಅಷ್ಟೇ ಹೊರತು 'ೱ' ಎಲ್ಲಿಂದಲೋ ಬಂದು ಕನ್ನಡಕ್ಕೆ ಸೇರಿಕೊಂಡ ಅನಾಥ ಚಿಹ್ನೆಯಲ್ಲ.

ಅರ್ಕಾವತ್ತು ಬಳಸಲ್ಪಡುವ ವ್ಯಂಜನವು ಅದೇ ವ್ಯಂಜನದ ಒತ್ತಕ್ಷರವನ್ನು ಹೊಂದಿ ದ್ವಿತ್ವವಾಗುವ ಪದ್ಧತಿ ಪುರಾತನ ಇತರ ಶಾಸನಗಳಲ್ಲಿ ಇರುವಂತೆಯೇ ಹಲ್ಮಿಡಿ ಶಾಸನದಲ್ಲೂ ಇದೆ. (ಉದಾ: ಶೌರ್ಯ್ಯ, ಭಟ್ಟರ್ಗ್ಗ, ಇರ್ವ್ವರುಂ) ಕನ್ನಡದ ಪುರಾತನ ಸ್ವರೂಪದಲ್ಲಿ ಈ ಪದ್ಧತಿ ಇತ್ತು. ಆದರೆ ಈಗ ಒತ್ತಕ್ಷರವಿಲ್ಲದೆ ಕೇವಲ 'ೱ' ಚಿಹ್ನೆಯನ್ನು ಮಾತ್ರ ಹಾಕುವ ಪದ್ಧತಿ ಉಳಿದುಕೊಂಡಿದೆ.

ಬ್ರಾಹ್ಮೀಲಿಪಿಯು ಪುರಾತನ ಭಾರತದ ಪ್ರಧಾನಲಿಪಿಯಾಗಿದ್ದು, ತತ್ಕಾಲೀನ ಪಾಕೃತ, ಪಾಳೀ, ಸಂಸ್ಕೃತ ಮುಂತಾದ ಪುರಾತನ ಭಾರತೀಯ ಭಾಷೆಗಳಿಗೆ ಲೇಖನ ಮಾಧ್ಯಮವಾಗಿ ಬಳಕೆಗೊಂಡಿರುವುದನ್ನು ಗಮನಿಸಿದೆವು. ಈ ಬ್ರಾಹ್ಮೀಲಿಪಿಯ ಪ್ರಭೇದಗಳಲ್ಲೊಂದಾದ ಕದಂಬ ಶೈಲಿಯ ಲಿಪಿಯು ಹಲ್ಮಿಡಿ ಶಾಸನದಲ್ಲಿ ಬಳಕೆಗೊಂಡಿದೆ ಎಂದೂ ಗಮನಿಸಿದೆವು. ಇದೇ ಲಿಪಿಯು ಕದಂಬರ ತಾಳಗುಂದದ ಶಾಸನದಲ್ಲೂ ಬಳಕೆಯಾಗಿದ್ದು -ಅದು ಸಂಸ್ಕೃತ ಭಾಷೆಯ ಶಾಸನವಾಗಿದೆ. ಇದೇ ಲಿಪಿಯನ್ನು ಹೊಂದಿರುವ ಮಯೂರವರ್ಮನ ಚಂದ್ರವಳ್ಳಿ ಶಾಸನವನ್ನು ಮೊದಲು ಪ್ರಾಕೃತ ಭಾಷೆ ಎಂದು ಭಾವಿಸಲಾಗಿದ್ದು -ಅದೂ ಸಂಸ್ಕೃತದ್ದೆಂದು ಈಚೆಗೆ ತಿಳಿದುಬಂದಿದೆ.

ಹಾಗಾದರೆ ಲಿಪಿಯ ಸ್ವರೂಪದಿಂದ ಭಾಷೆಯನ್ನು ಖಚಿತವಾಗಿ ನಿರ್ಧರಿಸಲು

ಸಾಧ್ಯವಿಲ್ಲ ಎಂದಾಯಿತು. ಅಂದಮೇಲೆ ''ಹಲ್ಮಿಡಿ ಶಾಸನವು ಕನ್ನಡದ್ದೇ ನಿಜ'' ಎಂದು ಹೇಳುವುದು ಹೇಗೆ? ಸಾಮಾನ್ಯವಾಗಿ ಇದು ಎಲ್ಲರಿಗೂ ಮೂಡುವ ಪ್ರಶ್ನೆ. ಈ ಪ್ರಶ್ನೆಯನ್ನು ಬಿಡಿಸಲು ಯತ್ನಿಸೋಣ.

ಇಂದು ನಾವು ಬರವಣಿಗೆಯನ್ನು ನೋಡಿಯೇ 'ಇದು ಇಂತಹ ಭಾಷೆ' ಎಂದು ಸ್ಥೂಲವಾಗಿ ಊಹಿಸಬಲ್ಲೆವು. ಏಕೆಂದರೆ ಭಾಷೆಗಳು ನಿರ್ದಿಷ್ಟ ಲಿಪಿಯನ್ನು ಆಧರಿಸುವ ಲಕ್ಷಣ ಹೊಂದಿರುವುದು ಇದಕ್ಕೆ ಕಾರಣ. ಹಾಗೆಂದ ಮಾತ್ರಕ್ಕೆ ಎಲ್ಲ ಭಾಷೆಗಳಿಗೂ ಪ್ರತ್ಯೇಕ ಲಿಪಿ ಇದೆಯೆಂದು ಭಾವಿಸಬಾರದು. ಸಂಸ್ಕೃತ ಮತ್ತು ಹಿಂದೀ ಭಾಷೆಗಳು ದೇವನಾಗರಿಯನ್ನು ಬಳಸುವುದಿಲ್ಲವೆ? ಹಾಗಿದ್ದಮೇಲೆ ಲಿಪಿಯೇ ಭಾಷೆಯನ್ನು ಗುರ್ತಿಸುವ ಪ್ರಧಾನ ಲಕ್ಷಣವಲ್ಲ.

ಒಂದು ಭಾಷೆಗೆ ಎರಡು ರೂಪಗಳಿರುತ್ತವೆ. ಒಂದನೆಯದು ಕಿವಿಯಿಂದ ಕೇಳಿ ಅರ್ಥಮಾಡಿಕೊಳ್ಳುವ 'ಧ್ವನಿ'ಯ ರೂಪ. ಎರಡನೆಯದು ಕಣ್ಣಿನಿಂದ ನೋಡಿ -ಅಂದರೆ ಓದಿ ಅರ್ಥಮಾಡಿಕೊಳ್ಳುವ ದೃಶ್ಯರೂಪ. ಕಿವಿಯಿಂದ ಕೇಳಿ ತಿಳಿಯುವ 'ಧ್ವನಿ' ಸ್ವರೂಪವನ್ನು 'ಶ್ರಾವಣರೂಪ' ಎಂದೂ, ಕಣ್ಣಿನಿಂದ ನೋಡಿ ತಿಳಿಯುವ ಸ್ವರೂಪವನ್ನು 'ಚಾಕ್ಷುಷ ಸ್ವರೂಪ' ಎಂದೂ ಕರೆಯುತ್ತಾರೆ. (ಶ್ರವಣ ಎಂದರೆ ಕಿವಿ, ಚಕ್ಷು ಎಂದರೆ ಕಣ್ಣು ಎಂದರ್ಥ)

ಇಂದಿನ ಆಧುನಿಕ ಯುಗದಲ್ಲಿ ಭಾಷೆಗಳು ತಮ್ಮದೇ ಆದ ಲಿಪಿಗಳನ್ನು ಹೊಂದಿರುವುದು ಸಾಮಾನ್ಯವಾಗಿದೆ. ಆದರೆ ಪ್ರತಿಯೊಂದು ಭಾಷೆಯೂ ತನ್ನದೇ ಆದ ಲಿಪಿಯನ್ನು ಹೊಂದಿಯೇ ಇರುತ್ತದೆಂದು ಹೇಳಲು ಸಾಧ್ಯವಿಲ್ಲ. ನಮ್ಮಲ್ಲಿ ಇಂದು ಕನ್ನಡ, ತೆಲುಗು, ತಮಿಳು, ಮಲೆಯಾಳೀ ಮುಂತಾದ ಭಾಷೆಗಳಿಗೆ ಸ್ವಂತ ಲಿಪಿ ಇದೆ. ಆದರೆ ತುಳು, ಕೊಡವ, ಇಂತಹ ಭಾಷೆಗಳಿಗೆ ಲಿಪಿ ಇಲ್ಲ. ತುಳುವಿಗೆ ಮೊದಲು ಲಿಪಿ ಇದ್ದರೂ ಈಗ ಅದು ಬಳಕೆಯಿಂದ ಕೈಬಿಟ್ಟು ಹೋಗಿದೆ. ಹಾಗೆಯೇ ಉತ್ತರಭಾರತದಲ್ಲಿ ಗುಜರಾಥೀ, ಒರಿಯಾ, ಬಂಗಾಳೀ ಮುಂತಾದ ಭಾಷೆಗಳಿಗೆ ಸ್ವಂತ ಲಿಪಿ ಇದೆ. ಆದರೆ ಭಾರತದ ಇಂದಿನ ಪ್ರಮುಖ ಭಾಷೆಯೆನಿಸಿದ 'ಹಿಂದಿ'ಗಾಗಲೀ ಭಾರತದ ಪುರಾತನ ಪ್ರಮುಖ ಭಾಷೆಯಾದ ಸಂಸ್ಕೃತಕ್ಕಾಗಲೀ ಸ್ವಂತ ಲಿಪಿಯೇ ಇಲ್ಲ. ಇಂದು ಅವು ದೇವನಾಗರೀ ಲಿಪಿಯನ್ನು ಬಳಸುತ್ತವೆ. ಆ ದೇವನಾಗರೀ ಲಿಪಿಗೆ ಅದರದ್ದೇ ಆದ ಭಾಷೆ ಇಲ್ಲ. ಹೀಗೆ ಎಲ್ಲ ಭಾಷೆಗಳೂ ಸ್ವಂತಲಿಪಿ ಹೊಂದಿರಲೇಬೇಕೆಂದಿಲ್ಲ.

ಮತ್ತೊಂದು ರೀತಿಯಲ್ಲಿ ನೋಡಿದರೆ ನಮಗೆ ತಿಳಿದಿರುವ ಲಿಪಿಯಲ್ಲಿ, ನಮಗೆ

ತಿಳಿಯದ ಲಿಪಿಗೆ ಸೇರದ ಭಾಷೆಯ ಲೇಖನಕ್ಕಾಗಿ ಬಳಸುವ ಕ್ರಮವೂ ಇದೆಯಲ್ಲವೆ?

ದೇವನಾಗರಿಲಿಪಿಯು ತಿಳಿಯದಿದ್ದರೆ ಹಿಂದೀ ಅಥವಾ ಸಂಸ್ಕೃತ ಭಾಷೆಯ ಸಾಹಿತ್ಯವನ್ನು ನಾವು ಕನ್ನಡ ಲಿಪಿಯಲ್ಲಿ ಬರೆದುಕೊಳ್ಳುತ್ತೇವೆ. ಹಾಗೆಯೇ ತೆಲುಗರು ತೆಲುಗುಲಿಪಿಯಲ್ಲೂ, ತಮಿಳರು ತಮಿಳು ಲಿಪಿಯಲ್ಲೂ ಬರೆದುಕೊಳ್ಳಬಹುದು. ತಮಗೆ ಬರದಿರುವ ಬೇರೆ ಭಾಷೆಗಳ ಹಾಡುಗಳನ್ನು ಗಾಯಕರುಗಳು ತಮಗೆ ಪರಿಚಯವಿರುವ ಲಿಪಿಯಲ್ಲಿ ಬರೆದುಕೊಂಡು ಹಾಡುವುದಿಲ್ಲವೆ? ಇದೇ ಭಾಷೆಯ ಚಾಕ್ಷುಷ ರೂಪ. ಭಾಷೆಯ ಚಾಕ್ಷುಷ ರೂಪವು ಲಿಪಿಯಾದರೆ, ಶ್ರಾವಣ ಸ್ವರೂಪವು ಧ್ವನಿಯಾಗಿದೆ. ಚಾಕ್ಷುಷ ರೂಪವು ಬರಹದಲ್ಲಿದ್ದರೆ ಶ್ರಾವಣರೂಪವು ಉಚ್ಚಾರಣೆಯಲ್ಲಿದೆ.

ಯಾವುದೇ ಲಿಪಿಯಲ್ಲಿ ಬರೆದ ಒಕ್ಕಣೆಯು ಇಂತಹ ನಿರ್ದಿಷ್ಟ ಭಾಷೆಯದು ಎಂದು ತೀರ್ಮಾನಿಸುವಲ್ಲಿ ಭಾಷೆಯ ಶ್ರಾವಣರೂಪವು ನಿರ್ಣಾಯಕವಾಗುತ್ತದೆ. ಏಕೆಂದರೆ ಒಂದು ಭಾಷೆಗೆ ತನ್ನದೇ ಆದ ವ್ಯಾಕರಣ ನಿಯಮಗಳಿರುತ್ತವೆ. ಅದರ ಅಂಗವಾಗಿ ವಿಭಕ್ತಿ ಪ್ರತ್ಯಯಗಳಿರುತ್ತವೆ. ಭಾಷೆಯ ಸ್ವಂತಿಕೆಯನ್ನು ಪಡೆದ ಮೂಲಧಾತುಗಳಿರುತ್ತವೆ. ವ್ಯಂಜನಾದಿಗಳ ಪ್ರಯೋಗದಲ್ಲಿ ನಿರ್ದಿಷ್ಟ ಶೈಲಿ ಇರುತ್ತದೆ. ಈ ಲಕ್ಷಣಗಳು ಇದು ಇಂತಹುದೇ ಭಾಷೆ ಎಂದು ನಿರ್ದೇಶಿಸುತ್ತವೆ. ಆದುದರಿಂದಲೇ ಯಾವುದೇ ಲಿಪಿಯಲ್ಲಿ ಬರೆದಿದ್ದರೂ ಉದಾಹರಣೆಗೆ ಕನ್ನಡ ಲಿಪಿಯಲ್ಲಿ ಸಂಸ್ಕೃತ, ತಮಿಳು, ತೆಲುಗು, ಇಂಗ್ಲಿಷ್ ಇತ್ಯಾದಿ ಬೇರೆ ಬೇರೆ ಭಾಷೆಗಳನ್ನು ಬರೆದರೂ, ಓದಿದಾಗ ಅವು ಇಂತಹ ಭಾಷೆಯ ಸಾಹಿತ್ಯ ಎಂದು ತಿಳಿದುಬಿಡುತ್ತದೆ.

ಇದೇ ಭಾಷಾನಿಯಮದ ಪ್ರಕಾರ, ಹಲ್ಮಿಡಿ ಶಾಸನದ ಲಿಪಿಯು ದಾಕ್ಷಿಣಾತ್ಯ ಶೈಲಿಯ ಬ್ರಾಹ್ಮಿಯೇ ಆದರೂ, ಶಾಸನಸಾಹಿತ್ಯದಲ್ಲಿರುವ ಮೂಲಧಾತು, ವ್ಯಾಕರಣಗಳು ಕನ್ನಡ ಭಾಷೆಯ ಸ್ವಂತದ್ದು. ವ್ಯಾಕರಣ ಸೂತ್ರಗಳನ್ನಾಧರಿಸಿದ ಭಾಷಾನಿಯಮದ ಪ್ರಕಾರ ಹಲ್ಮಿಡಿ ಶಾಸನದ ಭಾಷೆ ಕನ್ನಡವೇ ಆಗಿದೆ. ಅದರ ಈ ಸ್ವರೂಪವನ್ನು 'ಪೂರ್ವದ ಹಳಗನ್ನಡ' ಎಂದು ಗುರುತಿಸಲಾಗಿದೆ.

ಹಲ್ಮಿಡಿ ಶಾಸನದ ಆಧಾರದಿಂದ ಕನ್ನಡ ಭಾಷೆಯು ಕನಿಷ್ಟ ಒಂದೂವರೆ ಸಾವಿರ ವರ್ಷಗಳ ಹಿಂದೆಯೇ ಸ್ವತಂತ್ರ ಅಸ್ತಿತ್ವವನ್ನು ಪಡೆದು ಜನಪ್ರಿಯವಾಗಿ ಬಳಕೆಗೊಂಡಿತ್ತೆಂದು ಖಚಿತವಾಗಿ ಹೇಳಬಹುದು. ಶಾಸನವೊಂದರಲ್ಲಿ ಭಾಷೆಯು ಇಷ್ಟು ಪ್ರಬುದ್ಧವಾಗಿ ದಾಖಲಾಗಬೇಕಾದರೆ ಅದರ ಹಿನ್ನೆಲೆಯಲ್ಲಿ ಆ ಭಾಷೆಯು ಅಲ್ಲಿಗಿಂತ ಕೆಲವು ಶತಮಾನಗಳಾದರೂ ಕೃಷಿ ಹೊಂದಿರಲೇಬೇಕು. ಹಲ್ಮಿಡಿ ಶಾಸನದಲ್ಲಿ

ದಾಖಲಾಗಿರುವ ಸಾಹಿತ್ಯವು ಪಂಡಿತರಿಂದ ಪಂಡಿತರಿಗಾಗಿ ಪಾಂಡಿತ್ಯಪೂರ್ಣವಾಗಿ ರೂಪಿತವಾಗಿರುವುದಲ್ಲ. ಅದು ಜನಸಾಮಾನ್ಯರು ಬಳಸುತ್ತಿದ್ದ ಸಾಮಾನ್ಯ ಭಾಷೆಯ ಸ್ವಲ್ಪ ಕಾವ್ಯಾತ್ಮಕವೆನಿಸುವ ಗದ್ಯದ ಸ್ವರೂಪ. ಜನಸಾಮಾನ್ಯರು ಕನ್ನಡ ಭಾಷೆಯನ್ನು ಬಳಸುತ್ತಿದ್ದುದನ್ನು ಗಮನಿಸಿದರೆ -ಹಲ್ಮಿಡಿ ಶಾಸನ ಕಾಲಕ್ಕಿಂತ ಸುಮಾರು ನಾಲ್ಕೈದು ಶತಮಾನಗಳ ಹಿಂದೆಯೇ ಕನ್ನಡಕ್ಕೆ ಸ್ವತಂತ್ರಭಾಷಾ ಸ್ವರೂಪವು ಲಭ್ಯವಾಗಿರಲೇಬೇಕು ಎಂದು ತರ್ಕಿಸಬಹುದು. ಹೀಗಾಗಿ ಕನ್ನಡ ಭಾಷೆಗೆ ಕನಿಷ್ಟ ಎರಡು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲದ ಇತಿಹಾಸವಿದೆ ಎಂದು ತಿಳಿಯುತ್ತದೆ.

●

ಅಧ್ಯಾಯ-೭

ಹಲ್ಮಿಡಿ ಶಾಸನದ ಪೂರ್ವ ಹಳಗನ್ನಡ ಸ್ವರೂಪ

ಆದರೂ ನಮಗೆ ಸಿಕ್ಕಿರುವ ಪ್ರಥಮ ಕನ್ನಡ ಭಾಷಾ ದಾಖಲಾತಿಯು ಶಾಸನವೇ ಆಗಿರುವುದರಿಂದ ಕನ್ನಡದ ಅತಿಪ್ರಾಚೀನ ಸ್ವರೂಪವನ್ನು ವಿವರಿಸುವಾಗ ಈ ಶಾಸನವನ್ನೇ ಉಲ್ಲೇಖಿಸುವುದು ಅನಿವಾರ್ಯವಾಗುತ್ತದೆ. ಅಂತೆಯೇ ಹಲ್ಮಿಡಿ ಶಾಸನದ ಕನ್ನಡದ ಸ್ವರೂಪವನ್ನು 'ಪೂರ್ವದ ಹಳಗನ್ನಡ' ಎಂದೂ ನಂತರದ ಬರವಣಿಗೆಯ ಹಂತಗಳನ್ನು 'ಹಳಗನ್ನಡ', 'ನಡುಗನ್ನಡ' 'ಹೊಸಗನ್ನಡ' ಎಂದು ವರ್ಗೀಕರಿಸಿದ್ದಾರೆ. ಇಂದು ನಾವು ಬಳಸುತ್ತಿರುವ ಕನ್ನಡ ಭಾಷಾಸ್ವರೂಪವನ್ನು 'ಆಧುನಿಕ ಕನ್ನಡ' ಎಂದು ನಾವು ಕರೆಯಬಹುದು.

ಹಲ್ಮಿಡಿ ಶಾಸನದಲ್ಲಿನ ಕನ್ನಡದ ಸ್ವರೂಪ, ಪದಪ್ರಯೋಗ ವೈಖರಿ, ಮೂಲಧಾತು, ವಿಭಕ್ತಿಪ್ರತ್ಯಯಾದಿ ವ್ಯಾಕರಣಾಂಗಗಳು ಇವುಗಳ ಬಗ್ಗೆ ಅಸಂಖ್ಯ ಲೇಖನಗಳು ಬಂದಿವೆ. ವಿದ್ವತ್ಪೂರ್ಣ ಮಂಡನೆಗಳು ನಡೆದಿವೆ. ಅವುಗಳ ಸಮೀಕ್ಷೆಯೇ ಒಂದು ಬೃಹತ್ ಗ್ರಂಥವಾಗುವಷ್ಟಿದೆ. ಅಷ್ಟೊಂದು ಆಳಕ್ಕಿಳಿಯುವುದು ಪ್ರಸ್ತುತಕ್ಕೆ ತೀರಾ ಅಗತ್ಯವಲ್ಲವಾದರೂ, ಅದರ ಕೆಲವು ಮುಖ್ಯಾಂಶಗಳನ್ನಾದರೂ ಪ್ರಸ್ತಾಪಿಸಲೇಬೇಕು.

ಇಂದಿನ ಕನ್ನಡದಂತೆಯೇ ಹಲ್ಮಿಡಿ ಶಾಸನದ ಕನ್ನಡದಲ್ಲೂ ಸಾಕಷ್ಟು ಸಂಸ್ಕೃತ ಭಾಷೆಯ ಪದಗಳು ಸೇರಿಕೊಂಡಿವೆ. ಈ ಶಾಸನ ಸಾಹಿತ್ಯದ ಶೈಲಿಯು ಕಾವ್ಯಾತ್ಮಕ ಗದ್ಯವಾಗಿರುವುದರಿಂದ ಸಂಸ್ಕೃತ ಪದಗಳು ಕೊಂಚ ಹೆಚ್ಚೇ ಎನ್ನುವಂತೆ ಬೆರೆತಿವೆ. ಇಂತಹ ಭಾಷಾಸಂಗಮವನ್ನು 'ಸಂಸ್ಕೃತಭೂಯಿಷ್ಠ ಕನ್ನಡ' ಎನ್ನುತ್ತಾರೆ. ಶಾಸನದ ಮೊದಲನೇ ಸಾಲಂತೂ ಪೂರ್ಣತಃ ಸಂಸ್ಕೃತ ಶ್ಲೋಕವೇ ಆಗಿದೆ. ''ಉಳಿದ ಹದಿನೈದು ಸಾಲುಗಳಲ್ಲಿರುವ ಅಚ್ಚ ಕನ್ನಡಪದಗಳ ಸಂಖ್ಯೆ ಕೇವಲ 25 ಮಾತ್ರ'' ಎಂದು 1936ರಲ್ಲಿ ಈ ಶಾಸನದ ಮೊದಲ ವರದಿಯನ್ನು ಬರೆದ ಡಾ|| ಎಂ.ಹೆಚ್. ಕೃಷ್ಣರವರು ಲೆಕ್ಕಹಾಕಿದ್ದಾರೆ. ಅಂದರೆ ಇವು ಕನ್ನಡ ಭಾಷೆಯದೇ ಆದ ಪದಗಳು. ಉಳಿದಂತೆ ಸಂಸ್ಕೃತದಿಂದ ಕನ್ನಡಕ್ಕೆ ಎರವಲಾಗಿಬಂದು ಸ್ವೀಕರಿಸಲ್ಪಟ್ಟ ಪದಗಳೂ ಸಾಕಷ್ಟಿವೆ.

ಇವನ್ನು ಅಂದಿನ ಜನರು ಕನ್ನಡವೆಂದೇ ಸ್ವೀಕರಿಸಿರಬೇಕು ಎಂಬುದನ್ನು ನಾವು ಮರೆಯಬಾರದು. ಕನ್ನಡದೊಂದಿಗೆ ಸಂಸ್ಕೃತವು ಕ್ರಿ.ಶ. 5ನೇ ಶತಮಾನದ ಮಧ್ಯಭಾಗದ ಹೊತ್ತಿಗೆ ಸಂಬಂಧ ಹೊಂದಿತ್ತು. ಶಿಷ್ಟರು ಬಳಸುತ್ತಿದ್ದ ಪ್ರೌಢ ಕನ್ನಡ ಭಾಷೆಯು ಸಂಸ್ಕೃತಭೂಯಿಷ್ಠವಾಗಿತ್ತು. ಅಂದಿನ ಜನಪದರ ಭಾಷೆಯೂ ಕನ್ನಡವಾಗಿತ್ತು -ಎಂದು ಭಾವಿಸಬೇಕು. ಡಾ॥ ಕೃಷ್ಣರವರ ಅಭಿಪ್ರಾಯವೂ ಇದೇ ಆಗಿದೆ.

ಇಂದಿನ ಕನ್ನಡ ರೂಪದೊಂದಿಗೆ ಅಂದಿನ ಕನ್ನಡದ ರೂಪವನ್ನು ತೌಲನಿಕವಾಗಿ ನೋಡಲು ಕೆಲವು ಉದಾಹರಣೆಗಳನ್ನು ನೀಡಬಹುದು.

ನಾಡುಳ್ = ನಾಡಿನಲ್ಲಿ, ಕೊಟ್ಟಾರ್ = ಕೊಟ್ಟರು, ಕಳ್ದೋನ್ = ಕಳೆದವನು, ಕದ್ದವನು, ಇರ್ವರುಂ = ಇಬ್ಬರೂ, ವಿಟ್ಟಾರ್ = ಬಿಟ್ಟರು, ಅದಾನಳಿಪ್ಪೊನ್ಗೆ = ಅದನ್ನು ನಾಶಪಡಿಸಿದವನಿಗೆ ......ಮುಂತಾದುವು. ಹಾಗೆಯೇ ಕದಮ್ಬಪನ್ = ಕದಂಬರಾಜನು, ಪಾತಕನ್ = ಪಾಪಿಯು, ಅಪ್ಪೋರ್ = ಆಗಿದ್ದಾರೆ, ಭರಿತೋನ್ = ಭರಿತನು ಎಂಬ ಪ್ರಯೋಗಗಳನ್ನೂ ಕಾಣಬಹುದು.

ಇಂದು 'ಅ'ಕಾರಾಂತವಾಗಿ ಬಳಕೆಯಾಗುತ್ತಿರುವ ಪದಗಳು 'ಆ'ಕಾರಾಂತವಾಗುತ್ತಿದ್ದುದು ಪೂರ್ವದ ಹಳಗನ್ನಡದ ಒಂದು ಲಕ್ಷಣ. ಹಲ್ಮಿಡಿ ಶಾಸನದಲ್ಲಿ 'ದೇಶದಾ', 'ಪಶುಪತಿಯಾ', 'ಭಟರಿಯಾ', 'ಜಯುನಾ' ಮುಂತಾದ ಪದಗಳು ಇದಕ್ಕೆ ಉದಾಹರಣೆ. ಹೊಸ ದೃಷ್ಟಿಕೋನದಿಂದ ವಿಮರ್ಶಿಸಲಾಗಿದೆ. ಗಮನಿಸಿರಿ ಅದಾನ್, ಕೊಟ್ಟಾರ್, ವಿಟ್ಟಾರ್ ಪದಗಳಲ್ಲಿ ಪದದ ಮಧ್ಯದಲ್ಲಿಯೇ 'ಅ' ಕಾರದ ಬದಲು 'ಆ' ಕಾರವು ಪ್ರಯೋಗಗೊಂಡಿದೆ. ಹೊಗಳಲ್ಪಟ್ಟವನ, ಜಯಪಡೆದ ಎಂಬ ಅರ್ಥವು 'ಪೊಗಳಿಪ್ಪೊಟ್ಟಣ', 'ಪೆತ್ತಜಯನಾ' ಎಂಬ ರೂಪದಲ್ಲಿ ಇದ್ದರೆ ಸಂಧಿಯ ಅಗತ್ಯವಿದ್ದರೂ ಸಂಧಿಮಾಡದೇ ವಿಸಂಧಿಯಾಗಿಯೇ ಪಲ್ಮಡಿಉಂ, ಮೂಳಿವಳ್ಳಿಉಂ, ವಿಜಅರಸ ಹೀಗೆ ಬಳಸಲಾಗಿದೆ.

ಸಂಸ್ಕೃತ ಪದಗಳ ತದ್ಭವ ಮತ್ತು ಭಾಷಾಂತರರೂಪಗಳೂ ಸಹ ಈ ಶಾಸನದಲ್ಲಿವೆ. ರಾಜನಿಗೆ ನೀಡಬೇಕಾದ ಕಂದಾಯಗಳಲ್ಲಿ ಆದಾಯದ ಆರನೇ ಒಂದು ಭಾಗಕ್ಕೆ 'ಷಟ್ಭಂಗ' ಎಂದೂ, ಹತ್ತನೇ ಒಂದು ಭಾಗಕ್ಕೆ 'ದಶವಂದ' ಎಂದೂ ಹೆಸರಿದೆ. ಇವನ್ನು ಶಾಸನವು 'ಸಟ್ಟಿಙ್ಗ' ಮತ್ತು 'ಪತ್ತೊನ್ದಿ' ಎಂದು ಉಲ್ಲೇಖಿಸಿದೆ. ಮೊದಲನೆಯದು ತದ್ಭವವಾದರೆ ಇನ್ನೊಂದು ಅನುವಾದಿತವಾಗಿದೆ. ಕೆಲವು ವಿದ್ವಾಂಸರು 'ಸಟ್ಟಿಙ್ಗ'ವನ್ನು ಒಂದು ಪ್ರದೇಶ ಎಂದು ಭಾವಿಸಿದರೂ, ಅದರ ನಿಷ್ಪತ್ತಿಯು ಸಂಸ್ಕೃತದ ಷಟ್ಭಂಗ (ಆರನೆಯ ಒಂದು ಭಾಗ) ಎಂಬುದರಿಂದ ಆಗಿದೆ -ಎಂದು ನಿರ್ಧಾರವಾಗಿದೆ.

ಹಲ್ಮಿಡಿ ಶಾಸನದ ಭಾಷಿಕ ಸ್ವರೂಪ ಲಕ್ಷಣಗಳು ಇದುವರೆಗೆ ನಮಗೆ ಸಿಕ್ಕಿರುವ ಅತ್ಯಂತ ಪ್ರಾಚೀನ ಕನ್ನಡದ ಸ್ವರೂಪ ಅಧ್ಯಯನವನ್ನು ಮಾಡುವ ಎಲ್ಲ ವಿದ್ವಾಂಸರುಗಳೂ ಹಲ್ಮಿಡಿ ಶಾಸನೋಕ್ತ ಪದಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದಾರೆ. ಪದಗಳ ಭಾಷಾಮೂಲ, ಅರ್ಥ, ವ್ಯಂಜನಪ್ರಯೋಗ, ವ್ಯಾಕರಣ, ಸಂಧಿ, ವಿಭಕ್ತಿಪ್ರತ್ಯಯ, ಧಾತು, ಅಲಂಕಾರ ಹೀಗೆ ಎಲ್ಲ ಮುಖಗಳನ್ನು ಅಳೆದಿದ್ದಾರೆ. ಅಂಥ ಸಂಶೋಧನೆಗಳಲ್ಲಿ ಕೆಲವೇ ಕೆಲವು ಉದಾಹರಣೆಗಳನ್ನು ಮಾತ್ರ ಇಲ್ಲಿ ನೀಡಲಾಗಿದೆ. ಹೆಚ್ಚಿನ ವಿವರಗಳನ್ನಪೇಕ್ಷಿಸುವವರು ಪುಸ್ತಕದ ಅಂತ್ಯದಲ್ಲಿ ಕೊಟ್ಟಿರುವ ಆಕರ ಗ್ರಂಥ - ಸಾಹಿತ್ಯ ಮೂಲಗಳನ್ನು ಪರಿಶೀಲಿಸಬಹುದು.

●

ಅಧ್ಯಾಯ-೮

ಹಲ್ಮಿಡಿ ಶಾಸನದ ಕಾಲ ಮತ್ತು ನಿರ್ಮಾತೃ

ಇದುವರೆಗೆ ಹಲ್ಮಿಡಿ ಶಾಸನವು ಇಲ್ಲಿಗೆ 15 ಶತಮಾನಗಳ ಹಿಂದಿನದು ಎಂದೂ, ಕದಂಬರ ಕಾಲದ್ದು ಎಂದೂ ಗಮನಿಸಿದೆವು. ಅದಕ್ಕೆ ಆಧಾರವೇನಾದರೂ ಇದೆಯೆ ಎಂದು ಪರಿಶೀಲಿಸಬೇಕು.

ಸಾಮಾನ್ಯವಾಗಿ ಶಾಸನಗಳಲ್ಲಿ ಅದನ್ನು ನಿರ್ಮಿಸಿದ ಕಾಲವು ಸ್ಪಷ್ಟವಾಗಿ ಸೂಚಿಸಲ್ಪಟ್ಟಿರುತ್ತದೆ. ಗಂಗ, ಚಾಲುಕ್ಯ, ಹೊಯ್ಸಳ ಮುಂತಾದವರುಗಳ ಆಡಳಿತ ಕಾಲದ ಶಾಸನಗಳಲ್ಲಿಯೂ, ಕದಂಬರ ಬಹಳಷ್ಟು ಶಾಸನಗಳಲ್ಲೂ ರಾಜನ ಆಡಳಿತ ವರ್ಷ ಕಾಲವು ನಮೂದಾಗಿದೆ. ಶಾಸನಗಳಲ್ಲಿ ಕಾಲದ ಸೂಚನೆ ಇರುವುದನ್ನು 'ಕಾಲ ನಿರೂಪಣೆ' ಎಂದು ಕರೆಯುತ್ತಾರೆ. ಬಹುತೇಕ ಶಾಸನಗಳಲ್ಲಿ ಕಾಲನಿರೂಪಣೆ ಇರುತ್ತದಾದರೂ, ಕೆಲವು ಶಾಸನಗಳಲ್ಲಿ ಕಾಲವು ನಮೂದಾಗಿರುವುದಿಲ್ಲ. ಇಂತಹ ಶಾಸನಗಳ ಕಾಲವನ್ನು ಪರ್ಯಾಯವಾಗಿ ಅದರಲ್ಲಿರುವ ರಾಜವಂಶಾವಳಿ, ಆಳುತ್ತಿದ್ದ ರಾಜನ ಉಲ್ಲೇಖ ಕೆಲವು ಪ್ರಮುಖ ಘಟನೆಗಳ ಪ್ರಸ್ತಾಪ ಇತ್ಯಾದಿಗಳಿಂದ ಊಹಿಸಬೇಕಾಗುತ್ತದೆ. ಈ ಅಂಶಗಳೂ ಲಭ್ಯವಿಲ್ಲದಿದ್ದರೆ ಶಾಸನದ ಲಿಪಿಯ ಸ್ವರೂಪವನ್ನು ಆಧರಿಸಿ ಸ್ಥೂಲವಾಗಿ ಊಹಿಸಬೇಕಾಗುತ್ತದೆ. 'ಎಪಿಗ್ರಾಫಿಯ ಕರ್ನಾಟಿಕ'ದ ಸಂಪುಟಗಳಲ್ಲಿ ಕಾಲದ ಸ್ಪಷ್ಟೀಕರಣವಿಲ್ಲದ ಶಾಸನಗಳ ಕಾಲವನ್ನು ಲಿಪಿಯ ಆಧಾರದ ಮೇಲೆ ಸ್ಥೂಲವಾಗಿ ನಿರ್ಣಯಿಸಿರುವುದನ್ನು ಕಾಣಬಹುದು.

ಪ್ರಸ್ತುತ ಹಲ್ಮಿಡಿ ಶಾಸನದಲ್ಲೂ ಇದೇ ಪರಿಸ್ಥಿತಿ ಇದೆ. ಇದರಲ್ಲಿ ಕಾಲದ ಸ್ಪಷ್ಟ ನಿರೂಪಣೆ ಇಲ್ಲ. ಆದರೆ ಅದರಲ್ಲಿ ಆಳುವ ರಾಜನ ಪ್ರಸ್ತಾಪವಿರುವುದರಿಂದ ಅದನ್ನು ಆಧರಿಸಿ ಶಾಸನದ ಕಾಲವನ್ನು ನಿರ್ಣಯಿಸಲು ವಿದ್ವಾಂಸರು ಯತ್ನಿಸಿದ್ದಾರೆ.

ನಮ್ಮ ಕನ್ನಡ ನೆಲವನ್ನು ಕದಂಬ, ಗಂಗ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮೊದಲಾದ ರಾಜರುಗಳಿಂದ ಹಿಡಿದು ಮೈಸೂರು ಒಡೆಯರವರೆಗೆ ಅನೇಕ ರಾಜಮನೆತನಗಳು ಆಳಿವೆ. ಇವರೆಲ್ಲರಿಗಿಂತ ಮೊದಲೇ ನಂದ, ಮೌರ್ಯ ಮತ್ತು ಶಾತವಾಹನರ ಆಡಳಿತಕ್ಕು ಸೇರಿರಲೇಬೇಕು. ಹಲ್ಮಿಡಿಗೆ ಸಮೀಪದಲ್ಲಿರುವ ಹಿರೇಮಗಳೂರಿನ ಶಿಲಾಯೂಪಸ್ತಂಭದಲ್ಲಿ ಶಾತವಾಹನರ ಕಾಲದ ಬ್ರಾಹ್ಮೀಲಿಪಿಯ

ಲೇಖನವಿದೆ.

ಹಲ್ಮಿಡಿ ಶಾಸನದ ಆದಿಭಾಗದಲ್ಲಿಯೇ - ಶ್ಲೋಕದ ನಂತರ, ಎರಡನೇ ಸಾಲಿನಲ್ಲಿರುವ ಶ್ರೀಮತ್ಕದಂಬಪನ್, ಕಕುಸ್ಥಭಟೋರನಾಳೆ ಈ ಪದಗಳು ಕದಂಬ ರಾಜವಂಶದ ಕಾಕುಸ್ಥವರ್ಮನನ್ನು ನಿರ್ದೇಶಿಸುತ್ತವೆ. 'ಕದಂಬರಾಜನಾದ ಕಾಕುಸ್ಥವರ್ಮನು ಆಳ್ವಿಕೆ ನಡೆಸುತ್ತಿದ್ದಾಗ.....' ಎಂದು ಸ್ಪಷ್ಟವಾಗಿ ಹೇಳಿದ ಶಾಸನವು ಕಾಲವನ್ನು ಮಾತ್ರ ಸೂಚಿಸಿಲ್ಲ. ಅಂದರೆ ಕಾಕುಸ್ಥವರ್ಮನ ಆಳ್ವಿಕೆಯ ಕಾಲವೇ ಹಲ್ಮಿಡಿ ಶಾಸನದ ಕಾಲ ಎಂದು ಮಾತ್ರ ಸ್ಪಷ್ಟವಾಯಿತು. ಕಾಕುಸ್ಥವರ್ಮನ ಆಳ್ವಿಕೆಯ ಕಾಲದ ಆಧಾರದಿಂದ ಎಂ.ಹೆಚ್. ಕೃಷ್ಣರವರು ಹಲ್ಮಿಡಿ ಶಾಸನ ಕಾಲವನ್ನು ಸ್ಥೂಲವಾಗಿ ಕ್ರಿ.ಶ. 450 ಎಂದು ಸೂಚಿಸಿದರೂ, ದಿನೇಶ್ ಸರ್ಕಾರ್ ಮುಂತಾದವರು ಕಾಕುಸ್ಥವರ್ಮನ ಆಡಳಿತಾವಧಿಯನ್ನು ಕ್ರಿ.ಶ. 405 ರಿಂದ 430 ಎಂದು ನಿರ್ಧರಿಸಿದ್ದು, ಇದನ್ನೇ ಕರ್ನಾಟಕರಾಜ್ಯ ಗೆಜೆಟಿಯರ್, ಎಪಿಗ್ರಾಫಿಯ ಕರ್ನಾಟಿಕ ಇತ್ಯಾದಿ ಗ್ರಂಥಗಳು ಸ್ವೀಕರಿಸಿ ಬಳಸಿವೆ. ಶ್ರೀ ಎನ್. ಲಕ್ಷ್ಮೀನಾರಾಯಣರಾಯರು ಲಿಪಿಯ ಲಕ್ಷಣಗಳಿಂದ ಹಲ್ಮಿಡಿ ಶಾಸನವು ಮಂಗಳೀಸನ ಬಾದಾಮಿ ಶಾಸನಕ್ಕಿಂತ ಆಧುನಿಕ ಎಂದು ಭಾವಿಸಿ ಅದರ ಕಾಲವನ್ನು ಕ್ರಿ.ಶ. 572ರ ನಂತರಕ್ಕೆ ಸೂಚಿಸಿದರು, ಆದರೆ ಶ್ರೀಯುತ ಗೋವಿಂದ ಪೈಗಳು 'ಹಲ್ಮಿಡಿ ಶಾಸನದ ಕಾಲ ಕ್ರಿ.ಶ. 265 ರಿಂದ 287' ಎಂದು ಸೂಚಿಸಿದ್ದರು. ಇಂತಹ ಇನ್ನೂ ಅನೇಕ ವಾದಗಳಿವೆ. ಒಟ್ಟಾರೆ ಈ ವಾದಗಳು ಹಲ್ಮಿಡಿ ಶಾಸನದ ಕಾಲವನ್ನು ಕ್ರಿ.ಶ. 265ರಿಂದ ಕ್ರಿ.ಶ. 600ರ ತನಕ ಎಳೆದಾಡಿವೆ. ಇವುಗಳಲ್ಲಿ ಕ್ರಿ.ಶ. 425 ಮತ್ತು 450 ಎಂಬ ಎರಡು ವಾದಗಳು ಹೆಚ್ಚು ಒಪ್ಪಿತವಾಗಿದ್ದು 'ಕ್ರಿ.ಶ. 450 ಹಲ್ಮಿಡಿ ಶಾಸನದ ಕಾಲ ಎಂದು ಎಂ.ಹೆಚ್. ಕೃಷ್ಣರವರು ಸೂಚಿಸಿರುವುದೇ ಸರಿಯಾಗಿದೆ.' ಎಂದು ಹೆಚ್ಚಿನ ವಿದ್ವಾಂಸರು ಒಪ್ಪಿದ್ದಾರೆ. ಕದಂಬರಾಜನಾದ ಕಾಕುಸ್ಥವರ್ಮನ ಕಾಲವನ್ನು ಈ ವಾದ ಆಧರಿಸಿದೆ.

ಹಲ್ಮಿಡಿ ಶಾಸನವು ಒಂದು ಸಂಕ್ಷಿಪ್ತ ಶಾಸನವಾಗಿರುವುದರಿಂದ ಅದರಲ್ಲಿ ವಿಸ್ತೃತ ರಾಜವಂಶಾವಳಿಯಂತಹ ವಿವರಗಳನ್ನು ಅಳವಡಿಸಲಾಗಿಲ್ಲ. ಈ ವಿವರಗಳನ್ನು ಶಿವಮೊಗ್ಗಾ ಜಿಲ್ಲೆಯ ಶಿಕಾರಿಪುರ ತಾಲೂಕಿನ ತಾಳಗುಂದ ಗ್ರಾಮದಲ್ಲಿ ಕದಂಬರ ಸ್ತಂಭಶಾಸನದಿಂದ ಪಡೆಯಲಾಗಿದೆ. ಇದರ ಪ್ರಕಾರ ಕದಂಬರಾಜ ವಂಶದ ಮೂಲಪುರುಷ 'ಮಯೂರವರ್ಮ'. ಇವನು ವೀರಶರ್ಮನ ಮೊಮ್ಮಗ ಮತ್ತು ಬಂಧುಷೇಣನ ಮಗ. ಇವರು ಮೂಲತಃ ಬ್ರಾಹ್ಮಣರು. ಮಾನವ್ಯ ಗೋತ್ರದವರು. ಪಾಂಡಿತ್ಯಪೂರ್ಣ ವೈದಿಕವಿದ್ಯಾನಿಪುಣರು. ಮಯೂರನ ಮೂಲ ಹೆಸರು 'ಮಯೂರಶರ್ಮ' ಎಂದು. ಮೊದಲು ಅವನೂ ವಂಶಪರಂಪರೆಗೆ ತಕ್ಕಂತೆ ವೈದಿಕ

ವಿದ್ಯೆಯನ್ನೇ ಕಲಿತನು. ಉನ್ನತ ವಿದ್ಯಾಭ್ಯಾಸಕ್ಕಾಗಿ ಘಟಿಕಾಸ್ಥಾನಕ್ಕೆಂದು ಅವನು ತಮಿಳುನಾಡಿನ ಕಾಂಚೀಪುರಕ್ಕೆ ಬರುವ ಸಂದರ್ಭವೊದಗಿತು. ಏಕೆಂದರೆ ಕಾಂಚಿಯು ಆ ದಿನಗಳಲ್ಲಿ ದಕ್ಷಿಣ ಭಾರತದ ಪ್ರಮುಖ ವಿದ್ಯಾಕೇಂದ್ರಗಳಲ್ಲಿ ಒಂದೆಂದು ಪ್ರಸಿದ್ಧವಾಗಿತ್ತು. ಈ ನಗರವು ಆಗ ಪಲ್ಲವರ ರಾಜ್ಯಕ್ಕೆ ಸೇರಿತ್ತು. ಅಲ್ಲಿಗೆ ಬಂದಾಗ ಮಯೂರಶರ್ಮನಿಗೆ ಪಲ್ಲವರ ಅಶ್ವದಳದ ಸೈನಿಕರಿಂದ ಅಪಮಾನವಾಯಿತು. ಇದರಿಂದ ತೀವ್ರವಾಗಿ ರೋಷಗೊಂಡ ಮಯೂರಶರ್ಮನು ಕ್ಷತ್ರಿಯರಾದ ಪಲ್ಲವರಿಗೆ ಬುದ್ಧಿಕಲಿಸಲು ಕ್ಷತ್ರಿಯವಿದ್ಯೆಯೇ ತಕ್ಕದ್ದು ಎಂದು ಭಾವಿಸಿ ಪ್ರತೀಕಾರದ ಪಣತೊಟ್ಟು, ಬ್ರಹ್ಮವಿದ್ಯೆಯನ್ನು ಕೈಬಿಟ್ಟು ಕ್ಷತ್ರಿಯ ವಿದ್ಯೆಯನ್ನು ಆಶ್ರಯಿಸಿದನು. ಹೀಗೆ 'ದರ್ಭೆಯನ್ನು ಬಿಸುಟು ಕತ್ತಿಯನ್ನು ಹಿಡಿದ' ಮಯೂರಶರ್ಮನು ಮುಂದೆ 'ಮಯೂರವರ್ಮ' ಎಂಬ ಹೆಸರಿನಿಂದ ಕ್ಷತ್ರಿಯನಾದನು. ಸುತ್ತಮುತ್ತಲ ಇಕ್ಷ್ವಾಕು ಮುಂತಾದ ಚಿಕ್ಕಪುಟ್ಟ ರಾಜರುಗಳ ಸಹಾಯದಿಂದ ಪಲ್ಲವರನ್ನು ಮಣಿಸಿದನು. ಇವನ ಕೋಟಲೆಯನ್ನು ತಡೆಯಲಾರದೆ ವಿಧಿಯಿಲ್ಲದೆ ರಾಜಿ ಮಾಡಿಕೊಂಡು ಪಶ್ಚಿಮಸಮುದ್ರದಿಂದ ಪ್ರೇಹಾರದವರೆಗಿನ ರಾಜ್ಯವನ್ನು ಅವನಿಗೆ ಒಪ್ಪಿಸಿಕೊಟ್ಟರು. ಆ ನೆಲಕ್ಕೆ ಮಯೂರವರ್ಮನು ರಾಜನಾದನು. ಇದು ಬ್ರಾಹ್ಮಣನಾದ ಮಯೂರನು ಕ್ಷತ್ರಿಯತ್ವವನ್ನು ಸ್ವೀಕರಿಸಿ ರಾಜನಾದ ಕಥೆ. ಇವರು ಕನ್ನಡಿಗರೇ ಆದುದರಿಂದ, ಇವರಿಗಿಂತ ಮೊದಲು ಕನ್ನಡಿಗರಾರೂ ರಾಜರಾಗಿರಲಿಲ್ಲವಾದ್ದರಿಂದ - ಮಯೂರವರ್ಮನ ವಂಶವೆ ಮೊತ್ತಮೊದಲ ಕನ್ನಡ ರಾಜವಂಶವೆಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಕನ್ನಡ ನೆಲದ ಬನವಾಸಿಯು ಅವರ ರಾಜಧಾನಿಯಾಯಿತು. ಈ ರಾಜವಂಶವು 'ಕದಂಬವಂಶ' ಎಂದು ಪ್ರಸಿದ್ಧವಾಯಿತು.

ಇವರಿಗೆ 'ಕದಂಬರು' ಎಂಬ ಹೆಸರು ಬರಲು ಕಾರಣವನ್ನು ಹೇಳುವ ಜನಪದಕತೆ, ದಂತಕತೆಗಳು ಅನೇಕವಿವೆ. ಆದರೆ ತಾಳಗುಂದ ಶಾಸನದಲ್ಲಿನ '.....ಗೃಹಸಮೀಪ ದೇಶ ಸಂರೂಢ ವಿಕಸತ್ಕದಂಬೆಕಪಾದಪಮ್....' ಎಂಬ ಭಾಗದಿಂದ 'ಇವರ ಮನೆಯ ಸಮೀಪದಲ್ಲಿ ಒಂದು ಸುಂದರವಾದ ಕದಂಬವೃಕ್ಷವಿತ್ತು' ಎಂದು ವಿಶೇಷವಾಗಿ ಉಲ್ಲೇಖಿಸಿರುವುದರಿಂದ ಇವರು ಕದಂಬವೃಕ್ಷವನ್ನಾರಾಧಿಸುವ ಮನೆತನದವರೆಂದು ಗುರ್ತಿಸಿ ಇವರನ್ನು 'ಕದಂಬರು' ಎಂದು ಕರೆದಿರಬೇಕು -ಎಂಬ ಸೂಚನೆ ಸಿಗುತ್ತದೆ. ಆದರೆ ಕದಂಬವೃಕ್ಷವು ಎಂದೂ ಕದಂಬರ ರಾಜಲಾಂಛನವಾಗಿರಲಿಲ್ಲ. ಇವರ ರಾಜಲಾಂಛನ ಸಿಂಹ. ಕೆಲವೊಮ್ಮೆ ಧ್ವಜದಲ್ಲಿ ಕಪಿಲಾಂಛನವನ್ನು ಬಳಸಿದುದರಿಂದ ಇವರನ್ನು ಸಿಂಹಧ್ವಜರು, ಕಪಿಲಾಂಛನರು ಎಂದು ಗುರ್ತಿಸಲಾಗಿದೆ. ಕದಂಬರ ತಾಮ್ರಶಾಸನಗಳ ಬಳೆಯಲ್ಲಿಯೂ 'ಸಿಂಹ'ವೇ

ರಾಜಮುದ್ರೆಯಾಗಿದೆ.

ಇವರ ವಂಶವು 'ಕದಂಬವಂಶ' ಎಂದು ಪ್ರಸಿದ್ಧವಾಗಿದ್ದುದನ್ನೂ ಸಹ ತಾಳಗುಂದ ಶಾಸನವೇ ಹೇಳಿದೆ '.....ಕದಮ್ಬಕುಲೇ ಶ್ರೀಮಾನ್ ಬಭೂವದ್ವಿಜೋತ್ತಮನಾಮತೋಮಯೂರಶರ್ಮಃ......' ಎಂಬ ಸಾಲು 'ಕದಂಬವಂಶದಲ್ಲಿ ಜನಿಸಿದ ಬ್ರಾಹ್ಮಣೋತ್ತಮನಾದ, ಮಯೂರಶರ್ಮನೆಂಬ ಹೆಸರಿನ....' ಎಂಬ ಅರ್ಥವನ್ನು ಅತಿಸ್ಪಷ್ಟವಾಗಿ ಉಲ್ಲೇಖಿಸಿದೆ. ಈ ರೀತಿ ಕನ್ನಡ ನೆಲದ ಬ್ರಾಹ್ಮಣ ವಂಶವೊಂದು ಇತಿಹಾಸದಲ್ಲಿ ಮೊತ್ತಮೊದಲ ಕನ್ನಡ ರಾಜವಂಶವಾಗಿ ಆಡಳಿತವನ್ನು ನಡೆಸಿದೆ. ಇದರ ಮೊದಲ ರಾಜನಾದ ಮಯೂರವರ್ಮನ ಆಳ್ವಿಕೆಯ ಕಾಲ ಸು. ಕ್ರಿ.ಶ. 325 ರಿಂದ 345 ಎಂದು ತಿಳಿಯಲಾಗಿದೆ. ಇವನ ತಾರುಣ್ಯದ ಬಹುಭಾಗ ಪಲ್ಲವರೊಂದಿಗಿನ ಸಂಘರ್ಷದಲ್ಲಿ ಕಳೆಯಿತು. ಛಲ ಹಿಡಿದು ರಾಜನಾದವನು ಇವನು. ಇವನ ಮಗ ಕಂಗವರ್ಮ (ಸು. 345 ರಿಂದ 365). ಕಂಗವರ್ಮನ ಮಗ ಭಗೀರಥ (ಕ್ರಿ.ಶ. ಸು. 365 ರಿಂದ 385). ಇವನ ಮೊದಲ ಮಗ ರಘುವು ಕ್ರಿ.ಶ. 385 ರಿಂದ 405ರ ವರೆಗೆ ಆಳಿದನು. ಇವನ ನಂತರ ಇವನ ಸಹೋದರ ಕಾಕುಸ್ಥವರ್ಮನು ರಾಜನಾದನು (405 ರಿಂದ 430). ಕಾಕುಸ್ಥವರ್ಮನನ್ನು (ಹೊಯ್ಸಳ ವಂಶದ ವಿಷ್ಣುವರ್ಧನನಿಗೆ ಕೆಲವು ಅಂಶಗಳಲ್ಲಿ ಹೋಲಿಸಬಹುದು.) ಇವನೂ ತನ್ನ ಅಣ್ಣನ ಉತ್ತರಾಧಿಕಾರಿಯಾದವನು. ರಾಜ್ಯವನ್ನು ಬಲಪಡಿಸಿದನು. ವಿಸ್ತರಿಸಿದನು. ಗುಪ್ತ, ಸೇಂದ್ರಕ, ಬಾಣ ಮುಂತಾದ ರಾಜವಂಶಗಳೊಂದಿಗೆ ಸ್ನೇಹ ಗಳಿಸಿದನು. ಪಲ್ಲವರೊಂದಿಗಿನ ಶತೃತ್ವ ಮುಂದುವರಿದಿತ್ತು. ಹಲ್ಮಿಡಿ ಶಾಸನದ ಕಾಲಕ್ಕೆ ಕದಂಬರು ಪಲ್ಲವರೊಂದಿಗೆ ಯುದ್ಧಮಾಡಿ ಗೆದ್ದಿದ್ದರು. ಈ ಯುದ್ಧದಲ್ಲಿ ಕದಂಬರಿಗೆ ಸೇಂದ್ರಕ, ಬಾಣ ಮುಂತಾದವರು ಪಲ್ಲವರಿಗೆ ಕೇಕಯರ ಸಹಾಯವಿತ್ತು -ಎಂದು ಹಲ್ಮಿಡಿ ಶಾಸನದಿಂದ ಅರ್ಥಮಾಡಲಾಗಿದೆ.

ಕಾಕುಸ್ಥವರ್ಮನಿಗೆ ಇಬ್ಬರು ಮಕ್ಕಳು. ಇವನ ನಂತರ ಕದಂಬರಾಜ್ಯವು ಎರಡು ಪಾಲಾಗಿ ಮಕ್ಕಳಿಗೆ ಹಂಚಲ್ಪಟ್ಟಿತು. ರಾಜಧಾನಿ ಬನವಾಸಿ ಇದ್ದ ಭಾಗಕ್ಕೆ ಶಾಂತಿವರ್ಮನು ರಾಜನಾದನು (ಸು. 430 ರಿಂದ 455). ಇದರಿಂದ ಹಲ್ಮಿಡಿ ಊರಿರುವ ಭಾಗಕ್ಕೆ ಶಾಂತಿವರ್ಮನು ಒಡೆಯನಾದನು. ಶಾಂತಿವರ್ಮನ ಇಬ್ಬರು ಪುತ್ರರಲ್ಲಿ ಹಿರಿಯವನಾದ ಮೃಗೇಶ ವರ್ಮನು ಕ್ರಿ.ಶ. 455ರಲ್ಲಿ ಪಟ್ಟಕ್ಕೆ ಬಂದನು. ಅಜ್ಜನ ರಾಜ್ಯವನ್ನು ಅಭಿವೃದ್ಧಿಪಡಿಸಿದನು. ಮೃಗೇಶವರ್ಮನ ರಾಜ್ಯಕ್ಕೆ ಬನವಾಸಿಯ ಜತೆಗೆ ಬೆಳಗಾವಿ ಜಿಲ್ಲೆಯ 'ಹಲಸಿಗೆ'ಯು ಎರಡನೇ ರಾಜಧಾನಿಯಾಯಿತು. ತನ್ನ ರಾಜಕೀಯ ಮಿತ್ರರಾದ ಕೇಕಯ ವಂಶದ ಪ್ರಭಾವತಿಯನ್ನು ಮೃಗೇಶವರ್ಮನು ವಿವಾಹವಾಗಿ

ಮಿತ್ರತ್ವವನ್ನು ಬಲಗೊಳಿಸಿದನು. ಮೃಗೇಶವರ್ಮನ ನಂತರ ಅವನ ತಮ್ಮ ಶಿವಮಾಂಧಾತೃವು ಸ್ವಲ್ಪಕಾಲ ರಾಜ್ಯವಾಳಿದ ನಂತರ ಮತ್ತೆ 485ರಲ್ಲಿ ಮೃಗೇಶವರ್ಮನ ಮಗನಾದ ರವಿವರ್ಮನೂ, ಅವನ ನಂತರ ರವಿವರ್ಮನ ಮಗ ಹರಿವರ್ಮನು 519ರಲ್ಲೂ ಪಟ್ಟಕ್ಕೆ ಬಂದರು. ಈ ಹರಿವರ್ಮನಿಂದ ಇನ್ನೊಂದು ಕದಂಬಶಾಖೆಯ ಇಮ್ಮಡಿ ಕೃಷ್ಣವರ್ಮನು ರಾಜ್ಯವನ್ನು ಕಿತ್ತು ತನ್ನ ರಾಜ್ಯಕ್ಕೆ ಸೇರಿಸಿದಾಗ ಕದಂಬರಾಜ್ಯ ಮತ್ತೆ ಒಂದಾಯಿತು. ಆದರೆ ಕ್ರಿ.ಶ. 540ರ ಸುಮಾರಿಗೆ ಒಂದನೇ ಪುಲಿಕೇಶಿಯು ಕದಂಬರಾಜ್ಯವನ್ನು ಆಕ್ರಮಿಸಿಕೊಂಡನಂತರ ಕದಂಬರ ರಾಜ್ಯಾಧಿಕಾರ ಕೊನೆಗೊಂಡಿತು. ಕದಂಬವಂಶದ ಸದಸ್ಯರು ಕರ್ನಾಟಕದಾದ್ಯಂತ ಅತ್ತಿತ್ತ ಚದುರಿಹೋದರು.

ಇದು ಕದಂಬರ ಸಂಕ್ಷಿಪ್ತ ಇತಿಹಾಸ. ಹಲ್ಮಿಡಿ ಶಾಸನವನ್ನು ನಮಗೆ ನೀಡಿದ ರಾಜವಂಶದ ಇತಿಹಾಸವನ್ನು ಸ್ಥೂಲವಾಗಿಯಾದರೂ ನಾವು ತಿಳಿದಿರಬೇಕೆಂಬ ಉದ್ದಿಶ್ಯದಿಂದ ಇಲ್ಲಿ ದಾಖಲಿಸಲಾಗಿದೆ. ಕದಂಬರು 'ಬನವಾಸಿಯ ಕದಂಬರು' ಎಂದು ಪ್ರಸಿದ್ಧರಷ್ಟೆ. ಬನವಾಸಿಯು ಇವರ ರಾಜಧಾನಿಯಾಗಿದ್ದುದು ಇದಕ್ಕೆ ಕಾರಣ. ಆದರೆ ಮಯೂರವರ್ಮನು ತನ್ನ ರಾಜ್ಯವನ್ನು ಸ್ಥಿರಪಡಿಸುವಾಗ ಬನವಾಸಿಗಿಂತ ಮೊದಲು ಚಿತ್ರದುರ್ಗ ಪರಿಸರದ 'ಕದಂಬಳಿಗೆ' ನಾಡಿನಿಂದ ತನ್ನ ರಾಜ್ಯಾರಂಭ ಮಾಡಿರಬಹುದೆಂದು ವಿದ್ವಾಂಸರು ಊಹಿಸಿದ್ದಾರಾದರೂ, ಇದಕ್ಕೆ ಹೆಚ್ಚಿನ ನೇರ ಆಧಾರಗಳಿಲ್ಲ. ಆದರೆ ಬನವಾಸಿಯ ಬಗ್ಗೆ ಶಾಸನಾಧಾರಗಳಿವೆ.

●

ಅಧ್ಯಾಯ-೯

ಹಲ್ಮಿಡಿ ಶಾಸನದ ಪೂರ್ಣಪಾಠ

ಹಲ್ಮಿಡಿ ಶಾಸನದ ಲಿಪಿಯು ದಾಕ್ಷಿಣಾತ್ಯ ಬ್ರಾಹ್ಮೀಲಿಪಿ ಭಾಷೆಯು ಕನ್ನಡ ಅದೂ ಒಂದೂವರೆ ಸಾವಿರ ವರ್ಷ ಹಿಂದಿನದು. ಹಳಗನ್ನಡಕ್ಕಿಂತಲೂ ಹಳೆಯದಾದ ಪೂರ್ವದ ಹಳಗನ್ನಡ. ಅದನ್ನು ನಾವು ಓದುವಂತೆಯೂ ಇಲ್ಲ. ಓದಿದರೆ ಸುಲಭವಾಗಿ ಅರ್ಥವಾಗುವಂತೆಯೂ ಇಲ್ಲ. ಶಾಸನ ಪಾಠವನ್ನು ಇಂದಿನ ಕನ್ನಡಲಿಪಿಯಲ್ಲಿ ಬರೆದರೆ ಸರಿಯಾಗಿ ಓದಬಹುದು. ಪ್ರಾಚೀನ ಕನ್ನಡದ ಭಾಷಾಸ್ವರೂಪವನ್ನೂ ತಿಳಿಯಬಹುದು. ಅರ್ಥಮಾಡಿಕೊಳ್ಳಲು ಯತ್ನಿಸಬಹುದು. ಅದಕ್ಕಾಗಿ ಶಾಸನದ ಪಾಠವನ್ನು ಆಧುನಿಕ ಕನ್ನಡ ಲಿಪಿಯಲ್ಲಿ ನೀಡಲಾಗಿದೆ. ಮತ್ತು ತಾಳೆನೋಡಲು ಅನುಕೂಲವಾಗುವಂತೆ ಬ್ರಾಹ್ಮೀಲಿಪಿಯಲ್ಲೂ ನೀಡಲಾಗಿದೆ.

ಹಲ್ಮಿಡಿ ಶಾಸನದ ಪಾಠ - ಕನ್ನಡ ಆಧುನಿಕ ಲಿಪ್ಯಂತರ

ಮುಂಭಾಗ

1 ಜಯತಿ ಶ್ರೀ ಪರಿಷ್ವಙ್ಗಶ್ಶಾರ್ಙ್ಗ[ವ್ಯಾ]ನತಿರಚ್ಯುತಃ
ದಾನವಾಕ್ಷ್ಣೋರ್ಯ್ಯುಗಾನ್ತಾಗ್ನಿಃ [ಶಿಷ್ಟಾನಾನ್ತು] ಸುದರ್ಶನಃ ॥

2 ನಮಃ ಶ್ರೀಮತ್ಕದಂಬಪನ್ತ್ಯಾಗಸಂಪನ್ನನ್ಕಲಭೋರ[ನಾ] ಅರಿಕ

3 ಕುಸ್ಥಭಟ್ಟೋರನಾಳೆ ನರಿದಾವಿ[ಳೆ] ನಾಡುಳ್ ಮೃಗೇಶನಾ

4 ಗೇನ್ದ್ರಾಭೀಳಭ್ಬಟಹರಪ್ಪೋರ್ ಶ್ರೀ ಮೃಗೇಶನಾಗಾಹ್ವಯ

5 ರಿರ್ವ್ವರಾ ಬಟರಿಕುಲಾಮಲವ್ಯೋಮತಾರಾಧಿನಾಥನ್ನಳಪ

6 ಗಣಪಶುಪತಿಯಾ ದಕ್ಷಿಣಾಪಥ ಬಹುಶತಹವನಾ

7 ಹವದು[ಳ್] ಪಶುಪ್ರದಾನ ಶೌರ್ಯ್ಯೋದ್ಯಮಭರಿತೋ[ನ್ದಾನ]ಪ

8 ಶುಪತಿಯೆನ್ದು ಪೊಗಟೆಪ್ಪೊಟ್ಟಣ ಪಶುಪತಿ

9 ನಾಮಧೇಯನಾಸರಕ್ಕೆಲ್ಲಭಟರಿಯಾ ಪ್ರೇಮಾಲಯ

10 ಸುತನ್ಗೆ ಸೇನ್ದ್ರಕಬಣೋಭಯದೇಶದಾ ವೀರಪುರುಷ ಸಮಕ್ಷ

11 ದೆ ಕೇಕಯ ಪಲ್ಲವರಂ ಕಾದೆಱಿದು ಪೆತ್ತಜಯನಾ ವಿಜ

12 ಅರಸನ್ಗೆ ಬಾಳ್ಗಟ್ಟು ಪಲ್ಮಡಿಉಂ ಮೂಱುವಳ್ಳಿಉಂ ಕೊ

13 ಟ್ಟಾರ್ ಬಟಾರಿಕುಲದೊನಳಕದಮ್ಬನ್ಕಳ್ದೋನ್ ಮಹಾಪಾತಕನ್

14 ಇರ್ವ್ವರುಂ ಸಬ್ಬಙ್ಗದರ್ ವಿಜಾರಸರುಂ ಪಲ್ಮಡಿಗೆ ಕುಱು

15 ಮ್ಬಿಡಿವಿಟ್ಟಾರ್ ಅದಾನಳಿವೊನ್ಗೆ ಮಹಾಪಾತಕಮ್ ಸ್ವಸ್ತಿ

ಎಡಪಕ್ಕ

16 ಭಟ್ಟರ್ಗ್ಗೀಗಟ್ದೆ ಒಡ್ಡಲಿ ಆ ಪತ್ತೊನ್ದಿ ವಿಟ್ಟಾರಕರ

ಕನ್ನಡ ಲಿಪ್ಯಂತರದ ಈ ಪಾಠವನ್ನು 'ಎಪಿಗ್ರಾಫಿಯ ಕರ್ನಾಟಿಕಾ'ದ ಒಂಬತ್ತನೇ ಸಂಪುಟದಿಂದ ಆಯ್ದುಕೊಳ್ಳಲಾಗಿದೆ. ಆ ಸಂಪುಟದಲ್ಲಿ ಹಲ್ಮಿಡಿ ಶಾಸನವು ಬೇಲೂರು ತಾಲ್ಲೂಕಿನ 236ನೇ ಶಾಸನವಾಗಿ 222ನೇ ಪುಟದಲ್ಲಿ ದಾಖಲಾಗಿದೆ. ಇದರ ಆಂಗ್ಲ ಅನುವಾದವು ಅದೇ ಸಂಪುಟದ 677ನೇ ಪುಟದಲ್ಲಿ ನೀಡಲ್ಪಟ್ಟಿದೆ. ಆಸಕ್ತರು

ಪರಿಶೀಲಿಸಬಹುದು.

ಮೊದಲ ಸಾಲಿನ 'ವ್ಯಾ' ಅಕ್ಷರವನ್ನು ಕೆಲವರು 'ಮ್ಯಾ' ಎಂದು ಓದಿದ್ದಾರೆ. ಆರನೇ ಸಾಲಿನ 'ಪಶುಪತಿಯಾ....' ಎಂಬುದನ್ನು 'ಪಶುಪತಿಮಾ....' ಎಂದು ಓದಿದ್ದಾರೆ.

ಇಲ್ಲಿ ಕೊಟ್ಟಿರುವ ಶಾಸನ ಪಾಠವು ಕನ್ನಡ ಗದ್ಯವೇ ಆಗಿದೆಯಾದರೂ, ಸುಲಭವಾಗಿ ಅರ್ಥವಾಗುವುದಿಲ್ಲ. ಶಾಸನವೊಂದನ್ನು ಅರ್ಥಮಾಡಿಕೊಳ್ಳಲು ಹಲವಾರು ಹಂತಗಳಿವೆ. ಅದರಲ್ಲಿ ಮೊದಲನೆಯದು ವಾಕ್ಯಗಳನ್ನು ಸರಿಯಾಗಿ ವಿಭಾಗಿಸಿಕೊಳ್ಳುವುದು. ಹಲ್ಮಿಡಿ ಶಾಸನದ ಸಾಹಿತ್ಯವು ಪೂರ್ಣವಿರಾಮ, ಅರ್ಧವಿರಾಮ ಇತ್ಯಾದಿ ಚಿಹ್ನೆಗಳಿಲ್ಲದೆ ನಿರಂತರವಾಗಿ ಸಾಗಿದೆ. ಅದನ್ನು ಸರಿಯಾಗಿ ವಾಕ್ಯ ವಿಭಾಗ ಮಾಡಿಕೊಳ್ಳದಿದ್ದರೆ ಅದು ಅರ್ಥವಾಗದು.

ಎರಡನೆಯ ಹಂತ - ಪದಗಳ ವಿಭಜನೆ. ಅರ್ಥವತ್ತಾಗುವಂತೆ ಪದಗಳನ್ನು ಸರಿಯಾಗಿ ಬಿಡಿಸಿಕೊಳ್ಳುವಿಕೆ. ಇದಕ್ಕೆ 'ಶಾಸನದ ಅನ್ವಯಕಾರ್ಯ' ಎಂದು ಹೆಸರು. ಶಾಸನದ ಅನ್ವಯದ ನಂತರ ಕಠಿಣ ಪದಗಳಿಗೆ ಅರ್ಥ ಹುಡುಕಬೇಕು. ಶಾಸನದ ಸಂದರ್ಭ, ಅದರಲ್ಲಿರುವ ಘಟನೆ - ವ್ಯಕ್ತಿಗಳ ಹಿನ್ನೆಲೆಯನ್ನು ಸರಿಯಾಗಿ ತಿಳಿದುಕೊಂಡು, ಸಮರ್ಥವಾದ ಊಹೆಗಳಿಂದ ಶಾಸನವನ್ನು ಅರ್ಥೈಸಬೇಕು.

ಹಲ್ಮಿಡಿ ಶಾಸನದಲ್ಲಿ ಒಟ್ಟು 16 ಸಾಲುಗಳಿವೆ. ಅದರಲ್ಲಿ ಮೊದಲನೆಯ ಸಾಲು ಸಂಸ್ಕೃತ ಶ್ಲೋಕ. ದೇವತಾಸ್ತುತಿ. ಶಾಸನೋದ್ದಿಷ್ಟ ಸಾಹಿತ್ಯವು ಎರಡನೇ ಸಾಲಿನಿಂದ ಆರಂಭವಾಗುತ್ತದೆ. ಈ ಪಾಠವನ್ನು ಪದವಿಭಾಗ ಮಾಡಿಕೊಂಡರೆ ಅದರ ಅನ್ವಯವು ಹೀಗಿರುತ್ತದೆ-

ಹಲ್ಮಿಡಿ ಶಾಸನ ಪಾಠದ ಅನ್ವಯ

ನಮಃ - ಶ್ರೀಮತ್ - ಕದಂಬಪನ್ - ತ್ಯಾಗ - ಸಂಪನ್ನನ್ - ಕಲಭೋರನಾ - ಅರಿ - ಕಕುಸ್ಥಭಟ್ಟೋರನ್ - ಆಳೆ - ನರಿದಾವಿಳೆ - ನಾಡುಳ್ - ಮೃಗೇಶ - ನಾಗೇನ್ದ್ರ-ಅಭೀಳರ್ - ಭಟಹರ್ - ಅಪ್ಪೋರ್ - ಶ್ರೀ - ಮೃಗೇಶನಾಗ - ಅಹ್ವಯರ್ - ಇರ್ವರ್ - ಆ - ಬಟರಿ - ಕುಲ - ಅಮಲ - ವ್ಯೋಮ - ತಾರಾ - ಅಧಿನಾಥನ್ - ಅಳಪ - ಗಣ - ಪಶುಪತಿ - ಆ - ದಕ್ಷಿಣಾಪಥ - ಬಹು - ಶತಹವನ - ಆಹವದುಳ್ - ಪಶು - ಪ್ರದಾನ - ಶೌರ್ಯ - ಉದ್ಯಮ - ಭರಿತೋನ್ - ದಾನ - ಪಶುಪತಿ - ಎಂದು - ಪೊಗಳೆಪ್ಪೊಟ್ಟಣ - ಪಶುಪತಿ - ನಾಮಧೇಯನ - ಆಸರಕ್ಕೆ - ಎಲ್ಲಭಟರಿಯ - ಪ್ರೇಮಾಲಯ - ಸುತನ್ಗೆ - ಸೇನ್ದ್ರಕ - ಬಣ ಉಭಯ - ದೇಶದ - ಆ - ವೀರ - ಪುರುಷ - ಸಮಕ್ಷದೆ - ಕೇಕಯ - ಪಲ್ಲವರಂ - ಕಾದಿ - ಎರಿದು -

ಪೆತ್ತ - ಜಯನ - ಆ - ವಿಜಅರಸನ್ಗೆ - ಬಾಳ್ಗಚ್ಚು ಪಲ್ಮಡಿಉಂ - ಮೂಚುವಳ್ಳಿಉಂ - ಕೊಟ್ಟಾರ್ - ಬಟಾರಿ - ಕುಲದೊನ್ - ಅಳ - ಕದಮ್ಬನ್ - ಕಳ್ದೋನ್ - ಮಹಾಪಾತಕನ್ - ಇರ್ವ್ವರುಂ - ಸಟ್ಬಿಜ್ಗರರ್ - ವಿಚಾರಸರುಂ - ಪಲ್ಮಡಿಗೆ - ಕುಱುಂಬಿಡಿ - ವಿಟ್ಟಾರ್ - ಅದಾನ್ - ಅಳಿವೊನ್ಗೆ - ಮಹಾ - ಪಾತಕಂ - ಸ್ವಸ್ತಿ - ಭಟ್ಟರ್ಗೆ - ಈ ಗಳ್ದಿ - ಒಡ್ಡಲಿ - ಆ - ಪತ್ತೊನ್ದಿ - ವಿಟ್ಟಾರ್ - ಅಕರ

ಈ ರೀತಿ ಅನ್ವಯಮಾಡಿ ಶಬ್ದಗಳನ್ನು ಬಿಡಿಸಿಕೊಂಡು ಸರಿಯಾಗಿ ಅರ್ಧವಿರಾಮ ಪೂರ್ಣವಿರಾಮ ಸ್ಥಾನಗಳನ್ನು ಗುರ್ತಿಸಿ, ಆಮೇಲೆ ಕಠಿಣ ಪದಗಳ ಅರ್ಥವನ್ನು ಸಂಪಾದಿಸಿಕೊಂಡರೆ ಶಾಸನ ಸಾಹಿತ್ಯದ ಅರ್ಥವನ್ನು ಸಾಕಷ್ಟು ಉತ್ತಮವಾಗಿ ಗ್ರಹಿಸಬಹುದು. (ಆಸರಕ್ಕೆಲ್ಲಭಟರಿಯ ಎಂಬುದನ್ನು ಆ - ಸರಕ್ಕೆಲ್ಲ ಭಟರಿಯ ಎಂದೂ ಡಾ|| ಎಂ.ಎಂ. ಕಲ್ಬುರ್ಗಿಯವರು ಅನ್ವಯಿಸಿದ್ದಾರೆಂಬ ಅಂಶ ಇಲ್ಲಿ ಗಮನಾರ್ಹವಾಗಿದೆ.)

ಅಧ್ಯಾಯ-೧೦

ಹಲ್ಮಿಡಿ ಶಾಸನದ ಅರ್ಥ ಮತ್ತು ಆಶಯ

ಸುಮಾರು 65 ವರ್ಷಗಳಿಂದ ಅನೇಕ ವಿದ್ವಾಂಸರುಗಳು, ಆಸಕ್ತರು, ಜಿಜ್ಞಾಸುಗಳು ಹಲ್ಮಿಡಿ ಶಾಸನದ ಪದಶಃ ಅರ್ಥವನ್ನು ಗ್ರಹಿಸಲು ಯತ್ನಿಸುತ್ತಲೇ ಇದ್ದಾರೆ. ಈ ಶಾಸನದ ಪದ, ವಾಕ್ಯಗಳು ನೀಡುವ ವಿಶೇಷಾರ್ಥ, ವಾಕ್ಯಗಳ ಸಂದರ್ಭ ಇವನ್ನೆಲ್ಲ ಪರಿಶೀಲಿಸಿ ನಿರ್ಣಯಕ್ಕೆ ಬರುವ ಯತ್ನದಲ್ಲಿ ವಿದ್ವಾಂಸರುಗಳ ಮಧ್ಯೆ ಭಾಷಿಕ ಸಮರವೇ ನಡೆದಿದೆ, ನಡೆಯುತ್ತಲೂ ಇದೆ. ಅನೇಕ ಪದಗಳು ತಮ್ಮ ಗುಟ್ಟು ಬಿಡದೆ ಕುತೂಹಲಕ್ಕು, ಜಿಜ್ಞಾಸೆಗೂ ಕಾರಣವಾಗಿ ಉಳಿದಿವೆ. ಹಾಗಿದ್ದೂ ಈ ಅಧ್ಯಾಯದಲ್ಲಿ ಹೆಚ್ಚಿನ ಜಿಜ್ಞಾಸೆಗೆ ಕಾರಣವಾಗದಂತೆ ಆದಷ್ಟೂ ಸರಳವಾದ ಅರ್ಥವನ್ನು ವಿವರಿಸಿದೆ.

ಶಾಸನದ ಶಿರೋಭಾಗದಲ್ಲಿ ಅರೆವೃತ್ತಾಕಾರಕ್ಕೆ - ಕುದುರೆಲಾಳಾಕಾರದಲ್ಲಿ ಕೊರೆದಿರುವ ಶ್ಲೋಕವೇ ಶಾಸನದ ಮೊದಲನೇ ಸಾಲು. ಸಾಮಾನ್ಯವಾಗಿ ಶಾಸನಗಳ ಆದಿಭಾಗದಲ್ಲಿ ಮಂಗಳಸೂಚಕ ಪದಗಳು, ವಾಕ್ಯಗಳು ಅಥವ ಪದ್ಯಗಳು ಇರುವುದು ಸಂಪ್ರದಾಯ. ಅದರಂತೆ ಇಲ್ಲಿ ವಿಷ್ಣುಪರ ಶ್ಲೋಕವಿದೆ.

ಈ ಶ್ಲೋಕದ ಅರ್ಥ ಹೀಗಿದೆ- ''ಲಕ್ಷ್ಮಿಯಿಂದ ಆವರಿಸಲ್ಪಟ್ಟ (ಆಲಂಗರಿಸಲ್ಪಟ್ಟ) ದೇಹ ಉಳ್ಳವನೂ ಚೆನ್ನಾಗಿ ಬಾಗಿ ಪ್ರಯೋಗಿಸಲು ಸಿದ್ಧವಾಗಿರುವ 'ಶಾರ್ಙ್ಗ'ವೆಂಬ ಬಿಲ್ಲನ್ನು ಹೊಂದಿರುವವನೂ, ಎಂದಿಗೂ ನಾಶವಾಗದ ಅಚ್ಯುತನೂ, ರಾಕ್ಷಸರ-ನೀಚರ ಕಣ್ಣುಗಳಿಗೆ ಪ್ರಳಯಾನಲ ಸ್ವರೂಪನೂ, ಒಳ್ಳೆಯ ಜನರಿಗೆ ಹಿತಕರವಾದ ನೋಟವುಳ್ಳವನೂ, ಒಳ್ಳೆಯ ದರ್ಶನವನ್ನು ಬೀರುವವನೂ, ಸುದರ್ಶನ ಚಕ್ರದಂತೆ ಸುಜನರನ್ನು ರಕ್ಷಿಸುವವನೂ ಆದ ದೇವನಿಗೆ ಜಯವಾಗಲಿ.''

ಈ ಶ್ಲೋಕದಲ್ಲಿ ಅಚ್ಯುತ, ಸುದರ್ಶನ ಒಂದೊಂದೇ ಪದಪ್ರಯೋಗದಿಂದ ಅನೇಕ ಅರ್ಥಗಳು ಬರುವ ಹಾಗೆ ವಿಷ್ಣುವನ್ನು ಸ್ತುತಿಸಲಾಗಿದೆ. ಈ ಕಾವ್ಯಚಮತ್ಕಾರಕ್ಕೆ 'ಶ್ಲೇಷೆ' ಅಥವ ಶ್ಲೇಷಾರ್ಥಪ್ರಯೋಗ ಎಂದು ಹೆಸರು. ಕಮಾನಿನಾಕಾರದಲ್ಲಿ ಕೊರೆದಿರುವ ಈ ಶ್ಲೋಕದ ಕೇಂದ್ರಬಿಂದುವಿನಲ್ಲಿ 'ಸುದರ್ಶನ ಚಕ್ರ'ದ ಚಿತ್ರವಿರುವುದೂ ಗಮನಾರ್ಹ (ಚಿತ್ರಗಳಲ್ಲಿ ಗಮನಿಸಿ).

ಸುದರ್ಶನ ಚಕ್ರದ ಕೆಳಭಾಗದ ಫಲಕದಲ್ಲಿ ಶಾಸನದ ಪ್ರಧಾನ ಪಾಠ ಆರಂಭವಾಗುತ್ತದೆ. ಫಲಕದ ಮುಂಭಾಗದಲ್ಲಿ 2 ರಿಂದ 15 ರವರೆಗಿನ ಸಾಲುಗಳೂ ಮತ್ತು ಶಾಸನದ ಬಲಬದಿಯಲ್ಲಿ ಅಡ್ಡಕ್ಕೆ 16ನೇ ಸಾಲೂ ಇವೆ. ಇದರ ವಿವರಗಳನ್ನು ಚಿತ್ರಗಳಲ್ಲಿ ಕಾಣಬಹುದು. ಈ ಭಾಗವನ್ನು 'ಶಾಸನೋದ್ದಿಷ್ಟ ಸಾಹಿತ್ಯ' -ಅಂದರೆ ಶಾಸನವು ಏನನ್ನು ಹೇಳಬೇಕಾಗಿದೆಯೋ ಆ ಪ್ರಮುಖ ಭಾಗ ಎಂದು ಹೇಳಬಹುದು. ಇದರ ಸರಳವಾದ ಅರ್ಥ ಹೀಗಿದೆ.

''ನಮಸ್ಕಾರ. ಕದಂಬರ ಒಡೆಯನೂ, ತ್ಯಾಗಗುಣ ಸಂಪನ್ನನೂ, ಕಲಭೋರನ ಶತ್ರುವೂ ಆದ ಶ್ರೀಮತ್ ಕಕುಸ್ಥ ಭಟ್ಟೋರನು ರಾಜ್ಯಭಾರ ಮಾಡುತ್ತಿರಲು, ನರಿದಾವಿಳೆ ನಾಡಿನಲ್ಲಿ ಮೃಗೇಶ ಮತ್ತು ನಾಗ ಎಂಬ ಹೆಸರಿನ ಇಬ್ಬರು ಸಿಂಹ ಮತ್ತು ಶೇಷನಾಗರನ್ನು ಹೋಲುವ ವೀರರಾಗಿರುವರು. ಬಟರಿಕುಲವೆಂಬ ಪರಿಶುದ್ಧ ಗಗನದಲ್ಲಿ ತಾರೆಗಳೊಡೆಯನಾದ ಚಂದ್ರಮನಂತೆ, ಅಳುಪರೆಂಬ ಗಣಸಮೂಹಕ್ಕೆ ಈಶ್ವರನ ಹಾಗಿರುವವನೂ, ದಕ್ಷಿಣಾಪಥದ ನೂರಾರು ಮಹಾಯುದ್ಧಗಳಿಗೆ ಶತ್ರುಗಳೆಂಬ ಪಶುಗಳನ್ನು ಬಲಿನೀಡುವ ಪರಾಕ್ರಮದ ಕಾರ್ಯನಿರತನೂ ಆಗಿದ್ದು, 'ದಾನಪಶುಪತಿ' ಎಂದು ಹೊಗಳಲ್ಪಟ್ಟವನಾದ 'ಪಶುಪತಿ' ಎಂಬಾತನ ರಣಾಂಗ ಸಹಾಯಕ್ಕೆ ಒದಗಿ ಯುದ್ಧದಲ್ಲಿ ಜಯವನ್ನು ಪಡೆಯಲು ಕಾರಣನಾದವನು 'ವಿಜಯಅರಸ' ಎಂಬಾತ. ಇವನು ಸರಕ್ಕೆಲ್ಲ (ಎಲ್ಲ ಭಟರಿಯ) ಮುದ್ದಿನ ಮನೆಮಗ - ಇವನಿಗೆ ಸೇನ್ದ್ರಕ - ಬಾಣ ಈ ಎರಡೂ ದೇಶಗಳ ವೀರಪುರುಷರ ಸಮ್ಮುಖದಲ್ಲಿ ಕೇಕಯ - ಪಲ್ಲವರೊಂದಿಗೆ ಯುದ್ಧಮಾಡಿ ಜಯ ಪಡೆದುದಕ್ಕಾಗಿ 'ಬಾಳ್ಗಚ್ಚು'ವಾಗಿ ಪಲ್ಮಡಿ ಮತ್ತು ಮೂಳಿವಳ್ಳಿ ಗ್ರಾಮಗಳನ್ನು ನೀಡಿದರು- ಬಟಾರಿಕುಲದವನು ಮತ್ತು ಅಳಕದಂಬನು - ಈ ದಾನೋದ್ದೇಶವನ್ನು ಭಂಗಗೊಳಿಸಿದವನು ಮಹಾಪಾತಕನು. ಇಬ್ಬರು ಸಟ್ಟಿಂಗದವರೂ, ವಿಜಾರಸನೂ ಪಲ್ಮಡಿಗೆ ಕುಱುಂಬಿಡಿಯನ್ನು ಬಿಟ್ಟರು. ಇದನ್ನು ನಾಶಮಾಡಿದವನಿಗೂ ಮಹಾಪಾತಕ ಉಂಟಾಗುತ್ತದೆ. ಶುಭವಾಗಲಿ.''

(ಬಲಪಕ್ಕದಲ್ಲಿರುವ ಅಡ್ಡಸಾಲು→) ಭಟ್ಟರುಗಳಿಗೆ ಈ ಗದ್ದೆಗಳ ಸಮೂಹದಲ್ಲಿ ಹತ್ತನೆಯ ಒಂದು ಭಾಗದ ತೆರಿಗೆಯನ್ನು ವಿನಾಯಿತಿ ನೀಡಿದರು.

ಇದು ಹಲ್ಮಿಡಿ ಶಾಸನದ ಪದಶಃ ಅರ್ಥ. ಅಂದರೆ ಪೂರ್ವದ ಹಳಗನ್ನಡ ಗದ್ಯರೂಪವನ್ನು ಇಂದು ನಾವು ಬಳಸುತ್ತಿರುವ ಆಧುನಿಕ ಕನ್ನಡದ ಗದ್ಯರೂಪದಲ್ಲಿ ನೀಡಲಾಗಿದೆ. ಇದು ಹಲ್ಮಿಡಿ ಶಾಸನದ ಬಾಹ್ಯಾರ್ಥವನ್ನು ಮೇಲುನೋಟಕ್ಕೆ ಸಾಲುವಷ್ಟು ನೀಡಬಹುದು. ಆದರೆ ಇಷ್ಟು ಮಾತ್ರದಿಂದ ಶಾಸನೋಕ್ತ ಅಂಶಗಳ

ಪೂರ್ಣ ಪರಿಚಯವಾಗುವುದಿಲ್ಲ. ಇದರಲ್ಲಿರುವ ಕ್ಲಿಷ್ಟ ಪದಗಳ ಅರ್ಥಗಳನ್ನು ಪರಿಶೀಲಿಸುವ ಮೂಲಕ ಶಾಸನವನ್ನು ಹೆಚ್ಚು ಆಳವಾಗಿ ಅರ್ಥಮಾಡಿಕೊಳ್ಳಬಹುದು. ಅಷ್ಟಕ್ಕೆ ನಿಲ್ಲದೆ ಶಾಸನೋಕ್ತ ವ್ಯಕ್ತಿ, ದೇಶ, ಕಾಲ, ಸಂದರ್ಭ ಮುಂತಾದುವನ್ನು ವಿವಿಧ ರೀತಿಯಲ್ಲಿ ಮಥಿಸಿ ಸಮೀಕ್ಷಿಸಿದರೆ ಹಲ್ಮಿಡಿ ಶಾಸನವು ಹದಿನೈದು ಶತಮಾನಗಳ ಹಿಂದಿನ ಭಾಷೆ-ಲಿಪಿಗಳೊಂದಿಗೆ ಇತಿಹಾಸ, ರಾಜಕೀಯ, ಭೌಗೋಳಿಕ ವಿಭಾಗಗಳು, ಜನಜೀವನದ ಸಂಸ್ಕೃತಿ, ಜನಪದ ಸಂಸ್ಕೃತಿ, ವ್ಯವಸಾಯ, ರಾಜ್ಯಾಡಳಿತದ ಕಂದಾಯ ಪದ್ಧತಿ ಹೀಗೆ ಅನೇಕ ಅಂಶಗಳ ಬಗ್ಗೆ ಚಿಂತಿಸಲು ವಿಷಯಗಳನ್ನೊದಗಿಸುತ್ತದೆ.

ಅಧ್ಯಾಯ-೧೧

ಅಧ್ಯಯನಯೋಗ್ಯ ವಿಶೇಷ ಅಂಶಗಳು

ಹಲ್ಮಿಡಿ ಶಾಸನದ ಉಲ್ಲೇಖಗಳನ್ನು ಗಮನಿಸಿದರೆ ಕದಂಬ-ಪಲ್ಲವರ ನಡುವೆ ಒಂದು ಭಯಂಕರ ಯುದ್ಧ ನಡೆದಿರುವ ಸೂಚನೆ ಸಿಗುತ್ತದೆ. ಯುದ್ಧವೆಂದ ಮೇಲೆ ಎರಡೂ ಬಣಗಳಿಗೆ ಅವರವರ ಮಿತ್ರರಾಜರು ಸಹಾಯ ಮಾಡುತ್ತಾರಷ್ಟೆ. ಪಲ್ಲವರಿಗೆ ಕದಂಬರು ಪರಂಪರಾಗತ ಶತ್ರುಗಳು. ಕದಂಬ ರಾಜಕುಲದ ಉಗಮಕ್ಕೆ ಕಾರಣವೇ ಪಲ್ಲವರ ಮೇಲಿನ ಸೇಡಿನ ಛಲ ಎಂದು ತಾಳಗುಂದ ಶಾಸನ ಉಲ್ಲೇಖಿಸಿದೆ. ಇವರ ನಡುವಿನ ಯುದ್ಧದಲ್ಲಿ ಪಲ್ಲವರಿಗೆ ಕೇಯಕರು ಮಿತ್ರರಾದರೆ ಕದಂಬರಿಗೆ ಅಳುಪರು, ಸೇಂದ್ರಕರು, ಬಾಣರು ಮಿತ್ರರುಗಳು. ಹಾಗಾಗಿ ಈ ಎರಡು ಗುಂಪುಗಳು ಪರಸ್ಪರ ವೈರಿಗಳಂತೆ ಕಾದಾಡಿರಬೇಕು. ಶಾಸನವು ವೈಭವೀಕರಿಸಿ ಹೊಗಳಿರುವ 'ಪಶುಪತಿ'ಯು ಅಳುಪಕುಲದ ನಾಯಕನೆಂದೂ ಹೇಳಿದೆ. ಈ ಪಶುಪತಿಯು ಕದಂಬರ ವಿವಾಹಸಂಬಂಧ ಹೊಂದಿದ್ದನೆಂದು ಇತರ ಮೂಲಗಳಿಂದ ತಿಳಿದಿದೆ. ಈತನು ಕಾಕುಸ್ಥವರ್ಮನ ಮಗಳಾದ ಲಕ್ಷ್ಮಿಯನ್ನು ವಿವಾಹವಾಗಿದ್ದನೆಂದು ಊಹೆ ಇದೆ.

ಆದುದರಿಂದ ಸಹಜವಾಗಿಯೇ ಪಶುಪತಿಯು ಕದಂಬರ ಯುದ್ಧಗಳಲ್ಲಿ ಸಕ್ರಿಯ ಸಹಕಾರ ನೀಡಿರುವುದು ಬಹುಶಃ ಅವನ ಕರ್ತವ್ಯವೆಂದೇ ತಿಳಿದಿರಬೇಕು. ಈ ಸಹಾಯವನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಲು ಪಶುಪತಿಯನ್ನು ಪ್ರಶಸ್ತಿಸಹಿತವಾಗಿ ಕಾವ್ಯಾತ್ಮಕವಾಗಿ ಕೊಂಡಾಡಲಾಗಿದೆ. ಆದರೆ ವಾಸ್ತವವಾಗಿ ಈ ಶಾಸನದ ನಾಯಕ ಪಶುಪತಿಯಲ್ಲ. ಪಶುಪತಿಗೆ ಯುದ್ಧದಲ್ಲಿ ಆಸರೆ ಒದಗಿಸಿದವನಾದ 'ವಿಜಅರಸ' ಎಂಬಾತನೇ ಹಲ್ಮಿಡಿ ಶಾಸನದ ನಿಜವಾದ ನಾಯಕ. 'ಅರಸ' ಎಂದಮಾತ್ರಕ್ಕೆ ಅವನು ರಾಜನೇನಲ್ಲ. ಒಬ್ಬ ಶೂರಯೋಧ ಮಾತ್ರ. ನಾವು ಇಂದು ಮಕ್ಕಳಿಗೆ ಮುದ್ದಿಗಾಗಿ 'ರಾಜ' ಎಂದು ಕೊನೆಗೊಳ್ಳುವ ಹೆಸರನ್ನು ಇಡುವ ಹಾಗೆ ಅಂದೂ 'ಅರಸ' ಎಂದು ಮುದ್ದಿಗಾಗಿ ಇಟ್ಟಿರಬಹುದೇನೋ. ಅವನು ರಾಜನೋ ಸಾಮಂತನೋ ಆಗಿದ್ದಲ್ಲಿ ಅವನಿಗೆ ಕೇವಲ ಎರಡು ಹಳ್ಳಿಗಳನ್ನು ದಾನ ಕೊಡುವ ಅಗತ್ಯವೇನೂ ಇಲ್ಲವಷ್ಟೆ.

ದಾನದ ಪ್ರಕರಣಕ್ಕೆ ಬಂದರೆ ಹಲ್ಮಿಡಿ ಶಾಸನವು 'ಬಾಳ್ಗಚ್ಚು' ಎಂಬ ವಿಶಿಷ್ಟ

ಪದವನ್ನು ಬಳಸಿದೆ. ಭಾಷಾಶಾಸ್ತ್ರದ ಪ್ರಕಾರ 'ಬಾಳ್' ಎಂದರೆ 'ಕತ್ತಿ' ಎಂದು ಅರ್ಥ. ಪ್ರಾಚೀನ ಕನ್ನಡದಲ್ಲಿ 'ಕಟ್ಚು' ಎಂದರೆ 'ತೊಳೆ' ಎಂದರ್ಥ. ಹಾಗಾಗಿ 'ಬಾಳ್ಗಟ್ಚು' ಎಂದರೆ ಪ್ರಕ್ಷಾಲನ = ಕತ್ತಿಯನ್ನು ತೊಳೆ ಎಂದು ಅರ್ಥವಾಗುತ್ತದೆ. ಕನ್ನಡ ಜನಪದ ಸಂಸ್ಕೃತಿಯಲ್ಲಿ 'ಬಾಳ್ಗಟ್ಚು' ಎಂಬುದೊಂದು ವೀರಸನ್ಮಾನಸೂಚಕ. ವೀರ ಪಾರಿತೋಷಕ.

ಹಿಂದಿನ ಸಾರ್ವಭೌಮ ರಾಜ್ಯಾಡಳಿತ ಪದ್ಧತಿಯಲ್ಲಿ ಯುದ್ಧಗಳು ಅನಿವಾರ್ಯವಾಗಿದ್ದವು. ರಾಜನು ಹೇಗಾದರೂ ಯುದ್ಧವನ್ನು ಗೆಲ್ಲಬೇಕಿತ್ತು. ಯುದ್ಧವನ್ನು ಗೆಲ್ಲುವ ಸಾಧನವೇ ಸೈನಿಕಬಲ. ಆದುದರಿಂದ ಶತಾಯ-ಗತಾಯ ವಿಜಯ ಸಂಪಾದನೆಗಾಗಿ ಸೈನಿಕರು ಮರಣವನ್ನೂ ಲೆಕ್ಕಿಸದೆ ಹೋರಾಡುವಂತೆ ಅವರನ್ನು ದೈಹಿಕ-ಮಾನಸಿಕವಾಗಿ ದೃಢವಾಗಿಸುವುದೂ ರಾಜತಂತ್ರಗಳಲ್ಲಿ ಒಂದು.

ಜಿತೇನಲಭ್ಯತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾಃ ।
ಕ್ಷಣೇ ವಿಧ್ವಂಸಿನೀಕಾಯಾ ಕಾಚಿಂತಾ ಮರಣೇರಣೇ ॥

ಅಂದರೆ ''ಗೆದ್ದರೆ ವಿಜಯಲಕ್ಷ್ಮಿ ಸಿಗುವಳು - (ವಿಜಯಲಕ್ಷ್ಮಿಯ ಜತೆಗೆ ಧನಲಕ್ಷ್ಮೀ, ಕೀರ್ತಿಲಕ್ಷ್ಮೀ, ಯಶೋಲಕ್ಷ್ಮೀ ಇಂತಹ ಅನೇಕ ಲಕ್ಷ್ಮಿಗಳೂ ಕೂಡ!) - ಒಂದು ವೇಳೆ ಯುದ್ಧದಲ್ಲಿ ಸತ್ತರೆ ಸ್ವರ್ಗಲೋಕದ ಅಪ್ಸರೆಯರು ಸಿಗುವರು. ಹೇಗೂ ಈ ದೇಹವು ಕ್ಷಣಿಕವಾದುದು. ಆದುದರಿಂದ ಯುದ್ಧದಲ್ಲಿ ಸಾಯಲು ಏಕೆ ಚಿಂತೆ?'' -ಇದು ಪುರಾತನ ವೀರಸೈನಿಕರ ಧೀರೋದಾತ್ತ ಧ್ಯೇಯವಾಕ್ಯ. ಇದಕ್ಕನುಗುಣವಾಗಿ ಯುದ್ಧದಲ್ಲಿ ಪ್ರಾಣವನ್ನು ಪಣವಾಗಿಟ್ಟು ಹೋರಾಡಿ ಗೆದ್ದ ವೀರಯೋಧರನ್ನು ವೀರೋಚಿತವಾಗಿ ಗೌರವಿಸುವ ಸಂಸ್ಕೃತಿಯೂ ಅಂದು ಇತ್ತು. ಗೆದ್ದ ವೀರನಿಗೆ ಉಂಬಳಿಗಳನ್ನು ಕೊಡುವುದು ಅಂದಿನ ಸಂಪ್ರದಾಯ. ಅದರಲ್ಲಿ 'ಬಾಳ್ಗಟ್ಚು'ವೂ ಒಂದು ಪ್ರಕಾರ. ಯುದ್ಧದಲ್ಲಿ ಜಯಕ್ಕೆ ಕಾರಣನಾದ ಯೋಧನ ಯುದ್ಧಖಡ್ಗವನ್ನು ಸ್ವತಃ ರಾಜನೋ ಅಥವ ಅವನ ಪರವಾಗಿ ರಾಜಾಧಿಕಾರಿಯೋ ತಾವೇ ತೊಳೆದು, ಆ ಭೂಮಿಯನ್ನು ವೀರನಿಗೆ ಉಂಬಳಿಯಾಗಿ ನೀಡುವುದು ಇದರ ಕ್ರಮ. ಇಂತಹ ವೀರಪಾರಿತೋಷನವು ಇತರ ವೀರರಿಗೆ ತಾವೂ ಶೌರ್ಯವನ್ನು ಮೆರೆದು ಇಂತಹ ಗೌರವಕ್ಕೆ ಭಾಜನರಾಗಬೇಕೆಂಬ ಪ್ರೇರಣೆ ನೀಡುತ್ತಿತ್ತು. ಈ ರೀತಿ ಶಾಸನಗಳಲ್ಲಿ ದಾಖಲಿಸುವ ಮೂಲಕ ವೀರನ ಹೆಸರನ್ನು ಅಜರಾಮರಗೊಳಿಸುವ ಜತೆಗೇ ಮುಂದಿನ ಯೋಧಪರಂಪರೆಗೂ ಆ ಚಂದ್ರಾರ್ಕ ಪ್ರೇರಣೆಯನ್ನು ನೀಡಿ ಶೂರಪರಂಪರೆಯನ್ನು ಊರ್ಜಿತಗೊಳಿಸುವ ಆಶಯವೂ ಈಡೇರುತ್ತದೆ. ಇದಕ್ಕೆ ಹಲ್ಮಿಡಿ ಶಾಸನವೇ ಸಾಕ್ಷಿ.

(ಪ್ರಾಚೀನ ದಕ್ಷಿಣ ಕರ್ನಾಟಕದ ಅನೇಕ ಶಾಸನಗಳಲ್ಲಿ 'ಬಾಳ್ಗಟ್ಚು' ದತ್ತಿಯ ಉಲ್ಲೇಖಗಳು ಬಂದಿವೆ.

ತಾವು ಕೊಟ್ಟ ದಾನವು ಸೂರ್ಯಚಂದ್ರರುಗಳಿರುವವರೆಗೂ - ಅಂದರೆ ಶಾಶ್ವತವಾಗಿ ಊರ್ಜಿತಗೊಳ್ಳಬೇಕು - ಎಂಬುದು ದಾನಿಗಳ ಆಶಯವಾಗಿರುತ್ತದೆ. ರಾಜನೇ ಆದರೂ ಇದಕ್ಕೆ ಹೊರತಲ್ಲ. ದಾನೋದ್ದೇಶವನ್ನು ಪರಿಪಾಲಿಸುವುದು ದಾನ ನೀಡಿದ್ದಕ್ಕಿಂತ ಹೆಚ್ಚು ಎಂಬ ನಂಬಿಕೆ ನಮ್ಮ ಸಮಾಜದಲ್ಲಿ ಬೆಳೆದಿತ್ತು. ಆದರೆ ಸಮಾಜದ್ರೋಹಿಗಳು ಒಮ್ಮೊಮ್ಮೆ ದಾನಾಪಹಾರದಂತಹ ದುಷ್ಕೃತ್ಯಗಳಿಗೆ ಕಾರಣರಾಗುತ್ತಿದ್ದುದರಿಂದ ಅಂತಹವರಲ್ಲಿ ಪಾಪಭೀತಿಯನ್ನುಂಟುಮಾಡಲು ಶಾಸನಗಳಲ್ಲಿ ಭೀತಿಕಾರಕ ವಾಕ್ಯಗಳನ್ನು ಸೇರಿಸುತ್ತಿದ್ದರು. ಇದಕ್ಕೆ 'ಶಾಪಾಶಯ' ಎಂದು ಹೆಸರು.

ಹಲ್ಮಿಡಿ ಶಾಸನದಲ್ಲಿ ಒಂದೊಂದೇ ವಾಕ್ಯದ ಎರಡು ಶಾಪಾಶಯಗಳಿವೆ. 13ನೇ ಸಾಲಿನಲ್ಲಿ 'ಕಳ್ದೋನ್ ಮಹಾಪಾತಕನ್' ಎಂದೂ 15ನೇ ಸಾಲಿನಲ್ಲಿ 'ಅದಾನಳಿವೊನ್ಗೆ ಮಹಾಪಾತಕಮ್' ಎಂದೂ ಇದೆ. 'ದಾನದ ಉದ್ದಿಶ್ಯವನ್ನು ಹಾಳುಮಾಡಿದವನು ಮಹಾಪಾತಕಿಯು' ಎಂಬುದು ಈ ಪದಗಳ ಆಶಯ. 'ಮಹಾಪಾತಕಿ' ಎಂದರೆ ದೊಡ್ಡ ನೀಚ, ಕೇಡಿಗ ಎಂದು ಇಂದು ಸಾಧಾರಣವಾಗಿ ತಿಳಿಯಲಾಗುತ್ತದೆ. ಆದರೆ ಭಾರತೀಯ ಸಂಪ್ರದಾಯದಲ್ಲಿ ಪಾಪ, ಪಾತಕ, ಮಹಾಪಾತಕಗಳಿಗೆ ನಿರ್ದಿಷ್ಟ ವ್ಯಾಖ್ಯೆ ಇದೆ. ಮಹಾಪಾತಕವೆಂದರೆ ಅತಿ ದೊಡ್ಡ ಪಾಪಕಾರ್ಯ. ಇವುಗಳಲ್ಲಿ ತುಂಬಾ ಕೆಟ್ಟದಾದ 5 ಪಾತಕಗಳು 'ಪಂಚಮಹಾಪಾತಕಗಳು' ಎಂದು ಪ್ರಸಿದ್ಧವಾಗಿವೆ. 1) ಬ್ರಹ್ಮಹತ್ಯೆ 2) ಸುರಾಪಾನ 3) ಪರದ್ರವ್ಯಾಪಹರಣ 4) ಗುರುಪತ್ನೀಗಮನ ಇವು ಚತುರ್ವಿಧ ಮಹಾಪಾತಕಗಳಾದರೆ, ಇವುಗಳಲ್ಲಿ ಒಂದನ್ನು ಮಾಡಿದವನೊಂದಿಗೆ ಮಿತ್ರತ್ವ ಬೆಳೆಸುವುದು 5ನೇ ಮಹಾಪಾತಕ. ಹೀಗಲ್ಲದೆ ಮತ್ತೊಂದು ವಿಧದ ಪಂಚಮಹಾಪಾತಕ ಶ್ರೇಣಿಯುಂಟು. 1) ಗೋಹತ್ಯೆ 2) ಶಿಶುಹತ್ಯೆ 3) ಸ್ತ್ರೀಹತ್ಯೆ 4) ಬ್ರಹ್ಮಹತ್ಯೆ 5) ಗುರುಹತ್ಯೆ ಇವೂ ಪಂಚಮಹಾಪಾತಕಗಳೇ. ''ಶಾಸನೋಕ್ತ ದಾನವನ್ನು ಹಾಳುಮಾಡುವುದು ಅಥವಾ ಅಡ್ಡಿ ಮಾಡುವುದು, ಇಂಥ ಮಹಾಪಾತಕ ಮಾಡಿದುದಕ್ಕೆ ಸಮ. ಅವನಿಗೆ ಅದಕ್ಕೆ ತಕ್ಕ ಶಿಕ್ಷೆಯಾಗುತ್ತದೆ....'' ಎಂಬುದೇ ಶಾಪಾಶಯ. ಇದನ್ನು ಕಂಡಾದರೂ ಪಾಪಕ್ಕೆ ಹೆದರಿ ದಾನಕ್ಕೆ ಅಡ್ಡಿಮಾಡದಂತಿರಲಿ ಎಂದು ಶಾಸನಗಳು ಈ ತಂತ್ರವನ್ನು ಬಳಸುತ್ತವೆ. 'ದಾನಚ್ಛೇದೋಪವರ್ಣನ' ಎಂದೂ ಈ ತಂತ್ರಕ್ಕೆ ಹೆಸರಿದೆ.

ಹಲ್ಮಿಡಿ ಶಾಸನದ ಕೇವಲ ಎರಡೆರಡು ಪದಗಳ ಶಾಪಾಶಯವು 5ನೇ ಶತಮಾನದಲ್ಲಿಯೇ ಇಂತಹ ಧಾರ್ಮಿಕ ಪ್ರಜ್ಞೆ ನಮ ಸಮಾಜದಲ್ಲಿ ಮೂಡಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. 79161

ದಾನಕಾರ್ಯಕ್ಕೆ ಅಡ್ಡಿಮಾಡುವುದು ಮಹಾಪಾಪವಾದರೆ, ದಾನಕಾರ್ಯವನ್ನು ಮುಂದುವರಿಸುವುದು ಪರಮಪುಣ್ಯದ ಕಾರ್ಯವೆಂದೂ ಭಾವಿಸಲ್ಪಡುತ್ತಿತ್ತು. ದಾನಾದಿಗಳನ್ನು ಪಡೆದಾಗ ಅದನ್ನು ತಾನೊಬ್ಬನೇ ಉಪಭೋಗಿಸದೆ ಅದರಲ್ಲಿ ಒಂದು ಫಾಲನ್ನು ಸಮಾಜಕ್ಕೆ ಹಿಂದಿರುಗಿಸುವುದು ದಾನ ಪ್ರತಿಗ್ರಹಿಯ ಸಹೃದಯತೆ. ಇದಕ್ಕೆ ಅನುಗುಣವಾಗಿ ದಾನವಾಗಿ ಸಿಕ್ಕಿದ ಪಲ್ಮಡಿ ಗ್ರಾಮದ ಗದ್ದೆಬಯಲಿನಿಂದ ಬ್ರಾಹ್ಮಣರುಗಳಿಗಾಗಿ ಹತ್ತನೇ ಒಂದು ಭಾಗ ತೆರಿಗೆಯನ್ನು ಈ ಸಮಯದಲ್ಲಿ ಮನ್ನಾ ಮಾಡಲಾಗಿದೆ. ಈ ವಿನಾಯಿತಿಗೆ ರಾಜಾಧಿಕಾರಿಗಳಾದ ಇರ್ವರು ಸಟ್ಬಿಂಗದವರೂ ಒಪ್ಪಿಗೆ ನೀಡಿದ್ದಾರೆ. ಅಂದಮೇಲೆ ಈ ವಿನಾಯಿತಿಯು ಅಧಿಕೃತವಾಯಿತು.

ಇಲ್ಲಿ ಉಕ್ತವಾಗಿರುವ 'ಸಟ್ಬಿಂಗದರ್' ಎಂಬುದೂ ಮತ್ತು ಅವರು ವಿನಾಯಿತಿ ನೀಡಿದ 'ಪತ್ತೊನ್ದಿ'ಕರವೂ ಪುರಾತನ ಕಂದಾಯ ಪದ್ಧತಿಯ ಮೇಲೆ ಬೆಳಕು ಬೀರುತ್ತವೆ. ಎಪಿಗ್ರಾಫಿಯ ಕರ್ನಾಟಕದ 9ನೇ ಸಂಪುಟ ಪೀಠಿಕೆಯಲ್ಲಿ ಈ ಅಂಶವನ್ನು ವಿವರವಾಗಿ ಪ್ರಸ್ತಾಪಿಸಲಾಗಿದೆ. ಅದರ ಪ್ರಕಾರ 'ಸಟ್ಬಿಙ್ಗ' ಎಂದರೆ ಸಂಸ್ಕೃತದ ಷಟ್ಬಂಗ. ಆರನೇ ಒಂದು ಭಾಗ ಎಂದು ಅರ್ಥ. ತನ್ನ ರಾಜ್ಯದಲ್ಲಿನ ರೈತರು ಬೆಳೆದ ಬೆಳೆಯಲ್ಲಿ ಆರನೇ ಒಂದು ಭಾಗದಷ್ಟನ್ನು ಕಂದಾಯವಾಗಿ ರಾಜನು ಪಡೆಯುವುದೇ ಷಟ್ಬಿಂಗ. ರಾಜನಿಗಾಗಿ ಪ್ರಜೆಗಳಿಂದ ಈ ಕಂದಾಯವನ್ನು ವಸೂಲು ಮಾಡಲು ನಿಯಮಿತರಾದ ಅಧಿಕಾರಿಗಳನ್ನು 'ಸಟ್ಬಿಙ್ಗದವರು' ಎಂದು ಹಲ್ಮಿಡಿ ಶಾಸನವು ಕರೆಯುವ ಮೂಲಕ ಅಂದಿನ ಕಂದಾಯ ಪದ್ಧತಿಯ ಸ್ವರೂಪವನ್ನು ಪರಿಚಯಿಸಿದೆ. ಇದಲ್ಲದೆ ಶಾಸನಾಂತ್ಯದಲ್ಲಿ ಮತ್ತೊಂದು ಕಂದಾಯದ ಉಲ್ಲೇಖವಿದೆ. ಇಬ್ಬರು ಸಟ್ಬಿಂಗದವರೂ, ವಿಚಾರಸರೂ ಸೇರಿ ಆ ಗ್ರಾಮದ ಭಟ್ಟರುಗಳಿಗೆ ಗದ್ದೆಗಳಿಂದ ಹತ್ತನೇ ಒಂದು ಭಾಗದ ಕಂದಾಯವನ್ನು ಬಿಟ್ಟಿದ್ದಾರೆ. 'ಹತ್ತನೇ ಒಂದು ಭಾಗ' ಕಂದಾಯವನ್ನು 'ಪತ್ತೊನ್ದಿ' ಎಂದು ಶಾಸನ ಗುರ್ತಿಸಿದೆ. ಸಂಸ್ಕೃತದಲ್ಲಿ ಇದೇ ಪದಕ್ಕೆ 'ದಶಬನ್ಧ' ಎಂದು ಪರ್ಯಾಯವಿದೆ. ಇದೇ ಹಲ್ಮಿಡಿ ಗ್ರಾಮದಲ್ಲಿ ಮುಂದೆ ಕದಂಬರ ಕೃಷ್ಣವರ್ಮನ ಆಡಳಿತದಲ್ಲಿ ಭವಸ್ವಾಮಿ ಎಂಬಾತನಿಗೆ 'ದಶಬಂಧ'ವನ್ನು ಬಿಟ್ಟಿರುವ ಬಗ್ಗೆ ಬೇಲೂರು ತಾಲೂಕಿನ ಬೆಣ್ಣೂರಿನ ಶಾಸನದಲ್ಲಿ ಉಲ್ಲೇಖಿತವಾಗಿದೆ. ಹಾಗೆಯೇ ಇತರ ಕೆಲವು ಶಾಸನಗಳಲ್ಲಿ 'ನಕರಸ್ಯದಶಮೋಭಾಗ', 'ಪತ್ತೊರುವಿ' ಮುಂತಾದ ರೂಪಗಳಲ್ಲಿ

ಕಾಣಿಸಿಕೊಂಡಿದೆ. ಇದಲ್ಲದೆ 'ಐದನೇ ಒಂದು ಭಾಗದ ತೆರಿಗೆ'ಯನ್ನು 'ಅಯ್ದೊಂದಿ' ಎಂದು 9ನೇ ಶತಮಾನದ ಗಂಗ ಶಾಸನವೊಂದು ದಾಖಲಿಸಿದೆ. ಪಜ್ಞ, ಉತ್ಕೋಟಕ ಎಂಬ ತೆರಿಗೆಗಳೂ ಶಾಸನಗಳಲ್ಲಿ ಉಂಟು. ತೆರಿಗೆಯನ್ನು ವಸೂಲು ಮಾಡುವ ಅಧಿಕಾರಿಗೆ 'ಸುಂಕವೆಗ್ಗಡೆ' ಎಂದು ಹೆಸರಿದೆ. ಇಂತಹ ತೆರಿಗೆಯ ಅಧಿಕಾರಿಗಳಾಗಿ ಹಲ್ಮಿಡಿ ಶಾಸನದಲ್ಲಿ 'ಸಟ್ಬಂಗದವರೆಂದು' ಮೃಗೇಶ ಮತ್ತು ನಾಗರನ್ನು ಕರೆಯಲಾಗಿದೆ. ಈ ರೀತಿ ಹಲ್ಮಿಡಿ ಶಾಸನವು ಕೆಲವೇ ಪದಗಳಲ್ಲಿ ತನ್ನ ಸಮಕಾಲೀನ ರಾಜ್ಯಾಡಳಿತ ಪದ್ಧತಿಯ ತೆರಿಗೆಯ ವಿವರವನ್ನು ನೀಡಿದೆ. ತೆರಿಗೆಯನ್ನು ಮನ್ನಾ ಮಾಡುವುದಕ್ಕೆ ತಮಿಳಿನ 'ಇಱೈಯಿಲಿ' ಎಂಬ ಪದವೂ ಬೇರೆ ಶಾಸನಗಳಲ್ಲಿ ಬಳಕೆಯಾಗಿದೆ. ಈ ಪದವು ಹಲ್ಮಿಡಿ ಶಾಸನದ 'ಅಕರ' ಎಂಬ ಪದಕ್ಕೆ ಸಮಾನಾರ್ಥಕ. ತೆರಿಗೆಗಳು ಆದಾಯದ ನಿರ್ದಿಷ್ಟ ಭಾಗಾಂಶಗಳಾಗಿದ್ದು, ಈ ಭಾಗಗಳನ್ನು ಆರನೇ ಒಂದು, ಹತ್ತನೇ ಒಂದು ಎಂದು ಹೇಳಿರುವುದು ಗಣಿತದ ಭಿನ್ನರಾಶಿಕ್ರಮವಾಗಿದೆ. ಇದು 15 ಶತಕಗಳ ಹಿಂದೆ ಬಳಕೆಯಲ್ಲಿದ್ದ ಗಣಿತ ಶಾಸ್ತ್ರದ ಸ್ವರೂಪಕ್ಕೂ ಸಾಕ್ಷಿಯಾಗಿದೆ.

ಹಲ್ಮಿಡಿ ಶಾಸನದಲ್ಲಿ ಉಲ್ಲೇಖಗೊಂಡಿರುವ ಭೌಗೋಳಿಕ ವಿಭಾಗಗಳೂ ವಿಚಾರಾರ್ಹವಾಗಿವೆ. ಇದರಲ್ಲಿ ದಕ್ಷಿಣ ಭಾರತದ ಪ್ರಧಾನ ಭೂವಿಭಾಗವಾದ 'ದಕ್ಷಿಣಾಪಥ', ಕದಂಬರಾಜ್ಯ, ಅದರಲ್ಲಿ ನರಿದಾವಿಳೆ ನಾಡು, ಆ ನಾಡಿನಲ್ಲಿ ಗ್ರಾಮಗಳು -ಹೀಗೆ 5ನೇ ಶತಮಾನದ ಹೊತ್ತಿಗೆ ಆಗಿದ್ದ ಭೂವಿಭಾಗಗಳನ್ನು ಗಮನಿಸಬಹುದು. ಈ ಬಗ್ಗೆ 'ಹಲ್ಮಿಡಿ ಗ್ರಾಮದ ಪರಿಚಯ' ಅಧ್ಯಾಯದಲ್ಲಿ ಒಂದಷ್ಟು ವಿವರಗಳನ್ನು ನೀಡಲಾಗಿದೆ.

ಹಾಗೆಯೇ ಅಂದಿನ ರಾಜವಂಶಗಳು, ಅವುಗಳ ಪರಸ್ಪರ ಮಿತ್ರ-ಶತ್ರು ಸಂಬಂಧಗಳೂ ಈ ಶಾಸನದ ಸಾಹಿತ್ಯದಿಂದ ಗುರ್ತಿಸಲ್ಪಟ್ಟು ಐತಿಹಾಸಿಕ ದಾಖಲೆಗಳಾಗಿವೆ. ಶಾಸನದ ಕೇಂದ್ರಬಿಂದುವಾದ ಕದಂಬ ರಾಜವಂಶೀಯರಿಗೆ ಪಲ್ಲವರೊಂದಿಗೆ ಪರಂಪರಾಗತ ಶತ್ರುತ್ವ- ಪಲ್ಲವರಿಗೆ ಕೇಕಯರು ಮಿತ್ರರಾದುದರಿಂದ ಅವರೂ ಕದಂಬರಿಗೆ ಪರ್ಯಾಯ ಶತ್ರುಗಳೇ. ಇತ್ತ ಕದಂಬರಿಗೆ ಸೇಂದ್ರಕ - ಬಾಣ ವಂಶೀಯರು ಮಿತ್ರರಾಗಿರುವುದರಿಂದ ಅವರೆಲ್ಲ ಪಲ್ಲವರಿಗೂ ಪರ್ಯಾಯ ಶತ್ರುಗಳು. ಅಳುಪರಂತೂ ಕದಂಬರ ವಿವಾಹ ಸಂಬಂಧ ಹೊಂದಿದ್ದು, ಕದಂಬ ಪಕ್ಷಪಾತಿಗಳಾಗಿರುವುದು ಅನಿವಾರ್ಯ. ಆದ್ದರಿಂದ ಅಳುಪರ ಮಿತ್ರರೂ ಕದಂಬರ ಮಿತ್ರರೇ - ಈ ರೀತಿ ಶತ್ರು-ಮಿತ್ರ ಪರಂಪರೆ ಬೆಳೆಯುತ್ತಾ ಹೋಗಿ ಇತಿಹಾಸವನ್ನು ಸೃಷ್ಟಿಸುವ ಪ್ರಕ್ರಿಯೆಯ ಅಂಕುರ ಈ ಶಾಸನದಲ್ಲಿದೆ. ಶಾಸನದ ಆರಂಭದಲ್ಲೇ

ಕಾಕುಸ್ಥವರ್ಮನನ್ನು 'ಕಲಭೋರನಾಅರಿ' ಎಂದು ಹೇಳಿದೆ. ಹಲ್ಮಿಡಿ ಶಾಸನದ ವ್ಯಾಪ್ತಿಯಲ್ಲಿ ಈ ಅಂಶವೂ ಅಧ್ಯಯನಯೋಗ್ಯವಾಗಿದೆ.

ಸಾಹಿತ್ಯ ಗಮನಿಸಿದರೆ - ಹಲ್ಮಿಡಿ ಶಾಸನವು ಒಂದು ಗದ್ಯಶಾಸನ. ಇದರಲ್ಲಿ ತನ್ನ ಸಮಕಾಲೀನ ಇತರ ಶಾಸನಗಳಂತೆ ಕಾವ್ಯಲಕ್ಷಣಗಳಾಗಲೀ, ಛಂದೊಬದ್ಧ ಸಾಹಿತ್ಯವಾಗಲೀ ಕಾಣುವುದಿಲ್ಲ. ಆರಂಭದಲ್ಲಿ ಸಾಂಪ್ರದಾಯಿಕವಾದ ಸಂಸ್ಕೃತ, ಛಂದಸ್ಸಿನ ಶ್ಲೋಕವೊಂದು ಮಾತ್ರ ಛಂದೋಬದ್ಧವಾಗಿದ್ದು, ಇತರ 15 ಸಾಲುಗಳು ಸರಳಗದ್ಯವಾಗಿವೆ. ಜನಸಾಮಾನ್ಯರಿಗಾಗಿ - ಜನಸಾಮಾನ್ಯರ ಭಾಷೆಯಲ್ಲಿ ಹಾಕಿಸಿರುವ ಶಾಸನವಾದುದರಿಂದ ಪ್ರೌಢಭಾಷೆ, ಕಾವ್ಯಾತ್ಮಕ ಬಂಧಗಳು ಇಲ್ಲಿಲ್ಲ. ಹಾಗೆಂದಮಾತ್ರಕ್ಕೆ ಇದು ಶುಷ್ಕ ಸಾಹಿತ್ಯವಾಗಿ, ನೀರಸವಾಗಿಲ್ಲ. ಕಕುಸ್ಥನ ಪ್ರಶಸ್ತಿಯಲ್ಲಿ ಸಂಸ್ಕೃತದ ಸೊಗಡಿದೆ. ಮೃಗೇಶ - ನಾಗ ಇವರ ವರ್ಣನೆಯಲ್ಲಿ ಸಿಂಹ - ಶೇಷನಾಗರ ಉಪಮಾನಾಲಂಕಾರವಿದೆ. ಪಶುಪತಿಯ ವರ್ಣನೆಯಲ್ಲಂತೂ ಸುಂದರವಾದ ರೂಪಕಾಲಂಕಾರವಿದೆ. ದಾನಪ್ರತಿಗ್ರಹಿಯಾದ ವಿಜಅರಸನ ವರ್ಣನೆಯಲ್ಲಿ ವೀರಕಾವ್ಯದ ಸಾಲುಗಳನ್ನು ಹೋಲುವ ಸೌಂದರ್ಯವಿದೆ. ಸಂಸ್ಕೃತ ಶ್ಲೋಕದಲ್ಲಿನ ವಿಷ್ಣುಸ್ತುತಿಯಲ್ಲಿ ಶ್ಲೇಷೆಯ ಪ್ರಯೋಗವಿದೆ. ಸಂಸ್ಕೃತ ಶ್ಲೋಕದಲ್ಲಿನ ವಿಷ್ಣುಸ್ತುತಿಯಲ್ಲಿ ಶ್ಲೇಷೆಯ ಪ್ರಯೋಗವಿದೆ. ಆದುದರಿಂದ ಈ ಕೇವಲ 16 ಸಾಲುಗಳ ಪುಟ್ಟ ಶಾಸನದ ಸ್ವರೂಪವು ಗದ್ಯಕಾವ್ಯವೇ ಆಗಿಬಿಟ್ಟಿದೆ. ಸಾಹಿತ್ಯ ರಚನೆಯಲ್ಲಿ ಸಹಜವಾಗಿಯೇ ಕವಿಸಮಯವು ಮೈದಾಳಿದೆ. ಅದಕ್ಕೆ ತಕ್ಕಂತೆ ಸಂಸ್ಕೃತ ಪದಗಳೂ ಸುಂದರವಾಗಿ ಬೆರೆತು ಕಾವ್ಯಸೌಂದರ್ಯವನ್ನು ಹೆಚ್ಚಿಸಿವೆ. ಹಾಗೆ ನೋಡಿದರೆ ಸಂಸ್ಕೃತ ಭೂಯಿಷ್ಠವಾದ ಈ ಭಾಷಾಸಂಗಮದಲ್ಲಿ ಸಂಸ್ಕೃತ ಪದಗಳ ಸಂಖ್ಯೆ ಕನ್ನಡ ಮೂಲಪದಗಳಿಗಿಂತಲೂ ಹೆಚ್ಚೇ ಆಗಿದೆ. ಕನ್ನಡವು ಈ ಶಾಸನಕಾಲಕ್ಕಾಗಲೇ ಸಂಸ್ಕೃತ ಭಾಷೆಯಿಂದ ಸ್ವೀಕರಿಸಿ ತನ್ನದಾಗಿಸಿಕೊಂಡಿದ್ದ ಪದಗಳ ಬಗ್ಗೆಯೂ, ಕನ್ನಡದ ಮೇಲೆ ಸಂಸ್ಕೃತದ ಪ್ರಭಾವವನ್ನೂ ಅಧ್ಯಯನ ಮಾಡಲು ಅತ್ಯಂತ ಪುರಾತನ ದಾಖಲಾತಿಯನ್ನು ಈ ಶಾಸನ ಒದಗಿಸಿದೆ.

ಈ ಶಾಸನದ ಸಾಹಿತ್ಯವನ್ನು ರಚಿಸಿದ ಕವಿ ಸಂಸ್ಕೃತ ಮತ್ತು ಕನ್ನಡಗಳನ್ನು ಬಲ್ಲ ದ್ವಿಭಾಷಾಪಂಡಿತನಾಗಿರಬೇಕು. ಪುರಾತನ ಕವಿಗಳಲ್ಲಿ ಜನರು ನಿರೀಕ್ಷಿಸುತ್ತಿದ್ದ ಲಕ್ಷಣವೂ ಇದೇ ತಾನೇ. ಆದರೆ ಶಾಸನದಲ್ಲಿ ಕವಿಯ ಹೆಸರೇ ಇಲ್ಲ. ಲಿಪಿಕಾರನ ಹೆಸರೂ, ರೂವಾರಿಯ ಹೆಸರೂ ಇಲ್ಲ. ಬಹುಶಃ ಪುಟಾಣಿ ಶಾಸನವಾಗಿರುವುದರಿಂದ ಉಲ್ಲೇಖಿಸಿರಲಾರರು. ಇಲ್ಲದಿದ್ದರೆ ಇದಕ್ಕಿಂತ ಪುರಾತನವಾದ ಕದಂಬರ ತಾಳಗುಂದ ಶಾಸನದಲ್ಲಿ ''ಕುಬ್ಜಃ ಸ್ವಕಾವ್ಯಮಿದಮಶ್ಮತಲೇಲಿಲೇಖ....'' -ಕವಿಕುಬ್ಜನು ತನ್ನದೇ

ಕಾವ್ಯವನ್ನು ಕಲ್ಲಿನ ಮೇಲೆ ಬರೆದನು - ಎಂದು ಹೇಳಿರುವಂತೆ ಇಲ್ಲೂ ಹೇಳುವುದು ಅಸಾಧ್ಯವಾಗೇನೂ ಇರಲಿಲ್ಲ. ಕ್ರಿ.ಪೂ. 3ನೇ ಶತಮಾನದಲ್ಲೇ ಕರ್ನಾಟಕ ನೆಲದಲ್ಲಿನ ಅಶೋಕನ ಶಾಸನದಲ್ಲಿ 'ಚಪಡ'ನೆಂಬ ಲಿಪಿಕಾರನ ಹೆಸರು ಇರುವುದನ್ನು ಮರೆಯುವಂತಿಲ್ಲ. ಹಲ್ಮಿಡಿ ಶಾಸನದಲ್ಲಿ ಕವಿ-ಲಿಪಿಕಾರ-ರೂವಾರಿಗಳ ಹೆಸರು ನಮೂದಿಸಲ್ಪಟ್ಟಿಲ್ಲವಾದರೂ, ಆ ಅಜ್ಞಾತ ಕಲಾವಿದರು ಕನ್ನಡ ಭಾಷೆಯ ಅತಿಪ್ರಾಚೀನ ಭಾಷಾಸ್ವರೂಪ ಮತ್ತು ಲಿಪಿಸ್ವರೂಪಗಳನ್ನು ಖಚಿತವಾಗಿ ದಾಖಲಿಸಿಕೊಟ್ಟಿರುವುದಕ್ಕಾಗಿ ಇಂದಿನ ನಾವುಗಳು ಅವರುಗಳಿಗೆ ಕೃತಜ್ಞರಾಗಿರಬೇಕು. ಅಲ್ಲವೆ?

ಹಲ್ಮಿಡಿ ಶಾಸನದಲ್ಲಿ ಅತ್ಯಂತ ಸಂಕ್ಷಿಪ್ತವಾಗಿ ಹೇಳಲ್ಪಟ್ಟಿರುವ ಅನೇಕ ಅಂಶಗಳನ್ನು ಅದರ ಪೂರ್ವಿಕ, ಸಮಕಾಲೀನ ಹಾಗೂ ನಂತರದ ಶಾಸನಗಳ ಸಾಹಿತ್ಯದೊಂದಿಗೆ ತೌಲನಿಕವಾಗಿ ಅಧ್ಯಯನ ನಡೆಸಿದರೆ, ತನ್ನ ಕಾಲದಲ್ಲಿ ಕನ್ನಡ ನೆಲದಲ್ಲಿದ್ದ ಭಾಷೆ, ಲಿಪಿಗಳ ಅತಿಪ್ರಾಚೀನ ಸ್ವರೂಪಗಳನ್ನು ಅಧಿಕೃತವಾಗಿ ಪರಿಚಯಿಸುವುದಲ್ಲದೆ ಅಂದಿನ ಇತಿಹಾಸ, ಸಂಸ್ಕೃತ, ರಾಜವಂಶಗಳು, ರಾಜಕೀಯ ಸಂಬಂಧಗಳು, ಸಾಮಾಜಿಕ ಪದ್ಧತಿಗಳು, ಜನಜೀವನಕ್ರಮ, ಭೌಗೋಳಿಕ ಪರಿಚಯ, ವ್ಯವಸಾಯ, ಕಂದಾಯ, ಆಡಳಿತಾತ್ಮಕ ವಿಭಾಗಗಳು, ಧಾರ್ಮಿಕ ಪ್ರಜ್ಞೆ ಹೀಗೆ ಹತ್ತಾರು ಅಂಶಗಳ ಅಧ್ಯಯನಕ್ಕೆ ಈ ಶಾಸನವು ಪ್ರೇರಕವೂ ಆಗಿದೆ - ಪೂರಕವೂ ಆಗಿದೆ.

ಹಾಗಾಗಿ ಹಲ್ಮಿಡಿ ಶಾಸನವು ಸರ್ವತೋಮುಖ ಅಧ್ಯಯನಕ್ಕೆ ಯೋಗ್ಯವಾದ ಒಂದು ಅಪೂರ್ವ ಶಾಸನವಾಗಿದೆ. ಅನೇಕಾನೇಕ ವಿಷಯಗಳ ಆಗರವೂ ಆಗಿದೆ. ಬಾಹ್ಯರೂಪದಲ್ಲಿ ಈ ಶಾಸನವು ವಾಮನನಂತಿದ್ದರೂ, ಆಂತರಿಕವಾಗಿ ತ್ರಿವಿಕ್ರಮನೇ ಆಗಿದೆ.

ಅನೇಕ ಸಂಶೋಧನೆಗಳು, ವಾದಗಳು ನಡೆದ ನಂತರವೂ ಸಹ ಹಲ್ಮಿಡಿ ಶಾಸನದ ಸಾಹಿತ್ಯದ ಅರ್ಥನಿರ್ಣಯವು ಪೂರ್ಣಖಚಿತತೆಯನ್ನು ಹೊಂದಲಿಲ್ಲವೆಂದೇ ಹೇಳಬೇಕು. ಅನೇಕ ವಾಕ್ಯಗಳ ಪದವಿಭಾಗ, ಅನ್ವಯ, ಅರ್ಥಸಮೀಕರಣಗಳು ವಿದ್ವಾಂಸವಲಯದಲ್ಲಿ ಇನ್ನೂ ಜಿಜ್ಞಾಸಾತ್ಮಕವಾಗಿಯೇ ಉಳಿದಿವೆ. ಉದಾ: ಕಲಭೋರನಾಅರಿ, ಬಹುಶತಹವನಾಹವ, ಪೊಗಱಿಪೊಟ್ಟಣ, ಆಸರಕ್ಕೆಲ್ಲ ಭಟರಿಯ, ಪ್ರೇಮಾಲಯ ಸುತನ್, ಅಳಕದಂಬ, ಕುಱುಮ್ಬಿಡಿ ಮುಂತಾದ ಪದಗಳು ಇನ್ನೂ ಸರ್ವಮಾನ್ಯವೆನಿಸಬಲ್ಲ ಅರ್ಥದ ನಿರೀಕ್ಷೆಯಲ್ಲಿವೆ. ಕೇಕಯ, ಸೇಂದ್ರಕ, ಬಣ ಇವು ಯಾವ ಪ್ರಾಂತಗಳು? ಶಾಸನೋಕ್ತ ಮೃಗೇಶ, ಅಳಕದಂಬ ಇವರು ಯಾರು? ಎಂಬೆಲ್ಲ

ಪ್ರಶ್ನೆಗಳಿಗೆ ಸಮರ್ಥ ಉತ್ತರಗಳು ದೊರೆಯಬೇಕಾಗಿವೆ.

ಈ ಪುಸ್ತಕವು ಹಲ್ಮಿಡಿ ಶಾಸನದ ಸ್ಥೂಲಪರಿಚಯಕ್ಕೆ ಮಾತ್ರ ಸೀಮಿತವಾಗಿರುವುದರಿಂದ ಜಿಜ್ಞಾಸಾತ್ಮಕವಾದ ಅಂಶಗಳನ್ನು ಇಲ್ಲಿ ಆಳವಾಗಿ ಪ್ರಸ್ತಾಪಿಸಿಲ್ಲ. ಹಲ್ಮಿಡಿ ಶಾಸನದ ಹಿನ್ನೆಲೆ, ಅದು ಸಿಕ್ಕಿದ ಪರಿಸರದ ವಿವರ, ಶಾಸನ ಸಾಹಿತ್ಯದ ಸರಳ ಅರ್ಥ - ಇವುಗಳನ್ನು ಸಾಮಾನ್ಯ ಜನರಿಗೆ ಸ್ಥೂಲವಾಗಿ ಪರಿಚಯಿಸುವಷ್ಟಕ್ಕೆ ಈ ಪುಸ್ತಕವು ಸೀಮಿತವಾಗಿದೆ. ಹಲ್ಮಿಡಿ ಶಾಸನದ ಪರಿಚಯವಿಲ್ಲದವರಿಗೆ ಅದನ್ನು ಪರಿಚಯಿಸಲು ಇದು ಶಕ್ತವಾದರೆ ಈ ಗ್ರಂಥ ಸಾರ್ಥಕವಾದಂತೆ.

●

ಅನುಬಂಧ

ಆಕರ ಗ್ರಂಥಗಳು ಮತ್ತು ವಿಷಯಮೂಲ :

1. ಡಾ॥ ಎಂ.ಹೆಚ್. ಕೃಷ್ಣರವರ ವಾರ್ಷಿಕ ವರದಿ - ಎಂ.ಎ.ಆರ್. 1936
2. ಡಾ॥ ಎಂ.ಹೆಚ್ ಕೃಷ್ಣರವರ ಲೇಖನ - ಪ್ರಬುದ್ಧ ಕರ್ನಾಟಕ - 20.3(59)
3. ಎಪಿಗ್ರಾಫಿಯ ಕರ್ನಾಟಿಕ - ಶಾಸನ ಸಂಪುಟಗಳು 3, 9, 11.
4. ಶಾಸನ ಸಂಗ್ರಹ ಸಂ : ಎಂ.ಎಂ. ಅಣ್ಣಿಗೇರಿ - ಆರ್. ಶೇಷಶಾಸ್ತ್ರಿ
5. ಕನ್ನಡ ಲಿಪಿಯ ಉಗಮ ಮತ್ತು ವಿಕಾಸ - ಎ.ವಿ. ನರಸಿಂಹಮೂರ್ತಿ
6. ಕನ್ನಡ ಲಿಪಿಶಾಸ್ತ್ರ - ಎಂ.ಜಿ. ಮಂಜುನಾಥ - ಜಿ.ಕೆ. ದೇವರಾಜ ಸ್ವಾಮಿ
7. ಶಾಸನ ಶಾಸ್ತ್ರ ಪ್ರವೇಶ - ಸಿ.ಪಿ.ಕೆ.
8. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ದ್ವಿತೀಯ ವರ್ಷದ ಎಂ.ಎ. ಕನ್ನಡ ಐಚ್ಛಿಕ ಶಾಸನ ಶಾಸ್ತ್ರದ ಸಿದ್ಧಪಾಠ.
9. ಪುರಾತತ್ವ ಶೋಧನೆ - ಡಾ॥ ಎಸ್. ಶ್ರೀಕಂಠಶಾಸ್ತ್ರಿ
10. ಕರ್ನಾಟಕ ಗೆಝೆಟಿಯರ್ - (ಕನ್ನಡ) ಭಾಗ - 1
11. ಗದ್ಯ ಕುಸುಮಾಂಜಲಿ (ಕನ್ನಡರತ್ನ ಪರೀಕ್ಷೆಯ ಪಠ್ಯಗ್ರಂಥ)
12. ಆಂಧ್ರಪ್ರದೇಶದ ಕನ್ನಡ ಶಾಸನಗಳು-1 (ಕನ್ನಡ ವಿಶ್ವವಿದ್ಯಾಲಯ, ಹಂಪಿ)
13. ದಿ ಆಕ್ಸ್‌ಫರ್ಡ್ ಸ್ಕೂಲ್ ಅಟ್ಲಾಸ್ (ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್)

ಪರಾಮರ್ಶನ ಸಾಹಿತ್ಯ :

1. ಕನ್ನಡ ಸಾಹಿತ್ಯದ ಪ್ರಾಚೀನತೆ - ಗೋವಿಂದ ಪೈ ರವರ 3 ಉಪನ್ಯಾಸಗಳು
2. ಮಾನವಿಕ ಕರ್ನಾಟಕ 2, 3 (72) - ಟಿ.ವಿ. ವೆಂಕಟಾಚಲಶಾಸ್ತ್ರಿಗಳ ಲೇಖನ
3. ಪ್ರಬುದ್ಧ ಕರ್ನಾಟಕ 51-3-(69). - ಕೆ.ವಿ. ರಮೇಶ್‌ರ ಲೇಖನ
4. ಶಬ್ದಾರ್ಥವಿಹಾರ - ಟಿ.ವಿ. ವೆಂಕಟಾಚಲಶಾಸ್ತ್ರೀ
5. ಮಾರ್ಗ - 3 - ಎಂ.ಎಂ. ಕಲಬುರ್ಗಿ
6. ಕರ್ನಾಟಕದ ಶಾಸನಗಳ ಸಾಂಸ್ಕೃತಿಕ ಅಧ್ಯಯನ - ಡಾ॥ ಎಂ. ಚಿದಾನಂದಮೂರ್ತಿ
7. ಹೊಯ್ಸಳ ಸಂಪದ : ಸಾ.ಶಿ. ಮರುಳಯ್ಯನವರ ಲೇಖನ (65ನೇ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನದ ಸ್ಮರಣ ಸಂಚಿಕೆ)

' ಶುಭವಾಗಲಿ '

ಹಿರಿಯ ಇತಿಹಾಸ ತಜ್ಞ ಡಾ. ಎಂ. ಎಚ್. ಕೃಷ್ಣ ಅವರು ೧೯೩೬ ರಲ್ಲಿ ಕನ್ನಡದ ಅತ್ಯಂತ ಹಳೆಯ ಶಾಸನವೆಂದು ಪ್ರಖ್ಯಾತಗೊಂಡಿರುವ 'ಹಲ್ಮಿಡಿ' ಶಾಸನವನ್ನು ಎಂ. ಎ. ಆರ್ ನಲ್ಲಿ ಪ್ರಕಟಿಸಿದರು. ಅಂದಿನಿಂದಲೂ ತೀರ್ಮಾನದ ಮಾತುಗಳನ್ನಾಡಿದ್ದೇವೆ ಎಂದು ಎಷ್ಟೇ ಹೆಮ್ಮೆಯಿಂದ ತಜ್ಞರು ಹೇಳಿಕೊಂಡರೂ, ಸವಾಲುಗಳನ್ನೆಸೆಯುತ್ತಲೇ ಬಂದಿರುವ ಹಲ್ಮಿಡಿ ಶಾಸನ ಕುರಿತಂತೆ ಮತ್ತೊಂದು ಸಾಹಸ ಪ್ರಯತ್ನ ಈ ಕೃತಿಯ ಮೂಲಕ ನಡೆಸಲಾಗಿದೆ.

ಹಲ್ಮಿಡಿ ಶಾಸನವನ್ನು ವಿವಿಧ ದೃಷ್ಟಿಕೋನಗಳಿಂದ ಅಧ್ಯಯನಮಾಡಿ, ಹನ್ನೊಂದು ಅಧ್ಯಾಯಗಳಲ್ಲಿ ಅವುಗಳನ್ನು ಅಡಕಗೊಳಿಸಿ, ಈ ಕಿರುಹೊತ್ತಗೆಯನ್ನು ಸಿದ್ಧಪಡಿಸಿರುತ್ತಾರೆ. ಲೇಖಕರೇ ಹೇಳಿಕೊಳ್ಳುವಂತೆ ಹಲ್ಮಿಡಿ ಗ್ರಾಮ, ಇತಿಹಾಸ, ರಾಜವಂಶ, ರಾಜಕೀಯ, ಶಾಸನ ಪರಿಚಯ ಇವೇ ಮುಂತಾದ ವಿವರಗಳನ್ನು ಏಕತ್ರಗೊಳಿಸಿ, ಜನಸಾಮಾನ್ಯರಿಗೆ ಒಂದೇಕಡೆ ಲಭ್ಯವಾಗುವಂತೆ ಮಾಡುವುದೇ ಈ ಕೃತಿಯ ಆಶಯವಾಗಿದೆ.

ಸುಲಭವಾಗಿ ತನ್ನೆಲ್ಲ ಗುಟ್ಟು ಬಿಟ್ಟುಕೊಡದ ಈ ಶಾಸನ ಇನ್ನೆಷ್ಟು ಜನ ವಿದ್ವಾಂಸರ ಅಧ್ಯಯನ ಬಯಸುತ್ತದೆಯೋ ಕಾದುನೋಡಬೇಕಾಗಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು

ಅಧ್ಯಕ್ಷರು